ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 11 ಗುರುವಾರ 2023

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 25 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

₹4



ಸಿದ್ದರಾಮಯ್ಯ ಭದ್ರಕೋಟೆಯಲ್ಲಿ ಅರೆಸೇನೆಯ ಬಿಗಿ ಪಹರೆ



ಮೈಸೂರು,ಮೇ 10 (ಎಂಟಿವೈ)– ಈ ಹಿಂದೆ ನಡೆದ ಚುನಾವಣೆಯಲ್ಲಿ ವರುಣ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಶಾಸಕ ಡಾ.ಯತೀಂದ್ರ ಅವರಿಗೆ ಅತಿ ಹೆಚ್ಚು ಮತ ದೊರೆತಿದ್ದ ಮತಗಟ್ಟೆಗೆ ಈ ಬಾರಿ ಶಸ್ತ್ರಸಜ್ಜಿತ ಅರೆ ಸೇನಾ ಪಡೆಯ ಪಹರೆ ನಿಯೋಜಿಸಲಾಗಿತ್ತು.

ಯಾವುದೇ ಬೂತ್‌ನಲ್ಲಿ ಒಂದೇ ಪಕ್ಷದ ಅಭ್ಯರ್ಥಿಗೆ ಶೇ.50ಕ್ಕಿಂತ ಹೆಚ್ಚು ಮತ ಲಭಿಸಿದ್ದರೆ, ಅಂತಹ ಮತಗಟ್ಟೆಗಳ ಮೇಲೆ ನಿಗಾ ಇಡಲು ನಿರ್ಧರಿಸಲಾಗಿತ್ತು. ಆ ಮತಗಟ್ಟೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆಯೊಂದಿಗೆ ಶಸ್ತ್ರಸಜ್ಜಿತ ಅರೆ ಸೇನಾ ಸಿಬ್ಬಂದಿಗಳನ್ನು ನಿಯೋಜಿಸಿ, ಮತಗಟ್ಟೆಗಳ ಬಳಿ ಬೇರೆ ಯಾರೂ ಬರದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ಇದರಿಂದ ವಯೋವೃದ್ಧರೂ, ವಿಕಲಚೇತನರು, ಅನಾರೋಗ್ಯ ಪೀಡಿತರನ್ನು ಮತದಾನ ಮಾಡಿಸಲು ಅವರ ಪೋಷಕರು ಕರೆತರಲು ಅವಕಾಶ ನಿರಾಕರಿಸಲಾಯಿತು. ಇದರಿಂದ ಮತ ಹಾಕಲು ಬಯಸಿದ್ದವರಿಗೆ ಮತ ಚಲಾಯಿಸಲು ಸಾಧ್ಯವಾಗಲಿಲ್ಲ ಎಂದು ಕೆಲವರು ಬೇಸರ ವ್ಯಕ್ತಪಡಿಸಿದರು. ವರುಣ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಈ ಹಿಂದಿನಿಂದಲೂ ಶಾಂತಿಯುತ ಮತದಾನ ನಡೆದಿದ್ದರೂ ಮೊದಲ ಬಾರಿಗೆ ಶಸ್ತ್ರಸಜ್ಜಿತ ಸಿಬ್ಬಂದಿ ಓಡಾಡಿದ್ದು ದಾಖಲೆ.

ವರುಣ ಕ್ಷೇತ್ರದ ಮತದಾರರ ಹಳೇ ಗುರುತಿನ ಚೀಟಿ ಒಪ್ಪದ ಮತಗಟ್ಟೆ ಸಿಬ್ಬಂದಿ

ಮೈಸೂರು, ಮೇ 10(ಎಂಟಿವೈ)– ಕ್ಷೇತ್ರ ಪುನರ್ ವಿಂಗಡಣೆಯಿಂದಾಗಿ ರೂಪುಗೊಂಡ ವರುಣ ಕ್ಷೇತ್ರದ ಬಹುತೇಕ ಗ್ರಾಮಗಳ ಗ್ರಾಮಸ್ಥರು 3–4 ದಶಕಗಳ ಹಿಂದೆಯೇ ಮಾಡಿಸಿಕೊಂಡಿರುವ ಮತದಾರರ ಗುರುತಿನ ಚೀಟಿ ಹೊಂದಿದ್ದು, ಆದರೆ, ಗುರುವಾರ ನಡೆದ ಮತದಾನದ ವೇಳೆ ಕೆಲವೆಡೆ ಹಳೆಯ ಗುರುತಿನ ಚೀಟಿಯನ್ನು ಮತಗಟ್ಟೆ ಸಿಬ್ಬಂದಿ ಪರಿಗಣಿಸದೇ ಇರುವುದು ಬೆಳಕಿಗೆ ಬಂದಿದೆ.

ಈ ಹಿಂದೆ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಗೆ ಸೇರಿದ್ದ ಹಲವು ಗ್ರಾಮಗಳು, ಈಗ ವರುಣ ಕ್ಷೇತ್ರದ ವ್ಯಾಪ್ತಿಗೆ ಬಂದಿರುವುದೇ ಹಳೆ ಗುರುತಿನ ಚೀಟಿಯನ್ನು ಮತಗಟ್ಟೆ ಸಿಬ್ಬಂದಿಗಳು ತಿರಸ್ಕರಿಸಲು ಕಾರಣವಾಗಿದೆ. ಗ್ರಾಮದ ಹೆಸರು, ಮತದಾರನ ಹೆಸರು, ಕ್ರಮಸಂಖ್ಯೆ, ವಿಳಾಸ ಸರಿಯಾಗಿದ್ದರೂ, ಗುರುತಿನ ಚೀಟಿಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಎಂದು ನಮೂದಾಗಿದೆ. ಇದರಿಂದ ವರುಣ ಕ್ಷೇತ್ರದ ಮತದಾನದ ಪ್ರಕ್ರಿಯೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಹೆಸರಿನ ಗುರುತಿನ ಚೀಟಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಮತಗಟ್ಟೆ ಸಿಬ್ಬಂದಿಗಳು ಆಕ್ಷೇಪ ವ್ಯಕ್ತಪಡಿಸಿರುವ ಘಟನೆ ನಡೆದಿದೆ.

ಮತದಾನ ಮಾಡಬೇಕಾದರೆ ಕಡ್ಡಾಯವಾಗಿ ಆಧಾರ್ ಕಾರ್ಡ್, ಚಾಲನಾ ಪರವಾನಗಿ ಸೇರಿದಂತೆ ಕೆಲ ದಾಖಲೆ ತರುವಂತೆ ಸೂಚಿಸುತ್ತಿದ್ದರು. ಇದರಿಂದ ಮತಗಟ್ಟೆಗೆ ಬಂದು ಸಾಕಷ್ಟು ಮಂದಿ ವಾಪಸಾಗುತ್ತಿದ್ದರು. ಇದರಿಂದ ಕೆಲವರಿಗೆ ಮತದಾನ ಮಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾದರೆ, ಮತ್ತಷ್ಟು ಮಂದಿಗೆ ವಿಳಂಬವಾಯಿತು. ಗ್ರಾಮ, ಮತದಾರರ ಪಟ್ಟಿಯಲ್ಲಿರುವಂತೆ ಮತದಾರರ ಹೆಸರು ಪರಿಪಕ್ವವಾಗಿದ್ದರೂ ಗುರುತಿನ ಚೀಟಿ ತಿರಸ್ಕರಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.



ಖ್ಯಾತ ಚಲನಚಿತ್ರ ನಟಿ ಮಾಳವಿಕಾ ಅವಿನಾಶ್ ಅವರು ಕೃಷ್ಣಮೂರ್ತಿಪುರಂನಲ್ಲಿರುವ ಗುಬ್ಬಚ್ಚಿ ಶಾಲೆ ಮತಗಟ್ಟೆಯಲ್ಲಿ ಮತ ಚಲಾಯಿಸಿದರು. ಈ ವೇಳೆ ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ಸಿದ್ದರಾಜು, ನಂ.ಶ್ರೀಕಂಠಕುಮಾರ್, ಸುಂದರ್, ಅಜಯ್ ಶಾಸ್ತ್ರಿ, ವಿಕ್ರಮ ಅಯ್ಯಂಗಾರ್, ಕೃಷ್ಣ, ಅರುಣ್, ರಾಜೇಶ್ ಇನ್ನಿತರರು ಹಾಜರಿದ್ದರು.



ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರು ಬುಧವಾರ ಕುವೆಂಪುನಗರ ವಾಟರ್ ಟ್ಯಾಂಕ್ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಜೊತೆಯಲ್ಲಿ ಡಿಸಿಸಿ ಮಾಧ್ಯಮ ವಕ್ತಾರ ಎಡತೊರೆ ನಿಂಗರಾಜ್, ಯುವ ಮುಖಂಡ ಸೌರಭ ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ಲಲಿತಾದ್ರಿಪುರ ಗ್ರಾಮದ ಮತಗಟ್ಟೆಯಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅವರು ಪತ್ನಿಯೊಂದಿಗೆ ಮತದಾನ ಮಾಡಿದರು.

ವೋಟರ್ ಐಡಿ ಕಾರ್ಡ್ ಮರೆತು ಬಂದ ಪ್ರಮೋದಾದೇವಿ ಒಡೆಯರ್

● ಮತಗಟ್ಟೆ ಬಳಿ ಅರ್ಧ ಗಂಟೆ ಕಾಯುತ್ತಾ ಕುಳಿತರು ● ಅರಮನೆ ಸಿಬ್ಬಂದಿ ಐಡಿ ಕಾರ್ಡ್ ತಂದ ಬಳಿಕ ಮತ ಚಲಾವಣೆ ● ಶ್ರೀಕಾಂತ ಶಾಲೆಯ ಮತಗಟ್ಟೆ ಸಂಖ್ಯೆ 179ರಲ್ಲಿ ರಾಜವಂಶಸ್ಥರಿಂದ ಮತದಾನ



ಪ್ರಮೋದಾದೇವಿ ಒಡೆಯರ್ ಅವರು ಮತ ಚಲಾಯಿಸಿ, ಸುದ್ದಿಗಾರರೊಂದಿಗೆ ಮಾತನಾಡಿದರು.



ರಾಜವಂಶಸ್ಥರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಅವರ ಪತ್ನಿ ತ್ರಿಷಿಕಾ ಕುಮಾರಿ ಒಡೆಯರ್ ಅವರು ಅಗ್ರಹಾರದಲ್ಲಿರುವ ಶ್ರೀಕಾಂತ ಶಾಲೆಯಲ್ಲಿ ಮತದಾನ ಮಾಡಿದರು.

ಮೈಸೂರು,ಮೇ 10(ಎಂಟಿವೈ)– ಮತದಾರರ ಗುರುತಿನ ಚೀಟಿ ಮರೆತು ಬಂದಿದ್ದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಮತ ಚಲಾಯಿಸಲು ಮತಗಟ್ಟೆ ಬಳಿ ಅರ್ಧ ಗಂಟೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಬಳಿಕ ಅರಮನೆ ಸಿಬ್ಬಂದಿ ಮತದಾರರ ಗುರುತಿನ ಚೀಟಿ ತಂದ ಬಳಿಕ ಪ್ರಮೋದಾದೇವಿ ಮತ ಚಲಾಯಿಸಿದರು.

ಕೆ.ಆರ್.ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ಅಗ್ರಹಾರದ ಶ್ರೀಕಾಂತ ಪ್ರೌಢಶಾಲೆಯಲ್ಲಿ ಸ್ಥಾಪಿಸಿದ್ದ ಮತಗಟ್ಟೆ ಸಂಖ್ಯೆ 179ರಲ್ಲಿ ಮತದಾನ ಮಾಡಲು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಬೆಳಗ್ಗೆ ಆಗಮಿಸಿದರು. ಅರಮನೆಯಿಂದ ಹೊರಡುವ ವೇಳೆ ಅಧಿಕಾರಿಗಳು ನೀಡಿದ್ದ ಮತದಾರರ ಕ್ರಮ ಸಂಖ್ಯೆ ಹಾಗೂ ಮಾಹಿತಿಯುಳ್ಳ ಚೀಟಿಯನ್ನಷ್ಟೇ ತಂದಿದ್ದರು. ಮತಗಟ್ಟೆಗೆ ಆಗಮಿಸಿದ ಪ್ರಮೋದಾದೇವಿ ಒಡೆಯರ್ ಅವರು ಸರದಿ ಸಾಲಿನಲ್ಲಿ ನಿಂತಿದ್ದರು. ಈ ವೇಳೆ ಅಧಿಕಾರಿಗಳು ನೀಡಿದ್ದ ಸ್ಲಿಪ್‌ನೊಂದಿಗೆ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ತೋರಿಸುವಂತೆ ಮತಗಟ್ಟೆ ಸಿಬ್ಬಂದಿ ಕೇಳಿದರು. ಗುರುತಿನ ಚೀಟಿ ಮರೆತಿರುವುದಾಗಿ ಮನವರಿಕೆ ಮಾಡಿಕೊಂಡ ಪ್ರಮೋದಾದೇವಿ ಒಡೆಯರ್ ಅವರು, ಸಹಾಯಕರನ್ನು ಅರಮನೆಗೆ ಕಳುಹಿಸಿದರು. ಬಳಿಕ ಮತಗಟ್ಟೆ ಆವರಣದಲ್ಲಿ ಕಾರಿನಲ್ಲೇ ಅರ್ಧ ಗಂಟೆಗಳ ಕಾಲ ಕುಳಿತಿದ್ದರು.

ಕಾರಿನಲ್ಲಿ ಒಬ್ಬರೇ ಕುಳಿತಿದ್ದ ಪ್ರಮೋದಾದೇವಿ ಒಡೆಯರ್ ಅವರನ್ನು ಕಂಡ ಶಾಲೆಯ ಕೆಲ ವಿದ್ಯಾರ್ಥಿನಿಯರು ಕುತೂಹಲದಿಂದ ಮಾತನಾಡಿಸಲು ಬಂದರು. ವಿದ್ಯಾರ್ಥಿನಿಯರೊಂದಿಗೆ ಮಾತನಾಡಿದ ಪ್ರಮೋದಾದೇವಿ ಒಡೆಯರ್ ವಿದ್ಯಾರ್ಥಿಗಳೊಂದಿಗೆ ಕುಶಲೋಪರಿ ವಿಚಾರಿಸಿ, ಶಾಲೆಯ ಬಗ್ಗೆ ಮಾಹಿತಿ ಪಡೆದರು. ನಿಮ್ಮೊಂದಿಗೆ ಮಾತನಾಡಿದ್ದು ನಮಗೆ ಖುಷಿ ತಂದಿದೆ ಎಂದು ವಿದ್ಯಾರ್ಥಿಗಳು ರಾಜವಂಶಸ್ಥರಿಗೆ ಹೇಳುವ ಮೂಲಕ ಸಂಭ್ರಮಿಸಿದರು.

ಕಡ್ಡಾಯವಾಗಿ ಮತದಾನ ಮಾಡಿ: ಸಹಾಯಕರು ಓಟರ್ ಐಡಿ ಕಾರ್ಡ್ ತಂದು ಕೊಟ್ಟ ಬಳಿಕ ಪ್ರಮೋದಾದೇವಿ ಒಡೆಯರ್ ಮತ ಚಲಾಯಿಸಿದರು. ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸಂವಿಧಾನದಲ್ಲಿ ಎಲ್ಲರಿಗೂ ಮತದಾನ ಮಾಡಲು ಅವಕಾಶ ನೀಡಲಾಗಿದೆ. ಆ ಅವಕಾಶವನ್ನು ಬಳಸಿಕೊಳ್ಳಬೇಕು. ಮತದಾನ ಮಾಡುವುದು ನಮ್ಮ ಕರ್ತವ್ಯವೂ ಆಗಿದೆ. ಜನ ಯಾವ ಪಕ್ಷ ಅಥವಾ ಯಾವ ಅಭ್ಯರ್ಥಿಗಾದರೂ ಮತ ಹಾಕಲಿ. ಆದರೆ ಮತದಾನದಿಂದ ದೂರ ಉಳಿಯಬಾರದು. ಮತ ಚಲಾಯಿಸದೇ ನಮ್ಮ ಹಕ್ಕು ಪ್ರತಿಪಾದಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ 5 ವರ್ಷಕ್ಕೊಮ್ಮೆ ಬರುವ ವಿಧಾನಸಭಾ ಚುನಾವಣೆಯಲ್ಲಿ ಎಲ್ಲರೂ ಮತದಾನ ಮಾಡಬೇಕು ಎಂದು ಸಲಹೆ ನೀಡಿದರು.

ಅಧಿಕಾರಿಗಳೇ ನೀಡಿದ್ದ ಸ್ಲಿಪ್: ಇದುವರೆಗೂ ಚುನಾವಣೆ ವೇಳೆ ರಾಜಕೀಯ ಪಕ್ಷಗಳ ಮುಖಂಡರು ಮತದಾನ ಸ್ಲಿಪ್ ನೀಡುತ್ತಿದ್ದರು. ಆದರೆ, ಈ ಬಾರಿ ಅಧಿಕಾರಿಗಳೇ ಮತದಾನದ ಸ್ಲಿಪ್ ನೀಡಿದ್ದರು. ಆ ಸ್ಲಿಪ್‌ನಲ್ಲಿ ಮತಗಟ್ಟೆ ಸಂಖ್ಯೆ, ಕ್ರಮ ಸಂಖ್ಯೆ, ಹೆಸರು ಸೇರಿದಂತೆ ಎಲ್ಲಾ ಮಾಹಿತಿ ನಮೂದಾಗಿತ್ತು. ಇದರಿಂದ ಸ್ಲಿಪ್ ಒಂದೆ ಸಾಕೆಂದು ಭಾವಿಸಿದ್ದೆ. ಆದರೆ ಮತಗಟ್ಟೆಯಲ್ಲಿ ಗುರುತಿನ ಚೀಟಿ ಬೇಕೆಂದು ಕೇಳಿದರು. ಆದ್ದರಿಂದ ಮನೆಯಿಂದ ಗುರುತಿನ ಚೀಟಿ ತಂದು ಮತದಾನ ಮಾಡುವುದಕ್ಕೆ ತಡವಾಯಿತು. ಸಾಫ್ಟ್‌ಕಾಪಿ ತೋರಿಸಬಹುದಾಗಿತ್ತು. ಆದರೆ ಮೊಬೈಲ್ ತೆಗೆದುಕೊಂಡು ಹೋಗಬಾರದೇನೋ ಎಂದು ಭಾವಿಸಿದ್ದೆ. ಹಾಗಾಗಿ ತಡವಾಯಿತು ಎಂದು ಸ್ಪಷ್ಟನೆ ನೀಡಿದರು.

ಯುವಜನ ನಿರಾಸಕ್ತಿ ತೋರಬಾರದು. ನಮ್ಮ ಧ್ವನಿ ಹೇಳಬೇಕು. ನಾವು ಏನನ್ನೂ ಹೇಳದೇ ಏನೂ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇಂದಿನ ಯುವ ಪೀಳಿಗೆ ಬದಲಾಗಿದೆ. ನಮ್ಮ ಪೀಳಿಗೆಗಿಂತ ಇಂದಿನ ಪೀಳಿಗೆಯ ಯುವ ಜನರು ಅನುಕೂಲ ಮಾಡಿಕೊಡಿ ಎಂದು ನೇರವಾಗಿ ಕೇಳುತ್ತಾರೆ. ಚುನಾಯಿತ ಪ್ರತಿನಿಧಿಗಳು ಮತದಾರರ ಬೇಡಿಕೆಗಳನ್ನು ಬಗೆಹರಿಸಬೇಕು. ಜನಪ್ರತಿನಿಧಿಗಳು ಅಭ್ಯರ್ಥಿಯಾದಾಗಿನಿಂದ ಗೆದ್ದ ನಂತರವೂ ತನ್ನದೇ ಆದ ಜವಾಬ್ದಾರಿ ಇರುತ್ತದೆ. ಆ ಜವಾಬ್ದಾರಿಯನ್ನು ಜನರು ತೋರಿಸಬೇಕು. ಸುಮ್ಮನೆ ಆಯ್ಕೆಯಾದರೂ, ಅವರು ಏನೂ ಕೆಲಸ ಮಾಡಲಿಲ್ಲ ಎನ್ನುವುದಕ್ಕಿಂತ, ಅವರಿಂದ ಕೆಲಸ ಮಾಡಿಸಿಕೊಳ್ಳಲು ಪ್ರಯತ್ನ ಮಾಡಬೇಕು.

ಯದುವೀರ್ ದಂಪತಿಯಿಂದ ಮತದಾನ: ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಮತದಾನ ಮಾಡಿ ಅರಮನೆಗೆ ವಾಪಸಾದ ಬಳಿಕ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ತ್ರಿಷಿಕಾ ಕುಮಾರಿ ಒಡೆಯರ್ ಅವರು ಶ್ರೀಕಾಂತ ಶಾಲೆಗೆ ಆಗಮಿಸಿ ಸರದಿ ಸಾಲಿನಲ್ಲಿ ನಿಂತುಕೊಂಡೇ ಮತ ಚಲಾಯಿಸಿದರು.

ಅನಾರೋಗ್ಯದ ನಡುವೆಯೂ ಮತ ಚಲಾಯಿಸಿದ ಪ್ರಿಯಾಂಕ ಖರ್ಗೆ ಪತ್ನಿ ಶ್ರುತಿ ಖರ್ಗೆ



ಕಲಬುರಗಿ: ಜಿಲ್ಲೆಯ ಚಿತ್ತಾಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕ ಖರ್ಗೆ ಅವರು ತಮ್ಮ ಅನಾರೋಗ್ಯಪೀಡಿತ ಪತ್ನಿ ಹಾಗೂ ಕುಟುಂಬದವರೊಂದಿಗೆ ಆಗಮಿಸಿ, ಮತ ಚಲಾಯಿಸಿದರು.

ಕ್ಷೇತ್ರದ ಗುಂಡುಗುರ್ತಿ ಗ್ರಾಮದ ಬೂತ್ ನಂ.26 ರಲ್ಲಿ ಅವರು ಮತ ಚಲಾಯಿಸಿದ್ದು, ಪ್ರಿಯಾಂಕ ಖರ್ಗೆ ಅವರ ಪತ್ನಿ ಶ್ರುತಿ ಬ್ರೈನ್ ಟ್ಯೂಮರ್‌ನಿಂದ ಬಳಲುತ್ತಿದ್ದು, ದೆಹಲಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚುನಾವಣೆಯಲ್ಲಿ ಮತ ಚಲಾಯಿಸಲೇಬೇಕೆಂಬ ಉದ್ದೇಶದಿಂದ ಶ್ರುತಿ ಅವರು ವಿಮಾನದಲ್ಲಿ ಆಗಮಿಸಿ, ಮತದಾನ ಮಾಡಿದರು.



ಮೈಸೂರು ನಗರಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್ ತಮ್ಮ ಕುಟುಂಬದ ಸದಸ್ಯರೊಂದಿಗೆ ಸೇಂಟ್ ಮೇರಿಸ್ ಶಾಲೆಯಲ್ಲಿ ಮತದಾನ ಮಾಡಿದರು.



ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಹಾಗೂ ಅವರ ಪತ್ನಿ ಕನಕ ರತ್ನ ಬುಧವಾರ ಮೈಸೂರಿನ ಶಾರದ ವಿಲಾಸ ಕಾಲೇಜಿನ ಮತಗಟ್ಟೆ ವೊಂದರಲ್ಲಿ ತಮ್ಮ ಹಕ್ಕು ಚಲಾಯಿಸಿ, ಸಂಭ್ರಮಪಟ್ಟರು.

ಅಮೆರಿಕಾದಿಂದ ಮತ ಹಾಕಲು ಬಂದರೆ ಹೆಸರೇ ನಾಪತ್ತೆ!

ದಾವಣಗೆರೆ, ಮೇ 10–ಬೆಂಗಳೂರಿನ ಯುವತಿ ಮೇಘನಾ ಅಮೆರಿಕದಿಂದ ಬಂದು ಮತ ಚಲಾಯಿಸಿ, ಪ್ರಜಾಪ್ರಭುತ್ವದ ಕರ್ತವ್ಯ ನಿರ್ವಹಿಸಿದ್ದೇನೆ ಎಂದು ಸಂತಸಪಟ್ಟರೆ, ಮತ ಚಲಾಯಿಸಲೆಂದೇ ಅಮೆರಿಕಾದಿಂದ ದಾವಣಗೆರೆಗೆ ಆಗಮಿಸಿದ್ದ ಸಾಫ್ಟ್‌ವೇರ್ ಇಂಜಿನಿಯರ್ ಮತ ಚಲಾಯಿಸಲು ಸಾಧ್ಯವಾಗದೇ ತೀವ್ರ ನಿರಾಸೆಗೊಂಡಿದ್ದಾರೆ.



ರಾಘವೇಂದ್ರ ಕಮಲಾಕರ ಸೇಠ್ ಎಂಬ ಸಾಫ್ಟ್‌ವೇರ್ ಇಂಜಿನಿಯರ್ ಕಳೆದ 15 ವರ್ಷಗಳಿಂದ ಅಮೆರಿಕಾದಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಈ ಚುನಾವಣೆಯಲ್ಲಿ ಮತ ಚಲಾಯಿಸಬೇಕೆಂದು ಅವರು ಆಗಮಿಸಿದಾಗ ಮತದಾರರ ಪಟ್ಟಿಯಲ್ಲಿ ಅವರ ಹೆಸರು ಕೈಬಿಟ್ಟಿದ್ದರಿಂದ ಮತ ಚಲಾಯಿಸಲಾಗದೇ ನಿರಾಶರಾಗಿದ್ದಾರೆ. ಚುನಾವಣೆಯಲ್ಲಿ ಮತ ಚಲಾಯಿಸಲೇಬೇಕೆಂದು ಲಕ್ಷಾಂತರ ರೂ. ಖರ್ಚು ಮಾಡಿಕೊಂಡು 14 ಸಾವಿರ ಕಿ.ಮೀ. ದೂರದಿಂದ ಬಂದರೂ ಪ್ರಯೋಜನವಾಗಿಲ್ಲ. ನಾನು ಒಂದು ಪಕ್ಷದ ಜೊತೆ ಗುರುತಿಸಿಕೊಂಡಿದ್ದೇನೆ. ಈ ಕಾರಣಕ್ಕಾಗಿಯೇ ಮತದಾನದ ಪಟ್ಟಿಯಲ್ಲಿ ನನ್ನ ಹೆಸರನ್ನು ಡಿಲೀಟ್ ಮಾಡಲಾಗಿದೆ ಎಂಬ ಶಂಕೆ ನನಗಿದೆ ಎಂದು ಅವರು ಮಾಧ್ಯಮಗಳೊಂದಿಗೆ ಆರೋಪಿಸಿದರು.



ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಮತ್ತು ಹಿರಿಯ ರೈತ ಮುಖಂಡ ಕುರುಬೂರು ಶಾಂತಕುಮಾರ್ ಅವರು ತಮ್ಮ ಟಿ.ನರಸೀಪುರ ತಾಲೂಕಿನ ಕುರುಬೂರು ಗ್ರಾಮದಲ್ಲಿ ಮತ ಚಲಾಯಿಸಿದರು.



ಚಾಮರಾಜನಗರ ಪ್ರಜಾಪಿತ ಬ್ರಹ್ಮ ಕುಮಾರಿ ಈಶ್ವರೀಯ ವಿವಿ ಮುಖ್ಯ ಸಂಚಾಲಕಿ ದಾನೇಶ್ವರೀಜೀ ಪ್ರಥಮ ಬಾರಿಗೆ ಮತ ಚಲಾಯಿಸಿದರು.

ಮತ ಚಲಾಯಿಸಿದ ಮಂಗಳಮುಖಿಯರು

ಮೈಸೂರು,ಮೇ 10(ಜಿಎ)–ಪ್ರಜಾಪ್ರಭುತ್ವದ ಹಬ್ಬ ಮತದಾನದಲ್ಲಿ ಮಂಗಳಮುಖಿಯರು ಸಂಭ್ರಮದಿಂದ ಭಾಗಿಯಾಗಿ, ಮತದಾನ ಮಾಡಿದರು. ಮತದಾನ



ಎಲ್ಲರ ಹಕ್ಕಾಗಿದ್ದು, ನಮಗೂ ಅವಕಾಶ ಕಲ್ಪಿಸಿ ಎಂದು ಮೈಸೂರಲ್ಲಿ ಮಂಗಳಮುಖಿಯರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದರು. ಅದರಂತೆ ಅವರಿಗೆ ಅವಕಾಶ ಕಲ್ಪಿಸಲಾಗಿತ್ತು. ಈ ಬಾರಿ ಹೆಚ್ಚಿನ ಮಂಗಳಮುಖಿಯರು ಮತದಾನ ಮಾಡಿದ್ದಾರೆ. ಈ ಸಂಬಂಧ ಸೆವೆನ್ ರೈನ್‌ಬೋ ಸಂಸ್ಥೆಯ ಪ್ರಣತಿ ಪ್ರಕಾಶ್ ಮಾತನಾಡಿ, 30 ವರ್ಷಗಳ ನಂತರ ನಾನು ಇದೇ ಮೊದಲ ಬಾರಿ ಮತದಾನ ಮಾಡಿದ್ದೇನೆ. ನಾನು ಮನೆ ಬಿಟ್ಟು ಬಂದ ಹಿನ್ನೆಲೆಯಲ್ಲಿ ದಾಖಲೆಗಳು ಇರಲಿಲ್ಲ. ಈ ಬಾರಿ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡ ಪರಿಣಾಮ ನಮ್ಮ ಸಮುದಾಯದವರಿಗೆ ಇತರೆ ಎಂಬ ವಿಭಾಗದಲ್ಲಿ ಮತ ಚಲಾಯಿಸಲು ಅವಕಾಶ ನೀಡಿದ್ದಾರೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ನಮ್ಮ ಸಮುದಾಯದವರಲ್ಲಿ ಅನೇಕರಿಗೆ ಇನ್ನೂ ಓಟರ್ ಐಡಿ ದೊರಕಿಲ್ಲ. ಸಿಕ್ಕಿರುವವರಿಗೆ ಹೆಸರುಗಳು ಬದಲಾವಣೆಯಾಗಿಲ್ಲ. ಇದರಿಂದ ಅನೇಕರು ಆಧಾರ್ ಕಾರ್ಡ್ ಸೇರಿದಂತೆ ಇತರೆ ದಾಖಲಾತಿಗಳನ್ನು ತೋರಿಸಿ ಮತದಾನ ಮಾಡಿದ್ದಾರೆ ಎಂದರು.

ಎಲ್.ಅದಿತಿಗೆ ಶೇ. 92 ಅಂಕ



ಮೈಸೂರು, ಮೇ 10–ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಲ್.ಅದಿತಿ ಶೇ.92ರಷ್ಟು ಅಂಕ ಗಳಿಸಿ ತೇರ್ಗಡೆ ಹೊಂದಿದ್ದು, ಕನ್ನಡದಲ್ಲಿ 125, ಇಂಗ್ಲಿಷ್–92, ಹಿಂದಿ–99, ಗಣಿತ–83, ವಿಜ್ಞಾನ–86 ಮತ್ತು ಸಮಾಜ ವಿಜ್ಞಾನದಲ್ಲಿ–90 ಅಂಕಗಳನ್ನು, ಶೇ.92 ಪಡೆದಿದ್ದಾಳೆ. ಈಕೆ ಹಿನಕಲ್‌ನ ಸ್ನೇಹಲತಾ, ಎಂ.ಸಿ.ಲೋಕೇಶ್ ಅವರ ಪುತ್ರಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.5.2023 ಗುರುವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023 ರಿಂದ 24.05.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3ಗಂಟೆವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಪದ ಸಂಸ್ಕೃತಿ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಮೈಸೂರು ಉಮೇಶ್, 8.40 ಪಂಪನ ಪೆಂಪು–ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ– ಜಿ. ಶಾಂತಕುಮಾರ್, 9.00 ವೀಣೆಯ ಬೆಡಗು–ನಾದದ ಸೊಬಗು–ಪರಿಕಲ್ಪನೆ ಮತ್ತು ಪ್ರಸ್ತುತಿ– ಮೈಸೂರು ರಾಜಲಕ್ಷ್ಮಿ, 10.00 ಎಂ.ವೆಂಕಟೇಶಾಚಾರ್ –ಹಾಡುಗಾರಿಕೆ, 11.00 ಮಿಶ್ರ ಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ– ಬಿ.ಎನ್.ಮಂಜುಳಾ, 1.00 ರಂಗಗೀತೆಗಳು–ತಿಲೋತ್ತಮೆ ನಾಟಕದ ಹಾಡುಗಳು, 1.20 ಭಾವಗೀತೆಗಳು, 4.00 ಜನಪದ ಸಂಗೀತ–ದೊಡ್ಡ ರಾಚಪ್ಪ ಮತ್ತು ಸಂಗಡಿಗರು, 5.00 ಮಿಶ್ರಮಾಧುರ್ಯ, 6.55 ಕೃಷಿರಂಗ–ಕಿಸಾನ್‌ವಾಣಿ–ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಹೆಚ್.ಎಂ. ರವಿಕುಮಾರ್ ಅವರೊಂದಿಗೆ ಸಂದರ್ಶನ, 8.00 ಯುವವಾಣಿ–ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿ :** 43ನೇ ವರ್ಷದ ಮೂರ್ತಿ ಪ್ರತಿಷ್ಠಾ ಮಹೋತ್ಸವ, ಶ್ರೀ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮೀಜಿ ಸನ್ನಿಧಿಯಲ್ಲಿ ಮಹಾನ್ಯಾಸಪೂರ್ವಕ ಏಕದಶವಾರ ರುದ್ರಾಭಿಷೇಕ, ಅಲಂಕಾರ ಗಳು, ವಿಶೇಷ ಪೂಜೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಶ್ರೀ ರುದ್ರೈಕಾದಶಿನಿ ಹೋಮ ಪ್ರಾರಂಭ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಸಂಜೆ 6.30ಕ್ಕೆ ವಿದ್ವಾನ್ ಎನ್. ಶ್ರೀನಾಥ್ ಅವರಿಂದ ಹಾಡುಗಾರಿಕೆ, ರಾತ್ರಿ 9ಕ್ಕೆ ಶ್ರೀ ಪರಮೇಷ್ಠಿ ಗುರುಗಳವರ ಸನ್ನಿಧಿಯಲ್ಲಿ ಶ್ರೀ ರುದ್ರಕ್ರಮಾರ್ಚನೆ, ವೇದಘೋಷ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಶೃಂಗೇರಿ ಶ್ರೀ ಶಂಕರಮಠ, ಫೋರ್ಟ್ ಮೊಹಲ್ಲಾ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಸುರಭಿ ಗಾನಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಸಂಗೀತಾಮೃತ ವರ್ಷಿಣಿ ರಾಗಾಧಾರಿತ–ಮನೋಧರ್ಮ ಸಂಗೀತ ಶಿಬಿರ, ಸ್ಥಳ: ಸುರಭಿ ಗಾನಕಲಾಮಂದಿರ, ಗೋಕುಲಂ 3ನೇ ಹಂತ, ಸಂಜೆ 4.30ಕ್ಕೆ.

■ **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಾಂಜಲಿಯ ಯೋಗ ಸೂತ್ರಗಳು– ಸಮಾಧಿ ಪಾಠ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಗೋಕುಲಂ, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 11 ಗುರುವಾರ 2023

ಸಂಪುಟ: 44 | ಸಂಚಿಕೆ: 25 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮತದಾನೋತ್ತರ ಸಮೀಕ್ಷೆ: ಕೈ-ಕಮಲಕ್ಕೆ ಕಗ್ಗಂಟು, ಬೇಕಾಗಬಹುದು ಜೆಡಿಎಸ್ ನಂಟು!

ಚುನಾವಣೆ ಸಂಸ್ಥೆಗಳು, ಚಾನೆಲ್‌ಗಳ ಸಮೀಕ್ಷಾ ವರದಿಯನ್ವಯ ಕೈ ಮೇಲುಗೈ ಇಲ್ಲವೇ ಕಮಲ ಕಮಾಲ್ ಸಾಧ್ಯತೆ; ಅತಂತ್ರ ವಿಧಾನಸಭೆ ತಳ್ಳಿಹಾಕಲಾಗದು

ಮೈಸೂರು, ಮೇ 10–ಭಾರೀ ಕುತೂಹಲ ಕೆರಳಿಸಿದ್ದ ಕರ್ನಾಟಕ ವಿಧಾನಸಭೆ ಚುನಾವಣೆ ಮತಸಮರ ಈಗ ಮುಗಿದಿದೆ. ಇನ್ನೇನಿದ್ದರೂ ಗೆಲುವಿನ ಲೆಕ್ಕಾಚಾರ. ಮತದಾನೋತ್ತರ ಸಮೀಕ್ಷೆಗಳು ಈಗ ಹೊರಬಿದ್ದಿದ್ದು, ಕರ್ನಾಟಕದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳಿವೆ. ಕರ್ನಾಟಕದ ಮತದಾರರು ಈಗ ಅಭ್ಯರ್ಥಿಗಳ ಹಣೇಬರಹ ಬರೆದಿದ್ದು, ಅದೀಗ ಮತಯಂತ್ರದಲ್ಲಿ ಅಡಗಿದೆ. ಮೇ 13ಕ್ಕೆ ಪಕ್ಷಗಳ ಹಾಗೂ ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ.

ಹಲವಾರು ಸಂಸ್ಥೆಗಳು ಚುನಾವಣೆ ಪೂರ್ವ ಹಾಗೂ ಚುನಾವಣೋತ್ತರ ಸಮೀಕ್ಷೆಗಳನ್ನು ನಡೆಸಿದ್ದು, ಬಹುತೇಕ ಸಮೀಕ್ಷೆಗಳು ಅತಂತ್ರ ವಿಧಾನಸಭೆ ನಿರ್ಮಾಣವಾಗಲಿದೆ ಎಂದು ಬಿಂಬಿಸಿವೆ. ಕಾಂಗ್ರೆಸ್ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ ಎಂದು ಸಾಕಷ್ಟು ಸಮೀಕ್ಷಾ ವರದಿಗಳು ತಿಳಿಸಿವೆ. ಆಡಳಿ ತಾರೂಢ ಬಿಜೆಪಿ ಮತ್ತೆ ಅಧಿಕಾರಕ್ಕೇರಲು ಸರ್ವ ಪ್ರಯತ್ನ ನಡೆಸಿದ್ದರೆ, ಬಿಜೆಪಿಯಿಂದ ಅಧಿಕಾರ ಕಸಿದು ಕೊಳ್ಳಲು ಕಾಂಗ್ರೆಸ್ ಕೂಡ ಎಲ್ಲಾ ರೀತಿಯ ಪ್ರಯತ್ನಗಳನ್ನು ನಡೆಸಿತ್ತು. ಕೆಲವು ಸಂಸ್ಥೆಗಳು, ಚಾನೆಲ್‌ಗಳ ಸಮೀಕ್ಷೆಯಲ್ಲಿ ಕಾಂಗ್ರೆಸ್ ಸರಳ ಬಹುಮತ ಗಳಿಸುವ ಇಲ್ಲವೇ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮುವ ಸಾಧ್ಯತೆ ಇದೆ. ಮತ್ತೆ ಕೆಲವು ಸಮೀಕ್ಷೆಗಳಲ್ಲಿ ಬಿಜೆಪಿಗೆ ಸರಳ ಬಹುಮತ ಇಲ್ಲವೇ ಅದು ಮುನ್ನಡೆ ಸಾಧಿಸಬಹುದು ಎಂದು ಹೇಳಲಾಗಿದೆ. ಆದರೆ ಸ್ಪಷ್ಟ ಬಹುಮತ ದೊರೆಯುವ ಬಗ್ಗೆ ಸ್ಪಷ್ಟತೆ ಇಲ್ಲ. ಒಟ್ಟು 224 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆದಿದೆ. ಬಹುಮತಕ್ಕೆ ಬೇಕಾಗಿರುವ ಮ್ಯಾಜಿಕ್ ಸಂಖ್ಯೆ 113 ಆಗಿದ್ದು, ಈ ಗೆಲುವಿನ ರೇಖೆಯನ್ನು ಯಾರು ದಾಟುತ್ತಾರೆ ಎಂಬುದು ನಿಗೂಢವಾಗಿದೆ. ಮೇ 13ರಂದು ಈ ಸಸ್ಪೆನ್ಸ್‌ಗೆ ತೆರೆ ಬೀಳಲಿದೆ.

ನಾನಾ ಸಂಸ್ಥೆಗಳ ಸಮೀಕ್ಷಾ ವರದಿಗಳು

ಸಂಸ್ಥೆ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್	ಇತರೆ
ಟಿವಿ 9 ಸಿ ವೋಟರ್	83–95	100–112	21–29	2–6
ಸುವರ್ಣ-ಜನ್ ಕಿ ಬಾತ್	94–117	91–106	14–24	0–2
ಪೋಲ್ ಸ್ಟ್ರಾಟ್	88–98	99–109	21–26	2–4
ವಿಸ್ತಾರ	85–93	86–96	28–36	6–9
ಟೈಮ್ಸ್ ನೌ	75–85	103–113	15–23	2–3
ನ್ಯೂಸ್‌ನೇಷನ್/ಸಿಜಿಎಸ್	104–114	76–86	11–21	0–3
ರಿಪಬ್ಲಿಕ್	85–100	84–108	24–32	0–3
ರಿಥ ನ್ಯೂಸ್/ಮ್ಯಾಟ್ರಿಜ್	79–94	103–118	25–33	0–2
ನವಭಾರತ್	78–92	106–120	20–26	2–4
ಇಂಡಿಯಾ ಟಿವಿ	80–90	110–120	20–24	1–3
ರಾಜ್‌ನೀತಿ	90–100	82–92	20–26	2–4
ಚಾಣಕ್ಯ	82–92	110–120	10–14	1–3
ಪೋಲ್ ಆಫ್ ಪೋಲ್ಸ್	84–97	95–108	22–30	2–5

ಚುನಾವಣೋತ್ತರ ಸಮೀಕ್ಷೆ ಶೇ.100ರಷ್ಟು ಸರಿಯಾಗಿ ಇರುವುದಿಲ್ಲ

ಹಾವೇರಿ, ಮೇ 10–ಕರ್ನಾಟಕ ವಿಧಾನಸಭೆ ಚುನಾವಣೆಗೆ ಮತದಾನ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಇದೀಗ ಚುನಾವಣೋತ್ತರ ಸಮೀಕ್ಷೆಗಳು ಹೊರಬೀಳುತ್ತಿವೆ. ಇಂತಹ ಸಮೀಕ್ಷೆಗಳಲ್ಲಿ ಕಾಂಗ್ರೆಸ್ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ ಎಂಬ ಮಾಹಿತಿಗಳು ಬರುತ್ತಿದ್ದು, ಈ ಬಗ್ಗೆ ಶಿಗ್ಗಾಂವಿಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ.


ಚುನಾವಣೋತ್ತರ ಸಮೀಕ್ಷೆಗಳು ಶೇಕಡ 100ರಷ್ಟು ಸರಿಯಾಗಿ ಇರುವುದಿಲ್ಲ. ನೈಜ ಫಲಿತಾಂಶ ಬರುವಾಗ ಪ್ಲಸ್-ಮೈನಸ್ ಆಗುತ್ತವೆ. ರಾಜ್ಯದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಸಂಪೂರ್ಣ ಬಹುಮತ ಬರುತ್ತದೆ. ಎಕ್ಸಿಟ್ ಪೋಲ್ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ.

ಹೊಸ ಸರ್ಕಾರದ ಭವಿಷ್ಯ ನಿರ್ಧರಿಸಿದ ಮತದಾರರು, ಸಣ್ಣಪುಟ್ಟ ಘಟನೆಗಳ ಹೊರತುಪಡಿಸಿದರೆ

ಶಾಂತಿಯುತ ಶೇ.72.81 ಮತದಾನ



ಸಿಎಂ ಬಸವರಾಜ ಬೊಮ್ಮಾಯಿ ಕುಟುಂಬ ಸದಸ್ಯರು



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್



ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಕುಟುಂಬ ಸದಸ್ಯರು



ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕುಟುಂಬ

ಬೆಂಗಳೂರು, ಮೇ 10(ಕೂಂಶಿ)– ಕರ್ನಾಟಕದಲ್ಲಿ ಹೊಸ ಸರ್ಕಾರ ರಚನೆಗೆ ರಾಜ್ಯದ ಮತದಾರರು ಇಂದು ಭವಿಷ್ಯ ಬರೆದಿದ್ದಾರೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಇಂದು ಒಂದೇ ಹಂತದಲ್ಲಿ ನಡೆದ ಚುನಾವಣೆ ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ, ಶಾಂತಿಯುತವಾಗಿ ನಡೆಯಿತು. ಒಂದೆಡೆ ರಾಜಕೀಯ ಪಕ್ಷಗಳ ಅಬ್ಬರ ಮತ್ತೊಂದೆಡೆ ಕೇಂದ್ರ ಚುನಾವಣಾ ಆಯೋಗ ಮತದಾನಕ್ಕೆ ಅಭೂತಪೂರ್ವ ಪ್ರೋತ್ಸಾಹ ನೀಡಿದ ಹಿನ್ನೆಲೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಮತದಾರರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಒಟ್ಟಾರೆ ಶೇಕಡ 72.81 ರಷ್ಟು ಮತದಾನವಾಗಿದ್ದು, ಕಳೆದ ಬಾರಿಗಿಂತ ಶೇಕಡವಾರಿನಲ್ಲಿ ಮತದಾನದ ಪ್ರಮಾಣ ಹೆಚ್ಚಿದೆ. ಬಳ್ಳಾರಿ ಗ್ರಾಮಾಂತರದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳ ನಡುವೆ ನಡೆದ ಗಲಭೆ ಮತ್ತು ಕಲ್ಲು ತೂರಾಟದಿಂದ ಒಬ್ಬರು ಗಾಯಗೊಂಡಿದ್ದಾರೆ. ಇದನ್ನು ಹೊರತುಪಡಿಸಿದರೆ, ದೊಡ್ಡ ಪ್ರಮಾಣದಲ್ಲಿ ಅಹಿತಕರ ಘಟನೆ ಜರುಗಿಲ್ಲ. ಆದರೆ ಮತದಾನ ಮಾಡಲು ಬಂದವರು, ನಂತರ ಮತದಾನ ಮಾಡಿ ಹೋದ ಇಬ್ಬರು ಸಾವನ್ನಪ್ಪಿದ್ದಾರೆ. ಒಬ್ಬರು ಮತಗಟ್ಟೆಯಲ್ಲೇ ಕೊನೆಯುಸಿರೆಳೆದ ಘಟನೆ ಜರುಗಿದೆ. ರಾಜ್ಯದ ಕೆಲವೆಡೆ ವಧು-ವರರು ಮದುವೆ ಮುಗಿಯುತ್ತಿದ್ದಂತೆ ತಮ್ಮ ಮತ ಹಕ್ಕು ಚಲಾಯಿಸಿದ್ದಾರೆ. ಮತ್ತೊಂದೆಡೆ ಹೆರಿಗೆಗೆ ತೆರಳುವುದಕ್ಕೂ ಮುನ್ನ ಮತ ಚಲಾಯಿಸಿ, ಆಸ್ಪತ್ರೆಯಲ್ಲಿ ಮಗು ಹೆತ್ತಿದ್ದಾರೆ. ಇಂದು ಮತ್ತು ನಾಳೆ ಮಧ್ಯಾಹ್ನದ ನಂತರ ಮಳೆಯಾಗುವ ಸಾಧ್ಯತೆ ಇದ್ದು, ಹವಾಮಾನ ಇಲಾಖೆ ನೀಡಿದ ವರದಿ ಹಿನ್ನೆಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಧ್ಯಾಹ್ನದ ವೇಳೆಗೆ ಬಿರುಸಿನ ಮತದಾನ ನಡೆದು, ಮಧ್ಯಾಹ್ನ 3 ಗಂಟೆ ವೇಳೆಗೆ ಶೇಕಡ 58ರಷ್ಟು ಮತ ದಾನವಾಗಿತ್ತು. ಈ ಬಾರಿ ಹಿರಿಯ ನಾಗರಿಕರು ಅತೀ ಉತ್ಸಾಹದಿಂದ ಮತಗಟ್ಟೆಗೆ ಬಂದು ಮತ ಚಲಾಯಿಸಿದರೆ, ಇದೇ ಪ್ರಥಮ ಬಾರಿಗೆ ಮತದಾನದ ಹಕ್ಕು ಪಡೆದ ಯುವ ಜನತೆ ಅದೇ ಉತ್ಸಾಹದಲ್ಲಿ ತಮ್ಮ ಮತ ಚಲಾಯಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ.ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಜಗದೀಶ್ ಶೆಟ್ಟರ್, ಸಿದ್ದರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ● 10ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಶೇ.75.07 ಮತದಾನ



ಸಿದ್ದರಾಮಯ್ಯ, ಡಾ.ಯತೀಂದ್ರ, ಸ್ಮಿತಾ ರಾಕೇಶ್



ಜಿ.ಟಿ.ದೇವೇಗೌಡರು ಪತ್ನಿ ಲಲಿತಾ, ಪುತ್ರಿಯೊಂದಿಗೆ ಮತ ಚಲಾಯಿಸಿದರು.



ವಿ.ಸೋಮಣ್ಣ ದಂಪತಿ



ಎಲ್.ನಾಗೇಂದ್ರ, ಕುಟುಂಬದವರಿಂದ ಮತ ಚಲಾವಣೆ



ಟಿ.ಎಸ್.ಶ್ರೀವತ್ಸ



ತನ್ವೀರ್ ಸೇಠ್



ಕವೀಶ್‌ಗೌಡ, ಡಾ.ಪ್ರಗ್ಯ ದಂಪತಿ



ಕೆ.ಹರೀಶ್‌ಗೌಡ ದಂಪತಿ ಮತ ಚಲಾವಣೆ



ಕುಟುಂಬದವರೊಂದಿಗೆ ಹೆಚ್.ಕೆ.ರಮೇಶ್

ಮೈಸೂರು, ಮೇ 10(ಆರ್‌ಕೆ)–ಇಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಶೇ.75.07ರಷ್ಟು ಶಾಂತಿಯುತ ಮತದಾನ ನಡೆದಿದೆ.

ಮಂಡ್ಯ	ಶೇ.84.36
ಹಾಸನ	ಶೇ.81.70
ಚಾ.ನಗರ	ಶೇ.81.62
ಕೊಡಗು	ಶೇ.74.74

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ 2,905 ಮತಗಟ್ಟೆಗಳಲ್ಲೂ ಬೆಳಗ್ಗೆ 7 ಗಂಟೆಗೆ ಮತದಾನ ಕಾರ್ಯ ಆರಂಭವಾಯಿತಾದರೂ, ವಿದ್ಯುನ್ಮಾನ ಮತಯಂತ್ರಗಳು ಕೈಕೊಟ್ಟ ಕಾರಣ ಕೆಲವು ಮತಗಟ್ಟೆಗಳಲ್ಲಿ ಅರ್ಧ ಗಂಟೆ ತಡವಾಗಿ ಮತದಾನ ಪ್ರಕ್ರಿಯೆ ಆರಂಭವಾಯಿತು. ಮೈಸೂರು ಜಿಲ್ಲೆಯಲ್ಲಿ 230 ಇತರರು, 13,38,637 ಮಹಿಳೆಯರು ಹಾಗೂ 13,17,121 ಪುರುಷ ಮತದಾರರಿದ್ದು, ಬೆಳಗ್ಗೆಯಿಂದಲೇ ಮತಗಟ್ಟೆಗಳಿಗೆ ತೆರಳಿ ಉತ್ಸಾಹದಿಂದ ಸಾಲುಗಟ್ಟಿ ನಿಂತು ಮತದಾನ ಮಾಡಿದರು. ಪ್ರತಿ ಮತದಾರರ ಮನೆಗೂ ಈ ಬಾರಿ ಅವರ ಹೆಸರು, ಮತಗಟ್ಟೆ ಸಂಖ್ಯೆ, ಸ್ಥಳ, ಭಾಗದ ಸಂಖ್ಯೆ, ಕ್ರಮಸಂಖ್ಯೆ ಇರುವ ಚೀಟಿಗಳನ್ನು ಜಿಲ್ಲಾಡಳಿತದಿಂದಲೇ ವಿತರಿಸಲಾಗಿತ್ತು. ಹಾಗಾಗಿ ಎಲ್ಲಿಯೂ ತಾವು ಮತ ಚಲಾಯಿಸುವ ಕೇಂದ್ರ ಹುಡುಕಬೇಕಾದ ತೊಂದರೆ ಉಂಟಾಗಲಿಲ್ಲ. ಬೆಳಗ್ಗೆ 6.30 ರಿಂದ 6.50 ಗಂಟೆವರೆಗೆ ಮತಗಟ್ಟೆ ಅಧ್ಯಕ್ಷೀಯ ಅಧಿಕಾರಿ, ಮತಗಟ್ಟೆ ಅಧಿಕಾರಿಗಳು ವಿದ್ಯುನ್ಮಾನ ● 10ನೇ ಪುಟಕ್ಕೆ

ಅಭ್ಯರ್ಥಿಗಳ ಭವಿಷ್ಯ ಇವಿಎಂಗಳಲ್ಲಿ ಭದ್ರ

ಮೇ 13ರಂದು ಮತ ಎಣಿಕೆ, ಮಧ್ಯಾಹ್ನದ ವೇಳೆಗೆ ಫಲಿತಾಂಶ ಅಭ್ಯರ್ಥಿಗಳ ಅದೃಷ್ಟ ಅನಾವರಣ

ಮೈಸೂರು, ಮೇ 10(ಆರ್‌ಕೆ)– 2023ರ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಮತದಾನ ಪ್ರಕ್ರಿಯೆ ಮುಗಿದಿದ್ದು, ಅಭ್ಯರ್ಥಿಗಳ ಭವಿಷ್ಯ ಈಗ ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳಲ್ಲಿ ಭದ್ರವಾಗಿದೆ.

ಮತದಾರ ಪ್ರಭು ಯಾರಿಗೆ ಒಲಿದಿದ್ದಾನೆ ಎಂಬುದು ಮೇ 13ರಂದು ಬಹಿರಂಗವಾಗಲಿದೆ. ಇಂದು ಸಂಜೆ 6 ಗಂಟೆಗೆ ಮತದಾನ ಪ್ರಕ್ರಿಯೆ ಮುಕ್ತಾಯಗೊಂಡಿದ್ದು,



ಮತಗಟ್ಟೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಮತ ಚಲಾವಣೆಯಾಗಿರುವ ವಿದ್ಯುನ್ಮಾನ ● 10ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ತಾಯಿ : ಇವತ್ತಾದ್ರೂ ನಿನ್ನ ಕೊಠಡಿಯನ್ನು ಕ್ಲೀನ್ ಮಾಡೋ, ಎಷ್ಟೊಂದು ಕಸ

ಮಗ : ಸಾರಿಯಮ್ಮ, ಇವತ್ತು ಬೀದಿ ಸ್ವಚ್ಛತಾ ಕಾರ್ಯಕ್ರಮವಿದೆ. ನಾನೂ ಹೋಗಬೇಕು.

ಮೈಸೂರು ಮಿತ್ರ

ಗುರುವಾರ, 11 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕೆಲಸ ಸಾಧಿಸಲು ಇಚ್ಛಿಸುವವರು ಬಿಗುಮಾನ ಬಿಡಬೇಕು – ರಾಮಾಯಣ

ವೇದ ಸುಳ್ಳಾದರೂ { ಅಣ್ಣೆ ಸೊಪ್ಪಾದರೂ ಸರಿ
ಗಾದೆ ಸುಳ್ಳಾಗದು { ಲೆಕ್ಕದ ಮುದ್ದೆ ಉಣಬೇಕು

ನಿಮ್ಮ ಪತ್ರಗಳು

ಜನಮಾನಸದಲ್ಲಿ ಉಳಿದ ದಸರಾ ಆನೆ ಬಲರಾಮ

ಮಾನ್ಯರೆ,



ಇತ್ತೀಚೆಗೆ ವಯೋಸಹಜ ಖಾಯಿಲೆಯಿಂದ ಮೃತಪಟ್ಟ ದಸರಾ ಆನೆ ಬಲರಾಮ (67) ಸುಮಾರು 25 ವರ್ಷಗಳ ಕಾಲ ವಿಶ್ವ ವಿಖ್ಯಾತ ದಸರಾ ಮಹೋತ್ಸವದಲ್ಲಿ ಭಾಗವಹಿಸಿ 14 ಬಾರಿ 750 ಕೆ.ಜಿಯ ಚಿನ್ನದ ಅಂಬಾರಿ ಹೊತ್ತು ತನ್ನ ಗಜ–ಗಾಂಭೀರ್ಯದ ನಡಿಗೆ ಮೂಲಕ ಮೈಸೂರು ದಸರಾ ವೀಕ್ಷಕರ ಜನ–ಮಾನಸದಲ್ಲಿ ಅಚ್ಚಳಿಯದಂತೆ ಮಾಡಿದೆ. ಭಾರತದ ಆನೆಯ ಸರಾಸರಿ ವಯಸ್ಸು 60 ರಿಂದ 70 ವರ್ಷ, 8.10 ಅಡಿ ಎತ್ತರದ, ಸುಮಾರು 4,535 ಕೆ.ಜಿ ತೂಕದ ಬಲರಾಮ ಕಾದಾಟದಲ್ಲಿ ಎಡ ಭಾಗದ ಕಣ್ಣು ಕಳೆದುಕೊಂಡಿದ್ದರೂ, ಒಂದೇ ಕಣ್ಣಿನ ದೃಷ್ಟಿಯಿಂದ 5 ಕಿ.ಮೀ ದೂರ 750 ಕೆ.ಜಿಯ ಚಿನ್ನದ ಅಂಬಾರಿ ಹೊತ್ತು ಸಾಗುತ್ತಿದ್ದುದು ಜನರ ಹರ್ಷೋದ್ಗಾರಕ್ಕೆ ಪಾತ್ರವಾಗಿತ್ತು. ದಸರಾ ಆನೆಗಳಲ್ಲೇ ಅತ್ಯಂತ ಸೌಮ್ಯ ಸ್ವಭಾವದ ಬಲರಾಮನಿಗೂ, ಮೈಸೂರು ಜನರಿಗೂ ಅವಿನಾಭಾವ ಸಂಬಂಧವಿದೆ.

–ಬೂಕನಕೆರೆ ವಿಜೇಂದ್ರ, ಮೈಸೂರು

ಅನನ್ಯ ಸಾಧ್ಯತೆಗಳ ಪರಿಚಯ ಇರಲಿ

ಮಾನ್ಯರೆ,

ಸಾಮಾನ್ಯವಾಗಿ ಮಕ್ಕಳಿಗೆ ಚಿಕ್ಕವರಿದ್ದಾಗಿಂದಲೂ ಡಾಕ್ಟರ್, ಇಂಜಿನಿಯರ್ ಆಗಬೇಕು ಎಂದು ಪೋಷಕರು ಹೇಳುತ್ತಾರೆ. ಆದರೆ ಪ್ರಸ್ತುತ ಕಲಿಯುಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ನೂರಾರು ಸಾಧ್ಯತೆಗಳು ಹುಟ್ಟಿಕೊಂಡಿವೆ. ಪಿಯುಸಿ ನಂತರ ವಿದ್ಯಾರ್ಥಿಗಳಿಗೆ ಫ್ಯಾಷನ್ ಡಿಸೈನಿಂಗ್, ಇವೆಂಟ್ ಮ್ಯಾನೇಜ್‌ಮೆಂಟ್, ಆ್ಯಂಕರ್ ಹೀಗೆ ಒಬ್ಬೊಬ್ಬರಿಗೆ ಒಂದೊಂದು ವಿಷಯದ ಮೇಲೆ ಆಸಕ್ತಿ ಇರುತ್ತದೆ. ಹಾಗಾಗಿ ಪೋಷಕರು ಕೇವಲ ಸಮಾಜದಲ್ಲಿ ಹೆಚ್ಚಿನ ಜನರು ಯಾವುದಕ್ಕೆ ಮಣೆ ಹಾಕುತ್ತಾರೆ ಅನ್ನುವ ಬದಲು ಮಕ್ಕಳ ಆಸಕ್ತಿ ಅರಿತು ಅವರನ್ನು ಪ್ರೋತ್ಸಾಹಿಸಬೇಕು. ಹೀಗೆ ಮಾಡಿದಾಗ ಅವರು ಜೀವನದಲ್ಲಿ ಯಶಸ್ವಿಯಾಗುವ ಸಾಧ್ಯತೆಗಳು ಹೆಚ್ಚು. ಮತ್ತೆ ವಿದ್ಯಾರ್ಥಿಗಳು ನೂರಾರು ಜನರ ಸಲಹೆ ಕೇಳುವ ಬದಲು, ಆ ಕ್ಷೇತ್ರದಲ್ಲಿ ತಜ್ಞರ ಸಲಹೆಯನ್ನು ಪಡೆದು ಕೊನೆಗೆ ಸರಿಯಾದ ಆಯ್ಕೆ ಮಾಡಬೇಕು. ಇಷ್ಟವಿಲ್ಲದ ಕೋರ್ಸ್‌ಗೆ ಸೇರಿಸಿದಾಗ ಕೊನೆಗೆ ಅವರ ಪರಿಸ್ಥಿತಿ ಎಂದಿನಂತೆ ಪ್ರತಿವರ್ಷಕ್ಕೆ ಡಿಗ್ರಿ ಮುಗಿಸಿಕೊಂಡು ಲಕ್ಷಾಂತರ ಯುವಕ ಯುವತಿಯರಲ್ಲಿ ಕೆಲವರಿಗೆ ಮಾತ್ರ ಉದ್ಯೋಗ ದೊರೆತರೆ, ಇನ್ನುಳಿದವರು ನಿರುದ್ಯೋಗಿಗಳಾಗಿ ಉಳಿದಿರುವ ವರದಿಗಳನ್ನು ನಾವು ನೋಡಿದ್ದೇವೆ. ಹೇಗೆ ನಾವು ಒಂದು ಬಟ್ಟೆ ಕೊಳ್ಳುವಾಗ ಹತ್ತಾರು ಬಾರಿ ಯೋಚಿಸುತ್ತೇವೆ. ಭವಿಷ್ಯದ ವಿಷಯದಲ್ಲಿ ವಿದ್ಯಾರ್ಥಿಗಳು ಪೋಷಕರು ಮತ್ತು ತಜ್ಞರೊಂದಿಗೆ ಚರ್ಚಿಸಿ ಸರಿಯಾದ ಆಯ್ಕೆ ಮಾಡಿಕೊಳ್ಳಬೇಕು.

–ಆನಂದ ಜೇವೂರ್, ಕಲಬುರಗಿ

ಡಾ. ರಾಜಕುಮಾರ್ ಸಿನಿ ನಟರಿಗೆ ಆದರ್ಶ

ಮಾನ್ಯರೆ,

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕನ್ನಡ ಚಲನಚಿತ್ರ ರಂಗದ ಹಲವು ನಟ ನಟಿಯರು ರಾಜಕೀಯ ಪಕ್ಷದ ಪರವಾಗಿ ಹಾಗೂ ಅಭ್ಯರ್ಥಿಗಳ ಪರವಾಗಿ ಅದ್ದೂರಿಯಾಗಿ ಪ್ರಚಾರ ನಡೆಸಿದ್ದಾರೆ. ಹಾಗೆ ರಾಜಕೀಯ ಮತ್ತು ಸಿನಿಮಾ ರಂಗದ ಹಿಂದಿನ ದಿನಗಳನ್ನು ಮೆಲುಕು ಹಾಕುವುದಾದರೆ ಕನ್ನಡದ ನಟಸಾರ್ವಭೌಮ ಡಾ. ರಾಜಕುಮಾರ್ ಅವರಿಗೆ ರಾಜಕೀಯಕ್ಕೆ ಬರಲು ಅನೇಕ ಅವಕಾಶಗಳು ಮನೆ ಬಾಗಿಲಿಗೆ ಬಂದಿದ್ದವು. ಸರಳ ವ್ಯಕ್ತಿತ್ವವುಳ್ಳ ರಾಜಕುಮಾರ್ ನಾನು ಜನರ ಮನಸ್ಸಿನಲ್ಲಿ ಅದ್ಭುತ ಸ್ಥಾನ ಪಡೆದಿದ್ದೇನೆ. ತಾತ್ಕಾಲಿಕವಾದ ರಾಜಕೀಯ ಸ್ಥಾನಮಾನಗಳು ನನಗೆ ಬೇಡ ಎಂದು ತಿರಸ್ಕರಿಸಿದ್ದರು.

ಇಂತಹ ಆದರ್ಶ ವ್ಯಕ್ತಿತ್ವವನ್ನು ಹೊಂದಿರುವ ಈ ನಾಡಿನಲ್ಲಿ ಇಂದು ರಾಜಕೀಯ ಹಾಗೂ ಚಿತ್ರರಂಗ ಎರಡು ಒಂದೇ ಆಗಿದೆ. ಪ್ರತಿಯೊಬ್ಬ ನಟರಿಗೂ ಅವರ ಅಭಿಮಾನಿಗಳ ಮನಸ್ಸಿನಲ್ಲಿ ವಿಶೇಷ ಸ್ಥಾನಮಾನವಿದೆ. ಆದರೆ ಈಗಿನ ನಟ–ನಟಿಯರು ಒಂದು ರಾಜಕೀಯ ಪಕ್ಷದ ಪರವಾಗಿ ಪ್ರಚಾರ ನಡೆಸುವುದರಿಂದ ಕೆಲವು ಅಭಿಮಾನಿಗಳ ಮನಸ್ಸಿಗೆ ಬೇಸರ ಉಂಟು ಮಾಡುತ್ತದೆ. ಇದೇ ರೀತಿ ಮುಂದುವರೆದರೆ ರಾಜಕೀಯ ಹಾಗೂ ಸಿನಿಮಾ ರಂಗ ಎರಡು ಒಂದೇ ಆಗಲು ಬಹಳ ಸಮಯ ಬೇಕಿಲ್ಲ. ಪ್ರಚಾರ ನಡೆಸುವುದು ರಾಜಕೀಯಕ್ಕೆ ಬರುವುದು ವೈಯಕ್ತಿಕ ವಿಷಯ. ಆದರೂ ಡಾ.ರಾಜಕುಮಾರ್ ಅವರನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು ಎಂಬುದು ನನ್ನ ಆಶಯ.

–ಆದರ್ಶ್ ಹೆಚ್ ಆರ್, ಮಾನಸಗಂಗೋತ್ರಿ, ಮೈಸೂರು

ಸ್ವಾಗತಾರ್ಹ ತೀರ್ಪು

ಮಾನ್ಯರೆ,

ಪರಸ್ಪರ ಒಪ್ಪಿಗೆ ವಿಚ್ಛೇಧನಕ್ಕೆ ಸಂಬಂಧಪಟ್ಟಂತೆ, ಸರ್ವೋಚ್ಚ ನ್ಯಾಯಾಲಯ ನ್ಯಾಯಾಲಯ ಇತ್ತೀಚೆಗೆ ನೀಡಿರುವ ತೀರ್ಪು ಸ್ವಾಗತಾರ್ಹವಾಗಿದೆ. ಹಿಂದೂ ವಿವಾಹ ಕಾಯ್ದೆ 1955 ರ ಸೆಕ್ಷನ್ 13(ಬಿ)(2) ರ ಪ್ರಕಾರ, ಪರಸ್ಪರ ಒಪ್ಪಿಗೆಯ ವಿವಾಹ ವಿಚ್ಛೇದನ ಪಡೆಯಲು ಆರು ತಿಂಗಳು ಕಾಯುವುದು ಅಗತ್ಯವಾಗಿತ್ತು. ವಿಚ್ಛೇದನ ಬಯಸಿ, ಅರ್ಜಿ ಸಲ್ಲಿಸಿದ ಅದೆಷ್ಟೋ ದಂಪತಿಗಳಿಗೆ ಇದರಿಂದ ಬಹಳಷ್ಟು ತೊಂದರೆಯಾಗುತ್ತಿತ್ತು. ಗಂಡನ ಮನೆಯಲ್ಲಿ ಒಂದು ನಿಮಿಷವೂ ಇರಲಾರದ ಪರಿಸ್ಥಿತಿ ಹೆಂಡತಿಯರಿಗೆ ಇದ್ದರೆ, ಪುರುಷರಿಗೂ ಸಹ ಇಂತಹುದೆ ಪರಿಸ್ಥಿತಿ ಇರುತ್ತಿತ್ತು. ಆದರೆ, ಹಿಂದೂ ವಿವಾಹ ಕಾಯ್ದೆ ಪ್ರಕಾರ ಅಂತಹ ದಂಪತಿಗಳು ವಿವಾಹವಾದ ದಿನದಿಂದ ಕನಿಷ್ಠ ಪಕ್ಷ ಒಂದು ವರ್ಷಗಳ ಕಾಲ ಬೇರೆ ಬೇರೆಯಾಗಿ ವಾಸಿಸುತ್ತಿರಬೇಕು (ಸೆಕ್ಷನ್ 13ಃ (1) ಹಾಗೂ ಅರ್ಜಿ ಸಲ್ಲಿಸಿದ ನಂತರ 6 ತಿಂಗಳ ಕಾಯುವುದು ಕಡ್ಡಾಯವಾಗಿತ್ತು (waiting period) (13ಃ(2)) ಇದರ ಮುಖ್ಯ ಉದ್ದೇಶ ದಂಪತಿಗಳ ನಡುವೆ ಸಾಮರಸ್ಯ ಮೂಡಿಸಿ, ಅವರು ಮತ್ತೆ ಒಂದಾಗಿ ಬಾಳುವ ಅವಕಾಶ ಕಲ್ಪಿಸುವುದೇ ಆಗಿದೆ. ಆದರೆ ಇದರಿಂದ ಸಾಕಷ್ಟು ಅನಾನುಕೂಲಗಳು ಸಹಾ ಉಂಟಾಗುತ್ತಿದ್ದವು.

ವಿಷಮ ದಾಂಪತ್ಯದಲ್ಲಿ ಬೇಯುತ್ತಿರುವ ಅನೇಕ ಪತಿ–ಪತ್ನಿಯರು ಶಾಶ್ವತವಾಗಿ ತಮ್ಮ ವೈವಾಹಿಕ ಸಂಬಂಧಗಳನ್ನು ಕಡಿದುಕೊಳ್ಳಲು ಕಾನೂನಿನ ಮೊರೆ ಹೋಗುವುದು ಹೆಚ್ಚುತ್ತಿದೆ. ಅದೂ ಅಲ್ಲದೇ ಪರಸ್ಪರ ಒಪ್ಪಿಗೆ ಮೇರೆಗೆ ಅರ್ಜಿ ಸಲ್ಲಿಸಿದರೆ, ವಿಚ್ಛೇದನೆ ಬೇಗ ದೊರಕುವುದರಿಂದ ಅನೇಕರು ಹಿಂದೂ ವಿವಾಹ ಕಾಯ್ದೆ ಸೆಕ್ಷನ್ 13(ಬಿ) ಅಡಿಯಲ್ಲಿ ಅರ್ಜಿ ಸಲ್ಲಿಸುವ ಪರಿಪಾಠ ಹೆಚ್ಚುತ್ತಿದೆ. ಈ ಎಲ್ಲಾ ಭಾವನಾತ್ಮಕ ಹಾಗೂ ಕಾನೂನಾತ್ಮಕ ಅಂಶಗಳನ್ನು ಪರಿಗಣಿಸಿದ ಸಂಜಯ್ ಕಿಶನ್ ಕೌಲ್ ನೇತೃತ್ವದ ಸರ್ವೋಚ್ಚ ನ್ಯಾಯಾಲಯದ ವಿಭಾಗೀಯ ಪೀಠ ಸಂವಿಧಾನದ 142ನೇ ವಿಧಿಯಡಿ ದತ್ತವಾದ ಅಧಿಕಾರ ಚಲಾಯಿಸಿ, ಆರು ತಿಂಗಳ ಕಾಯುವ ಅವಧಿಯನ್ನು ತೆಗೆದುಹಾಕಿರುವುದು ಸಮರ್ಥನೀಯವಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಪ್ರಜಾಪ್ರಭುತ್ವ ಹಬ್ಬವೆಂದರೆ ಹಣ, ಹೆಂಡ, ಕೋಳಿ, ಸೀರೆ, ಕುಕ್ಕರ್ ಹಂಚಿ ಆಚರಿಸುವುದಾ...!







ಕರ್ನಾಟಕದ ನೂತನ ವಿಧಾನಸಭೆಯನ್ನು ಆಯ್ಕೆ ಮಾಡಲು 16 ನೇ ಬಾರಿ ನಡೆದ ಚುನಾವಣೆ ಬುಧವಾರ ತಾನೇ ಮುಕ್ತಾಯವಾಗಿದೆ. ರಾಜ್ಯದ ಒಟ್ಟು ಮತದಾರರ ಸಂಖ್ಯೆ 5, 21, 73, 579. ಇವರಲ್ಲಿ 2.62 ಕೋಟಿ ಪುರುಷರು ಮತ್ತು 2.59 ಕೋಟಿ ಮಹಿಳೆಯರು. ಇನ್ನು ಅಭ್ಯರ್ಥಿಗಳ ಸಂಖ್ಯೆಯನ್ನು ತೆಗೆದುಕೊಂಡರೆ 2430 ಪುರುಷರು ಮತ್ತು 185 ಮಹಿಳೆಯರು, ಒಟ್ಟು 2615 ಮಂದಿ ಕಣದಲ್ಲಿ ಇದ್ದಾರೆ. ಈ ಬಾರಿ ಅರ್ಹ ಮತದಾರರಲ್ಲಿ ಶೇಕಡಾ 70 ರಷ್ಟು ಮತ ಚಲಾವಣೆ ಮಾಡಿದ್ದಾರೆ ಎಂದು ಚುನಾವಣಾ ಆಯೋಗದ ಮತ ಚಲಾವಣಾ ಪ್ರಮಾಣವನ್ನು ದಾಖಲಿಸುವ ಮೂಲಗಳು ತಿಳಿಸಿವೆ. ಈ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ಮತದಾನದ ಪ್ರಮಾಣ 2018 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಗಳಲ್ಲಿ ನಡೆದ ಮತದಾನಕ್ಕಿಂತ ಸ್ವಲ್ಪ ಕಡಿಮೆಯಾಗಿದೆ. ಕಳೆದ ಚುನಾವಣೆಗಳಲ್ಲಿ ದಾಖಲಾದ ಶೇಕಡಾ 72.13, 1952 ರಿಂದ ನಡೆದ 15 ಚುನಾವಣೆಗಳಲ್ಲಿ ಅತೀ ಹೆಚ್ಚಿನ ಪ್ರಮಾಣದ ಮತದಾನವಾಗಿತ್ತು.

ಮತದಾರರು ಏತಕ್ಕಾಗಿ ಮತ ಚಲಾಯಿಸುತ್ತಾರೆ ಅಥವಾ ಏಕೆ ಚಲಾಯಿಸುವುದಿಲ್ಲ ಎಂಬುದು ತೀರಾ ಮೂಲಭೂತವಾದ ಪ್ರಶ್ನೆ. ಕೆಲ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತದಾನ ನಡೆದರೆ ಮತ್ತೆ ಕೆಲ ಕ್ಷೇತ್ರಗಳಲ್ಲಿ, ಅದರಲ್ಲೂ ನಗರ ಪ್ರದೇಶಗಳಲ್ಲಿ ಮತದಾನ ಪ್ರಕ್ರಿಯೆಯಲ್ಲಿ ನಿರೀಕ್ಷಿತ ಉತ್ಸಾಹವಾಗಲೀ, ಭಾಗವಹಿಸುವಿಕೆಯಾಗಲೀ ಕಾಣಲಿಲ್ಲವೇಕೆ? ಕಳೆದ ಚುನಾವಣೆಗಳಲ್ಲಿ ಶೇಕಡಾ 56ರಷ್ಟು ಇದ್ದ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 28 ಮತ ಕ್ಷೇತ್ರಗಳಲ್ಲಿ ಈ ಬಾರಿಯೂ ಮತದಾನದ ಪ್ರಮಾಣದಲ್ಲಿ ಏರಿಕೆಯಾಗಲಿಲ್ಲವೇಕೆ? ಸಮೀಕ್ಷೆಯೊಂದರ ಪ್ರಕಾರ ಗ್ರಾಮೀಣ ನೆರೆಹೊರೆಯಲ್ಲಿರುವ 3–4 ಮತಕ್ಷೇತ್ರಗಳನ್ನು ಹೊರತುಪಡಿಸಿ ನಗರ ಕೇಂದ್ರ ಭಾಗದಲ್ಲಿರುವ ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ಕಡಿಮೆ ಇದೆ. ಈ ನಗರದಲ್ಲಿರುವ ಅನೇಕರು, ವಿಶೇಷವಾಗಿ ಐ.ಟಿ. ಉದ್ಯೋಗಿಗಳು ಹೊರ ರಾಜ್ಯದವರಿರಬಹುದು. ಆದರೂ ಚುನಾವಣೆಗಳಲ್ಲಿ ಇಷ್ಟೊಂದು ನಿರುತ್ಸಾಹವೇಕೆ? ಯಾರೇ ಅಧಿಕಾರಕ್ಕೆ ಬರಲಿ, ಅನೇಕ ನಗರವಾಸಿಗಳು ಅನುಕೂಲಿ ಬದುಕನ್ನು ನಡೆಸಲು ಅಗತ್ಯವಾದ ಸೌಲಭ್ಯಗಳನ್ನು ಈಗಾಗಲೇ ಪಡೆದಿರುವುದರಿಂದಲೋ, ಅಭಿವೃದ್ಧಿ ತರುವ ಎಲ್ಲ ಅನುಕೂಲಗಳು ಅವರಿಗೆ ಲಭಿಸಿರುವುದರಿಂದಲೋ, ಸರ್ಕಾರಿ ವಲಯದ ಮೇಲೆ ಅವರ ಅವಲಂಬನೆ ತೀರಾ ಕಡಿಮೆಯಿದ್ದು, ಪ್ರಾಯಶ ಚುನಾವಣೆಗಳಲ್ಲಿ ಭಾಗವಹಿಸುವುದು ಅವರ ಪ್ರಾಧಾನ್ಯತೆಗಳಲ್ಲಿ ಸೇರದಿರ ಬಹುದು. ಬೆಂಗಳೂರಲ್ಲದೆ ಇತರ ನಗರಗಳಲ್ಲೂ ಮತದಾನದ ಪ್ರಮಾಣ ಇಳಿಮುಖವಾಗಿರುವುದು ಕಂಡು ಬರುತ್ತಿದೆ.

ನಗರಗಳ ಅನೇಕ ಬಡಾವಣೆಗಳಲ್ಲಿ ಮನೆ–ಮನೆಗಳಿಗೆ ಹೋಗಿ ಪ್ರಚಾರ ಮಾಡದೆ ರೋಡ್ ಶೋಗಳಿಗೆ ಅತೀ ಪ್ರಾಶಸ್ತ್ಯ ನೀಡಿದೆ. ಈ ಬಗೆಯ ಚುನಾವಣಾ ಪ್ರಚಾರದ ವೈಖರಿಯಿಂದ ಜನ ಜೀವನ ಅಸ್ತವ್ಯಸ್ತವಾಗಿದ್ದು, ಅದರ ಮೇಲೆ ವೆಚ್ಚವಾದ ಸಾರ್ವಜನಿಕ ಸಂಪನ್ಮೂಲಗಳು ಅನೇಕರಲ್ಲಿ ಅಸಮಾಧಾನವನ್ನು ಸೃಷ್ಟಿಸಲು ಕಾರಣವಾದವು. ಈ ಪರಿಸ್ಥಿತಿಗಳು ಕೂಡ ಅನೇಕ ನಗರ ಪ್ರದೇಶಗಳಲ್ಲಿ ಜನರನ್ನು ಚುನಾವಣೆಯಿಂದ ದೂರವಿಟ್ಟಿರಬಹುದು. ಒಟ್ಟಿನಲ್ಲಿ ಕಳೆದ ಚುನಾವಣೆಗಳಿಗೆ ಹೋಲಿಸಿದಾಗ ಈ ಚುನಾವಣೆಯಲ್ಲಿ ಅನೇಕ ಕ್ಷೇತ್ರಗಳಲ್ಲಿ ಮತದಾನದ ಪ್ರಮಾಣ ಇಳಿಮುಖವಾಗಿರುವುದನ್ನು ಕುರಿತ ಸೂಕ್ಷ್ಮ ಅಧ್ಯಯನಗಳ ಅಗತ್ಯವಿದೆ.

> ಈ ಬಾರಿ ಮತದಾನದ ಕಣ ಅನೇಕ ಮತ ಕ್ಷೇತ್ರಗಳಲ್ಲಿ ತೋಳ್ಬಲ, ಹಣಬಲ, ಹಿಂಸಾಚಾರ, ಹಲ್ಲೆ, ವಾಗ್ಯುದ್ಧ . ರಾಜಕೀಯ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆಗಳು, ವಾಹನಗಳ ಜಖಂ, ಮತದಾರರ ಹೆಸರುಗಳು ಮತ ಪಟ್ಟಿಯಲ್ಲಿ ಇಲ್ಲದಿರುವುದು, ವಾಮಾಚಾರ-ಇವೇ ಮುಂತಾದ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳಿಗೆ ಸಾಕ್ಷಿಯಾಗಿದ್ದು ಈ ವಿದ್ಯಮಾನಗಳನ್ನು ನೋಡಿದವರಿಗೆ-ಕೇಳಿದವರಿಗೆ ಚುನಾವಣೆಗಳ ಮೂಲ ಉದ್ದೇಶವೇನು ಎಂಬ ಪ್ರಶ್ನೆ ಏಳದಿರುವುದಿಲ್ಲ.

ಚುನಾವಣೆ ಪ್ರಕಟವಾಗುವ ಮುನ್ನವೇ ಮತದಾರರಿಗೆ ಆಮಿಷಗಳನ್ನು ಒಡ್ಡಲಾರಂಭಿಸಿದ ರಾಜಕೀಯ ಪಕ್ಷಗಳು, ಸುಮಾರು 60 ಕೋಟಿ ಮೊತ್ತದ ಹಣ ಅಥವಾ ವಸ್ತುಗಳನ್ನು ಹಂಚಿದ್ದವು ಎಂದು ಚುನಾವಣಾ ಆಯೋಗ ತಿಳಿಸಿದೆ. ಚುನಾವಣೆಗಳ ದಿನಾಂಕ ಘೋಷಣೆಯಾದ ನಂತರ ಹೆಚ್ಚು–ಕಡಿಮೆ 365 ಕೋಟಿ ರೂಪಾಯಿಗಳ ಮೌಲ್ಯದ ಹಣ ಮತ್ತು ಇತರ ವಸ್ತುಗಳನ್ನು ತನ್ನ ವಶಕ್ಕೆ ತೆಗೆದುಕೊಂಡ ಆಯೋಗ ನೀಡಿರುವ ಮಾಹಿತಿಯ ಪ್ರಕಾರ ಇದರಲ್ಲಿ ಹಣ, ಮದ್ಯ, ಮಾದಕ ವಸ್ತುಗಳು, ಚಿನ್ನ ಮತ್ತು ಬೆಳ್ಳಿ ಸೇರಿದ್ದವು. ಹಣ ಹಂಚಿಕೆ ಮತದಾನ ಆರಂಭವಾದ ಮೇಲೂ ಅನೇಕ ಕ್ಷೇತ್ರಗಳಲ್ಲಿ ನಡೆದದ್ದು, ಕೆಲವೆಡೆ ಈ ಕಾರಣಕ್ಕಾಗಿ ಘರ್ಷಣೆಗಳಾಗಿದ್ದು, ಕೆಲ ಮತದಾರರು ಈ ಆಮಿಷಗಳಿಗೆ ಬಲಿಯಾಗಿಲ್ಲ ಎಂದು ಮಾಧ್ಯಮಗಳಲ್ಲಿ ವರದಿಯಾಗಿವೆ. ಇದೇ ಏನು ಪ್ರಜಾಪ್ರಭುತ್ವದ ಹಬ್ಬ?

ಚುನಾವಣೆಗಳಲ್ಲಿ ಭಾಗವಹಿಸದಿರಲು ಇದು ಸಮರ್ಥನೆಯಲ್ಲದಿದ್ದರೂ ಅನೇಕ ಪ್ರಜ್ಞಾವಂತ ಮತದಾರರಲ್ಲಿ ಕಾಣುವ ಚುನಾವಣೆಗಳನ್ನು ಕುರಿತ ಭ್ರಮನಿರಸನಕ್ಕೆ ಅದನ್ನು ಸುತ್ತುವರೆದಿರುವ ಅನೇಕ ಅಹಿತಕಾರಿ ವಿದ್ಯಮಾನಗಳೂ ಕಾರಣವಾಗಿರಬಹುದು. ನಾನು ಮತ ಚಲಾಯಿಸಲು ಹೋಗುತ್ತಿದ್ದಾಗ ಮತಗಟ್ಟೆ ಇದ್ದ ಕಟ್ಟಡದ ಮಾರು ದೂರದಲ್ಲಿ ಯುವಕನೊಬ್ಬ ರಸ್ತೆಯಲ್ಲಿದ್ದ ಕಲ್ಲೊಂದರ ಮೇಲೆ ಕುಳಿತಿದ್ದ. ನನ್ನ ಎದುರುಗಡೆ ದ್ವಿಚಕ್ರ ವಾಹನದಲ್ಲಿ ಬಂದ ಆತನ ವಯಸ್ಸಿನ ಯುವಕ ಒಂದು ರಾಜಕೀಯ ಪಕ್ಷದ ಅಭ್ಯರ್ಥಿಯ ಹೆಸರನ್ನು ಕೂಗಿ ಅವರಿಗೆ ಮತ ಚಲಾಯಿಸು ಎಂದು ಹೇಳಿದ ತಕ್ಷಣ ಕಲ್ಲಿನ ಮೇಲೆ ಕೂತಿದ್ದ ಯುವಕ ನಿಸ್ಸಂಕೋಚವಾಗಿ 'ಎಷ್ಟು ಕೊಡ್ತೀಯಾ ಹೇಳೋ' ಎಂದು ಕೂಗಿದ. ಕಳೆದ 2–3 ದಿನಗಳಿಂದ ಅನೇಕ ಕ್ಷೇತ್ರಗಳಲ್ಲಿ ಮನೆ ಮನೆಗೆ ಹೋಗಿ ಪಕ್ಷಾತೀತವಾಗಿ ಮುಕ್ತವಾಗಿಯೇ ಹಣ ಹಂಚುವ ಕೆಲಸ ನಡೆಯಿತು ಎಂದು ಎಲ್ಲೆಡೆ ಜನ ಮಾತಾಡಿಕೊಳ್ಳುತ್ತಿದ್ದಾರೆ. ಕೊಟ್ಟವರಿಂದೆಲ್ಲ ದುಡ್ಡು ತೆಗೆದು ಕೊಂಡವರು ಇದರ ಬಗ್ಗೆ ಯಾವುದೇ ಭಯವಿಲ್ಲದೆ ಹೇಳಿಕೊಂಡು ಬರ್ತಾ ಇದ್ದರೆ, ಹಣ ಸಿಗದನೇಕರು ತಮ್ಮ ಕೋಪ–ನಿರಾಶೆಯನ್ನು ಹೊರ ಹಾಕುತ್ತಿದ್ದಾರೆ. ಮತದಾನ ನಡೆಯುತ್ತಾ ಇದ್ದ ಹಾಗೆ ಕೋಳಿ, ಮದ್ಯ, ಸೀರೆ, ಹಣ ಹಂಚಿರುವ ವರದಿಗಳು ಕೆಲ ಕ್ಷೇತ್ರಗಳಿಂದ ಬಂದಿವೆ.

ಈ ಬಾರಿ ಮತದಾನದ ಕಣ ಅನೇಕ ಮತ ಕ್ಷೇತ್ರಗಳಲ್ಲಿ ತೋಳ್ಬಲ, ಹಣಬಲ, ಹಿಂಸಾಚಾರ, ಹಲ್ಲೆ, ವಾಗ್ಯುದ್ಧ , ರಾಜಕೀಯ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆಗಳು, ವಾಹನಗಳ ಜಖಂ, ಮತದಾರರ ಹೆಸರುಗಳು ಮತ ಪಟ್ಟಿಯಲ್ಲಿ ಇಲ್ಲದಿರುವುದು, ವಾಮಾಚಾರ–ಇವೇ ಮುಂತಾದ ಪ್ರಜಾಪ್ರಭುತ್ವ ವಿರೋಧಿ ಕೃತ್ಯಗಳಿಗೆ ಸಾಕ್ಷಿಯಾಗಿದ್ದು ಈ ವಿದ್ಯಮಾನಗಳನ್ನು ನೋಡಿದವರಿಗೆ–ಕೇಳಿದವರಿಗೆ ಚುನಾವಣೆಗಳ ಮೂಲ ಉದ್ದೇಶವೇನು ಎಂಬ ಪ್ರಶ್ನೆ ಏಳದಿರುವುದಿಲ್ಲ.

ಮತದಾನ ಆರಂಭವಾದಾಗಿನಿಂದ ಈ ಬಾರಿ ನಾವು ವಿದ್ಯುನ್ಮಾನ ಮಾಧ್ಯಮಗಳಲ್ಲಿ ನೋಡುತ್ತಾ ಬಂದದ್ದು ಚಲನಚಿತ್ರ ಕಲಾವಿದರು, ರಾಜಕಾರಣಿಗಳು, ಧರ್ಮ ಗುರುಗಳು ಹಾಗೂ ಆಯ್ದ ಉದ್ಯಮಿಗಳು ಮತಗಟ್ಟೆಗಳಿಗೆ ಬಂದು ಮತ ಚಲಾಯಿಸುವ ದೃಶ್ಯಗಳು. ಪ್ರಜಾಪ್ರಭುತ್ವದಲ್ಲಿ ಯಾರೂ ವಿಶೇಷ ವ್ಯಕ್ತಿಗಳೇನಲ್ಲ. ನಮ್ಮನ್ನು ವಸಾಹತುಶಾಹಿ ವ್ಯವಸ್ಥೆಯಿಂದ ಹೊರತಂದು ಸಮಾನತೆಯ ಹಾದಿಯಲ್ಲಿ ತೆರಳಲು ಅವಕಾಶ ಮಾಡಿ ಕೊಟ್ಟಿದ್ದೇ ಪ್ರಜಾಪ್ರಭುತ್ವ. ಚುನಾವಣೆಗಳು ಪ್ರಜಾಪ್ರಭುತ್ವದ ಮೂಲ ಸ್ತಂಭ. ಇಲ್ಲಿ 'ಸೆಲೆಬ್ರಿಟಿ ಮತದಾರರು'. ಮತ್ತು 'ಸಾಮಾನ್ಯ ಮತದಾರರು' ಎಂಬ ಎರಡು ವರ್ಗಗಳಾಗಿ ಮತದಾರರನ್ನು ವಿಂಗಡಿಸಿಲ್ಲ. ಆದರೆ ಪದೇ ಪದೆ ಇವರನ್ನು ತೋರಿಸಿ ಅವರಿಂದ ಪ್ರಜಾಪ್ರಭುತ್ವದ ಮಹತ್ವದ ಬಗ್ಗೆ ತಿಳಿವಳಿಕೆ ನೀಡಿಸಿದ್ದು ಎಷ್ಟರ ಮಟ್ಟಿಗೆ ಜನರ ಮತ ಚಲಾವಣಾ ನಿರ್ಧಾರವನ್ನು ಪ್ರಭಾವಿಸಿತು? ಈ ಗಣ್ಯರನ್ನು ವೈಭವೀಕರಿಸುವ ಸಂಸ್ಕೃತಿಯಿಂದ ನಾವು ಹೊರ ಬರುವುದು ಯಾವಾಗ? ಜನ ಸಾಮಾನ್ಯರು ಎಂದು ಬಹು ಸುಲಭವಾಗಿ ಅನೇಕರು ಹಣೆಪಟ್ಟಿ ಕಟ್ಟುವ ಅಪಾರ ಸಂಖ್ಯೆಯಲ್ಲಿರುವ ಜನ ಸಮುದಾಯಗಳ ಬದುಕಿನ ವಾಸ್ತವಗಳತ್ತ ಗಮನ ಸೆಳೆದು ಅವರ ಬದುಕಿನ ಮೇಲೆ ಚುನಾವಣೆಗಳು ಬೀರುವ ಅಥವಾ ಬೀರಲಿರುವ ಪ್ರಭಾವದ ಬಗ್ಗೆ ರಾಜ್ಯ, ಮಾಧ್ಯಮಗಳು ಮತ್ತು ನಾಗರಿಕ ಸಮಾಜ ಗಮನ ಹರಿಸುವುದು ಮುಖ್ಯ.

ಚುನಾವಣೆ, ರಾಜಕೀಯ ಪಕ್ಷಗಳಿಗೆ ಹಾಗೂ ಬಹುತೇಕ ಅಭ್ಯರ್ಥಿಗಳಿಗೆ ಅಧಿಕಾರ ಹಿಡಿಯುವ ಒಂದು ಸಾಧನವೇ ಹೊರತು ಸಾಮಾಜಿಕ ಅಭಿವೃದ್ಧಿಗೆ ನೆರವಾಗುವ ಸಾಧನವಲ್ಲ. ಚುನಾವಣಾ ಪ್ರಕ್ರಿಯೆ ಆರಂಭವಾದಾಗಿನಿಂದ ಈಗಿನವರೆಗೂ ನಾವು ನೋಡುತ್ತಿರುವುದು ಪರಸ್ಪರ ದೋಷಾರೋಪ ಅಥವಾ ಅವರವರ ಸಾಧನೆಗಳ ಅನಾವರಣ. ಚುನಾವಣಾ ಸಮೀಕ್ಷೆಗಳಲ್ಲಾಗಲೀ, ಅನೇಕ ಮತಗಟ್ಟೆಗಳಲ್ಲಿ ನಡೆದ ವಾದ ವಿವಾದಗಳಲ್ಲಾಗಲೀ, ಘರ್ಷಣೆಗಳಲ್ಲಾಗಲೀ ಸಾಮಾಜಿಕ ಅಭಿವೃದ್ಧಿಯ ಬಗ್ಗೆ ಹೆಚ್ಚು ಕಡಿಮೆ ಚರ್ಚೆ ನಡೆಯಲೇ ಇಲ್ಲ. ಅಭಿವೃದ್ಧಿ ಎನ್ನುವುದು ಇಂದು ತನ್ನ ಅರ್ಥವನ್ನು ಕಳೆದುಕೊಂಡು ಬಿಟ್ಟಿದೆ. ಏಕೆಂದರೆ ಬಹು ಸಂದರ್ಭಗಳಲ್ಲಿ ಅಧಿಕಾರ ಗಳಿಕೆಗೂ, ಆಮಿಷಗಳಿಗೂ ನೀಡುವ ಪ್ರಾಧಾನ್ಯತೆ ಅಭಿವೃದ್ಧಿಗೆ ದೊರೆಯುತ್ತಿಲ್ಲ. ಅನೇಕ ಮತದಾರರು ದುರಾಸೆ ಅಥವಾ ಕ್ಷಣಿಕ ಸುಖಗಳಿಗೆ ತಮ್ಮ ಪ್ರಜಾಸತ್ತಾತ್ಮಕ ಹಕ್ಕನ್ನು ಒತ್ತೆ ಇಡಲು ತಯಾರಾಗಿರುವುದರಿಂದ, ಅಧಿಕಾರವನ್ನು ಪಡೆಯಲು ಅಥವಾ ಉಳಿಸಿಕೊಳ್ಳಲು ಈ ಪರಿಸ್ಥಿತಿಯನ್ನು ಕೆಲ ಅಭ್ಯರ್ಥಿಗಳು ಬಳಸಿಕೊಳ್ಳುತ್ತಾರೆ. ಎಲ್ಲಿಯವರೆಗೂ ವಿಷಯಾಧಾರಿತ ರಾಜಕಾರಣ ನಡೆಯುವುದಿಲ್ಲವೋ ಪರಿಸ್ಥಿತಿ ಹೀಗೆಯೇ ಮುಂದುವರೆಯುತ್ತದೆ.

ವೃತ್ತಿ ನಿರ್ವಹಣೆಯಲ್ಲಿ ದೂರದೃಷ್ಟಿ ಇರಬೇಕು

ಮೈಸೂರು, ಮೇ 10–ವೃತ್ತಿ ನಿರ್ವಹಣೆಯಲ್ಲಿ ದೂರದೃಷ್ಟಿ ಇರಬೇಕು ಎಂದು ನಿರ್ವಹಣಾ ಸಲಹೆಗಾರರಾದ ಹರೀಶ್ ಎಂ. ಕೊಡೆಂದರ್ ತಿಳಿಸಿದರು.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 6 ರಿಂದ 8 ರವರೆಗೆ ತಾಂತ್ರಿಕ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿ 'ವೃತ್ತಿ ಪ್ರಗತಿ' ವಿಷಯ ಕುರಿತು ಮಾತನಾಡುತ್ತಾ, ನಮ್ಮ ವೃತ್ತಿ ಜೀವನದಲ್ಲಿ ಅನೇಕ ಸವಾಲುಗಳಿವೆ, ಪ್ರತಿಭೆ ಮತ್ತು ಸಾಮರ್ಥ್ಯದಿಂದ ಅವುಗಳನ್ನು ಎದುರಿಸಬೇಕು. ಜೀವನದಲ್ಲಿ ನಮ್ಮ ಆಸಕ್ತಿ, ಸಾಮರ್ಥ್ಯಕ್ಕೆ ಅನುಗುಣವಾಗಿ ವೃತ್ತಿಯನ್ನು ಆರಿಸಿಕೊಳ್ಳಬೇಕು, ವೃತ್ತಿಯನ್ನು ನಿರ್ವಹಿಸಲು ವೃತ್ತಿ ಪ್ರೀತಿ, ತೊಡಗಿಸಿಕೊಳ್ಳುವಿಕೆ, ಅರ್ಪಣಾ ಮನೋಭಾವ ಅವಶ್ಯಕ. ಪ್ರಪಂಚದಲ್ಲಿ ವೃತ್ತಿಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸದಿಂದ ಕೂಡಿರುತ್ತದೆ. ಮುಂದಿನ ದಿನಗಳಲ್ಲಿ ಆಗುವ ಬದಲಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಲು ನಾವು ಪ್ರವೃತ್ತರಾಗಬೇಕು. ಜೀವನದಲ್ಲಿ ನಾವು ಹೆಚ್ಚು ಸುರಕ್ಷಿತ ಎಂದು ಭಾವಿಸಬಾರದು, ಕೆಲವು ಅನಿವಾರ್ಯತೆಯಲ್ಲಿ ನಾವು ಕಾರ್ಯನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿದರು.

ಮೈಸೂರಿನ ಕಾರ್ಪೋರೇಟ್ ಟ್ರೈನರ್ ಆದ ಶ್ರುತಿ, 'ಸಮಯ ಮತ್ತು ಮನೋಭಾವ' ವಿಷಯ ಕುರಿತು ಮಾತನಾಡಿ ನಮ್ಮ ಸಾಮರ್ಥ್ಯಗಳ ಬಗ್ಗೆ ನಮಗೆ ಅರಿವು ಇರಬೇಕು ಹಾಗೂ ಧನಾತ್ಮಕ ಮನೋಭಾವ ಇರಬೇಕು. ನಮ್ಮ ಬಗ್ಗೆ ನಾವು ಅರಿಯದೆ ಮತ್ತೊಬ್ಬರ ಬಗ್ಗೆ ನಾವು ಮಾತನಾಡಬಾರದು, ನಾವು ಮಾದರಿಗಳನ್ನು ಸ್ವೀಕರಿಸುವಾಗ ಅವರ ಮನೋಧೋರಣೆಗಳು ನಮಗೆ ಇಷ್ಟವಾಗಿರುತ್ತವೆ. ಭೂಮಿಯ ಮೇಲೆ ಅತ್ಯಂತ ಮೌಲ್ಯಯುತವಾದುದು ಸಮಯ. ಯಾರು ಸಮಯವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಾರೋ, ಅವರು ಜೀವನದಲ್ಲಿ ಯಶಸ್ಸು ಸಾಧಿಸುತ್ತಾರೆ ಎಂದು ನುಡಿದರು. ಮೈಸೂರಿನ ಚಾರ್ಟೆಡ್ ಅಕೌಂಟೆಂಟ್ ಎಂ.ಆರ್. ತೇಜಸ್ವಿಯವರು 'ಆರ್ಥಿಕ ಸಾಕ್ಷರತೆ' ವಿಷಯ ಕುರಿತು ಮಾತನಾಡುತ್ತಾ, ಹಣಕಾಸಿನ ವ್ಯವಹಾರ ಎಂಬುದು ಒಂದು ದಿನದ ಕ್ರಿಯೆಯಲ್ಲ, ಇದು ಜೀವನ ಪೂರ್ತಿ ನಮ್ಮೊಂದಿಗೆ ಇರುತ್ತದೆ. ಹಾಗಾಗಿ ನಮಗೆ ಆರ್ಥಿಕ ಸಾಕ್ಷರತೆಯು ಅಗತ್ಯವಿದೆ, ಇಂದು ಭಾರತದ ಆರ್ಥಿಕ ಸಾಕ್ಷರತೆ ಪ್ರಮಾಣ ಶೇ.22 ರಷ್ಟು ಇದ್ದು, ಯೂರೋಪ್ ಮತ್ತು ಅಮೆರಿಕಾ ದೇಶಗಳಿಗೆ ಹೋಲಿಕೆ ಮಾಡಿದರೆ ತುಂಬಾ ಕಡಿಮೆ ಇದೆ. ಸಣ್ಣ ಸಣ್ಣ ಖರ್ಚುಗಳು ಸಹ ನಮ್ಮ ಆರ್ಥಿಕ ದುಸ್ಥಿತಿಗೆ ಕಾರಣವಾಗಬಹುದು. ಹಾಗಾಗಿ ಹಣಕಾಸಿನ ವ್ಯವಹಾರದಲ್ಲಿ ನಾವು ಶಿಸ್ತನ್ನು ಪಾಲಿಸಬೇಕು ಎಂದು ತಿಳಿಸಿ ನಂತರ ಭಾರತದಲ್ಲಿ ಜಾರಿಯಲ್ಲಿರುವ ವಿವಿಧ ತೆರಿಗೆಗಳ ಬಗ್ಗೆ ಸವಿವರವಾಗಿ ವಿವರಿಸಿದರು.

ಶಿಬಿರವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುತ್ತಿದೆ. ಶಿಬಿರದಲ್ಲಿ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ, ಯೋಗಾಭ್ಯಾಸ–ಧ್ಯಾನ ಹಾಗೂ ಸಂಜೆ ದೇಸಿ ಆಟಗಳ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಪ್ರಾರ್ಥನೆಯ ನಂತರ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು. ಶಿಬಿರದಲ್ಲಿ 65 ವಿದ್ಯಾರ್ಥಿಗಳು ಪಾಲ್ಗೊಂಡಿದ್ದಾರೆ.

ನಿರ್ವಹಣಾ ಸಲಹೆಗಾರ ಹರೀಶ್ ಎಂ. ಕೊಡೆಂದರ್



ಹೆಲಿಕಾಪ್ಟರ್‌ನಲ್ಲಿ ಬಂದು ಮತ ಹಾಕಿದ ಹೆಚ್.ಡಿ.ದೇವೇಗೌಡರು

ಹಾಸನ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೆಲಿಕಾಪ್ಟರ್‌ನಲ್ಲಿ ಆಗಮಿಸಿ, ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಮತ ಚಲಾಯಿಸಿದರು. ರಾಜ್ಯ ರಾಜಧಾನಿ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಬಂದ ಹೆಚ್.ಡಿ ದೇವೇಗೌಡ ಅವರು ಹೊಳೆನರಸೀಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಲ್ಯಾಂಡಿಂಗ್ ಆದರು. ಅದಾದ ಬಳಿಕ ಹೊಳೆನರಸೀಪುರದಿಂದ ಪಡುವಲಹಿಪ್ಪೆ ಗ್ರಾಮಕ್ಕೆ ಆಗಮಿಸಿ ಹೊಳೆನರಸೀಪುರ ಕ್ಷೇತ್ರದ ಮತಗಟ್ಟೆ ಸಂಖ್ಯೆ 251 ರಲ್ಲಿ ಹಕ್ಕು ಚಲಾವಣೆ ಮಾಡಿದರು. ಈ ವೇಳೆ ಹೆಚ್.ಡಿ. ದೇವೇಗೌಡರ ಪತ್ನಿ ಚನ್ನಮ್ಮ ಜೊತೆಗಿದ್ದರು.

ಮತ ಚಲಾಯಿಸಲು ದುಬೈನಿಂದ ಆಗಮಿಸಿದ ಉದ್ಯಮಿ

ದೇವನಹಳ್ಳಿ: ಉದ್ಯಮಿ ರೊನಾಲ್ಡ್ ಕೊಲಾಸೊ ಅವರು ಮತ ಚಲಾಯಿಸುವ ಉದ್ದೇಶದಿಂದಲೇ ದುಬೈನಿಂದ ನಗರಕ್ಕೆ ಬಂದಿದ್ದಾರೆ. ಮಂಗಳವಾರವೇ ನಗರಕ್ಕೆ ಬಂದಿದ್ದ ಅವರು, ದೇವನಹಳ್ಳಿ ತಾಲೂಕಿನ ಸಾದಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮತ ಚಲಾಯಿಸಿದರು.




'ಎಲ್ಲ ಕಾರ್ಯಗಳನ್ನು ಬದಿಗೊತ್ತಿ ಕೇವಲ ಮತ ಚಲಾಯಿಸಲು ಬೆಂಗಳೂರಿಗೆ ಬಂದಿದ್ದೇನೆ. ದೇಶದ ಭವಿಷ್ಯ ನಿರ್ಧರಿಸುವ ಶಕ್ತಿ ಮತಕ್ಕಿದೆ. ಅದನ್ನು ವ್ಯರ್ಥ ಮಾಡಿಕೊಳ್ಳಬಾರದು. ಅದಕ್ಕಾಗಿಯೇ ನಾನು ದುಬೈನಿಂದ ಬೆಂಗಳೂರಿಗೆ ಬಂದಿದ್ದೇನೆ' ಎಂದು ರೊನಾಲ್ಡ್ ಕೊಲಾಸೊ ತಿಳಿಸಿದರು.

'ನಾವು ಎಲ್ಲಿಯೇ ಇದ್ದರೂ ನಮ್ಮ ಹೃದಯ ನಾಡಿಗಾಗಿ ಮಿಡಿಯುತ್ತದೆ. ಇಲ್ಲಿ ನಡೆಯುವ ಪ್ರತಿಯೊಂದು ಮಹತ್ವದ ಕಾರ್ಯಗಳಲ್ಲಿ ಭಾಗಿಯಾಗಬೇಕು. ಮತ ಚಲಾಯಿಸುವುದು ಸಹ ಮೂಲಭೂತ ಹಕ್ಕು. ಅದು ನಮ್ಮೆಲ್ಲರ ಕರ್ತವ್ಯ. ಸರ್ಕಾರದ ರಚನೆಯಲ್ಲಿ ನಮ್ಮ ಪಾಲು ಇರಬೇಕು. ಆಗ ಮಾತ್ರ ಪ್ರಜೆಗಳ ಒಳಿತು ಕೈಗೊಳ್ಳದ ಮತ್ತು ಸಾಮರಸ್ಯ, ಸಹಬಾಳ್ವೆ ವಾತಾವರಣ ಸೃಷ್ಟಿಸದ ಸರ್ಕಾರವನ್ನು ಟೀಕಿಸುವ ಹಕ್ಕು ಪ್ರಜೆಗಳಿಗೆ ಇರುತ್ತದೆ' ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೊದಲ ಬಾರಿ ಮತ ಚಲಾಯಿಸಿದ ಯುವ ಚೇತನರಲ್ಲಿ ಸಂಭ್ರಮ


ಮೈಸೂರಿನ ಜೆ.ಪಿ.ನಗರದ ನಿವಾಸಿಗಳಾದ ಚಿರಂಜೀವಿ ಹಾಗೂ ಅಭಿನವ್ ಮೊದಲ ಬಾರಿಗೆ ಮತ ಚಲಾಯಿಸಿ, ಖುಷಿ ಪಟ್ಟರು.


ಎಂಬಿಬಿಎಸ್ ವಿದ್ಯಾರ್ಥಿ ಡಿ.ಆರ್.ರೋಹನ್ ಮೈಲಾರ್ ಪ್ರಥಮ ಬಾರಿ ಮತದಾನ ಮಾಡಿದರು.


ಮೈಸೂರಿನಲ್ಲಿ ಬುಧವಾರ ಉನ್ನತಿ ತನ್ನ ತಂದೆ, ಪತ್ರಿಕಾ ಪ್ರತಿನಿಧಿ ಲೋಕೇಶ್ ಅವರೊಂದಿಗೆ ಮತಗಟ್ಟೆಗೆ ತೆರಳಿ ಮೊದಲ ಬಾರಿಗೆ ತಮ್ಮ ಮತದಾನದ ಹಕ್ಕು ಚಲಾಯಿಸಿ, ಸಂಭ್ರಮಿಸಿದರು.


ಪಾಲಿಕೆ ಸದಸ್ಯೆ ಸಿ.ವೇದಾವತಿ ಅವರ ಪುತ್ರಿ ಲಕ್ಷಶ್ರೇಯಾ ಶಂಕರ್ ಮೊದಲ ಬಾರಿ ಮತದಾನ ಮಾಡಿದರು.


ಮೈಸೂರಿನ ಮತಗಟ್ಟೆಯೊಂದರಲ್ಲಿ ಮೈಸೂರು ನಗರಾಭಿವೃದ್ಧಿ ಸದಸ್ಯೆ ಲಕ್ಷ್ಮಿದೇವಿ ಹಾಗೂ ಅವರ ಪುತ್ರಿ ಎಂ.ಸಹನಾ ಮತ ಚಲಾಯಿಸಿದರು.


ಉದ್ಯಮಿ ಸ್ವೀಟ್ಸ್ ಮಹೇಶ್ ಅವರ ಪುತ್ರ ಸೂರಜ್ ಮಹೇಶ್ ಮೊದಲ ಬಾರಿ ಮತ ಹಾಕಿದರು.

ಮೈಸೂರು,ಮೇ 10(ಎಂಕೆ)–ಮೊದಲ ಬಾರಿ ಮತದಾನ ವಿಶೇಷ ಅನುಭವದ ಜೊತೆಗೆ ದೇಶದ ಅಭಿವೃದ್ಧಿಗೆ ಕೈ ಜೋಡಿಸಿದ ತೃಪ್ತಿ ನೀಡಿದೆ ಎಂದು ಮೊದಲ ಬಾರಿಗೆ ಮತದಾನ ಮಾಡಿದ ಯುವ ಮತದಾರರು ಹರ್ಷ ವ್ಯಕ್ತಪಡಿಸಿದ್ದಾರೆ. ಚುನಾವಣೆ ಪ್ರಜಾಪ್ರಭುತ್ವದ ಹಬ್ಬ. ಉತ್ತಮ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯೂ ಆಗಿದೆ. ಈ ನಿಟ್ಟಿನಲ್ಲಿ ನಮ್ಮ ಕರ್ತವ್ಯ ನಿರ್ವಹಿಸಿದ್ದೇವೆ. ಹಾಗೆಯೇ ಇತರರಿಗೂ ಮತದಾನ ಮಾಡುವಂತೆ ಪ್ರೇರೇಪಿಸಿದ್ದೇವೆ ಎಂದು 'ಮೈಸೂರು ಮಿತ್ರ'ನಲ್ಲಿ ಹರ್ಷ ವ್ಯಕ್ತಪಡಿಸಿದರು.


ಪ್ರಜ್ಞಾ ಮತ್ತು ಸೃಜನ್ ಮೊದಲ ಬಾರಿ ಮತದಾನ ಮಾಡಿದರು.


ಆಲನಹಳ್ಳಿಯ ಮತಗಟ್ಟೆಯಲ್ಲಿ ವೋಟ್ ಮಾಡಿದ ಪರೀಕ್ಷಿತ್


ಗೋಕುಲಂನಲ್ಲಿ ಮೊದಲ ಬಾರಿಗೆ ಮತ ಹಾಕಿದ ಪೃಥ್ವಿ ಪಿ.ಶೆಟ್ಟಿ

ಶಾಂತಿಯುತ ಮತದಾನಕ್ಕೆ ಮೈಸೂರು ನಗರ, ಜಿಲ್ಲಾದ್ಯಂತ ವ್ಯಾಪಕ ಭದ್ರತೆ

ಮೈಸೂರು, ಮೇ 10(ಆರ್‌ಕೆ)–ಇಂದು ನಡೆದ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಮತದಾನಕ್ಕೆ ಮೈಸೂರು ನಗರ ಮತ್ತು ಜಿಲೆಯಾದ್ಯಂತ ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಮೈಸೂರು ನಗರ ಮತ್ತು ಜಿಲ್ಲಾ ಪೊಲೀಸ್ ಘಟಕದಿಂದ ಒಟ್ಟು 4,914 ಪೊಲೀಸ್ ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸಿ, ಸೂಕ್ಷ್ಮ ಮತಗಟ್ಟೆಗಳಲ್ಲಿ ವೆಬ್ ಕಾಸ್ಟಿಂಗ್ ಮೂಲಕ ನಿಗಾ ವಹಿಸಿದ್ದಲ್ಲದೆ ಶಸ್ತ್ರಸಜ್ಜಿತ ಅರೆ ಮಿಲಿಟರಿ ಪಡೆ ಸಿಬ್ಬಂದಿಗಳಿಂದ ಭದ್ರತೆ ಮಾಡಿದ್ದರಿಂದಾಗಿ ಜಿಲ್ಲೆಯಾದ್ಯಂತ ಯಾವುದೇ ಸಣ್ಣಪುಟ್ಟ ಅಹಿತಕರ ಘಟನೆಗಳೂ ನಡೆಯದಂತೆ ಶಾಂತಿಯುತವಾಗಿ ಮತದಾನ ಕಾರ್ಯ ಪೂರ್ಣಗೊಂಡಿದೆ.



ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಡಿಸಿಪಿ ಎಂ.ಮುತ್ತುರಾಜ್ ವ್ಯಾಪ್ತಿಯ ಎಲ್ಲಾ 4 ಕ್ಷೇತ್ರಗಳ ಮತಗಟ್ಟೆಗಳಲ್ಲಿ ಬಂದೋಬಸ್ತ್ ಕರ್ತವ್ಯದ ಮೇಲ್ವಿಚಾರಣೆ ನಡೆಸಿದರೆ, ಜಿಲ್ಲಾ ವ್ಯಾಪ್ತಿಯಲ್ಲಿ ಎಸ್ಪಿ ಸೀಮಾ ಲಾಟ್ಕರ್, ಎಎಸ್ಪಿ ನಂದಿನಿ ನೇತೃತ್ವದ ಹಿರಿಯ ಅಧಿಕಾರಿಗಳು ಹೈವೋಲ್ಟೇಜ್ ವರುಣ ಕ್ಷೇತ್ರದಲ್ಲಿ ಗಸ್ತು ತಿರುಗಿ ಕಟ್ಟೆಚ್ಚರ ವಹಿಸಿದ್ದರು. ಉಳಿದಂತೆ ಸೆಕ್ಟರ್ ಮೊಬೈಲ್ ಸ್ಕ್ವಾಡ್, ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳೂ ಸಹ ಎಲ್ಲಾ ಕ್ಷೇತ್ರಗಳಲ್ಲಿ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತೆ ಕ್ರಮ ವಹಿಸಿದರು. ಸೂಕ್ಷ್ಮ ಮತಗಟ್ಟೆಗಳ ಬಳಿ ಮತದಾರರನ್ನು ಹೊರತುಪಡಿಸಿ ಉಳಿದಂತೆ ಬೇರೆ ವ್ಯಕ್ತಿಗಳು ಅನಗತ್ಯವಾಗಿ ಸುಳಿಯದಂತೆ ನಿಗಾ ವಹಿಸಿದ ಹಿನ್ನೆಲೆಯಲ್ಲಿ ಮತದಾನ ಶಾಂತಿಯುತವಾಗಿ ನಡೆಯಿತು. ಕೆಎಸ್‌ಆರ್‌ಪಿ, ಸಿಎಆರ್, ಕಮಾಂಡೋ ಪಡೆ, ಡಿಎಆರ್ ತುಕಡಿ, ಅಬಕಾರಿ ಇಲಾಖೆ ಪೊಲೀಸರನ್ನೂ ಹೆಚ್ಚುವರಿಯಾಗಿ ಬಳಸಿಕೊಂಡು ಯಶಸ್ವಿಯಾಗಿ ಬಂದೋಬಸ್ತ್ ಕರ್ತವ್ಯ ನಿರ್ವಹಿಸಲಾಗಿದೆ.

ಮತದಾರರಿಗೆ ನೆರವಾದ ಸ್ವಯಂ ಸೇವಾ ಕಾರ್ಯಕರ್ತರು

ಅಸಹಾಯಕರಿಗೆ ನೆರವಾಗಿ ಪ್ರಶಂಸೆಗೆ ಪಾತ್ರರಾದ ಶಾಲಾ ಮಕ್ಕಳು, ಸ್ಕೌಟ್ಸ್ ಅಂಡ್ ಗೈಡ್ಸ್, ಎನ್‌ಸಿಸಿ ಕೆಡೆಟ್ಸ್

ಮೈಸೂರು,ಮೇ 10–ಮೈಸೂರು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಸ್ವಯಂ ಸೇವಕರಾಗಿ ನೇಮಿಸಿದ ಶಾಲಾ ಮಕ್ಕಳು, ಸ್ಕೌಟ್ಸ್ ಅಂಡ್ ಗೈಡ್ಸ್ ಮತ್ತು ಎನ್‌ಸಿಸಿ ವಿದ್ಯಾರ್ಥಿಗಳು ವಿಶೇಷಚೇತನರು, ಹಿರಿಯರಿಗೆ ಮತದಾನ ಮಾಡಲು ನೆರವಾದರು.





ಪ್ರಜಾಪ್ರಭುತ್ವದ ಮಹಾ ಹಬ್ಬವಾಗಿರುವ ಮತದಾನದಲ್ಲಿ 18 ವರ್ಷ ಮೇಲ್ಪಟ್ಟ ಹೊಸ ಮತದಾರರೊಂದಿಗೆ ಹಿರಿಯರು ಮತ್ತು ವಿಶೇಷಚೇತನರು ಮತದಾನ ಮಾಡಿದ್ದು, ಎಲ್ಲರ ಗಮನ ಸೆಳೆದಿದೆ. ಅವರಿಗೆ ಶಾಲಾ ಮಕ್ಕಳು, ಸ್ಕೌಟ್ಸ್ ಅಂಡ್ ಗೈಡ್ಸ್ ಮತ್ತು ಎನ್‌ಸಿಸಿ ವಿದ್ಯಾರ್ಥಿಗಳು ನೆರವಾಗುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಮೈಸೂರು ಜಿಲ್ಲೆಯಲ್ಲಿ ಸ್ಥಾಪಿಸಿರುವ 2,905 ಮತಗಟ್ಟೆಯಲ್ಲಿ ಚುನಾವಣಾ ಆಯೋಗದ ನಿಯಮಾನುಸಾರ ಜಿಲ್ಲಾ ಸ್ವೀಪ್ ಸಮಿತಿಯು ಮತಗಟ್ಟೆಗೆ ಅನುಗುಣವಾಗಿ ಸ್ವಯಂ ಸೇವಕರನ್ನು ನೇಮಿಸಿಕೊಂಡಿದ್ದಾರೆ. ಈ ಸ್ವಯಂ ಸೇವಕರು ಮತಗಟ್ಟೆಗೆ ಬಂದವರಿಗೆ ನಾನಾ ರೀತಿಯಲ್ಲಿ ನೆರವಾದರು. ಈ ಬಾರಿ ಚುನಾವಣಾ ಆಯೋಗವು 80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಫಾರಂ ಡಿ12 ನೊಂದಣಿ ಮಾಡಿಕೊಳ್ಳುವ ಮೂಲಕ ಮನೆಯಲ್ಲಿಯೇ ಮತದಾನ ಮಾಡಲು ಅವಕಾಶ ಕಲ್ಪಿಸಿತು. ಕೆಲವರು ಇದನ್ನು ಆಯ್ಕೆ ಮಾಡಿಕೊಂಡು ಮನೆಯಲ್ಲೇ ಮತದಾನ ಮಾಡಿದರು. ಆದರೆ ಸಾಕಷ್ಟು ಹಿರಿಯ ನಾಗರಿಕರು ಇಂದು ಮತಗಟ್ಟೆಗಳಿಗೆ ಬಂದು ಮತದಾನ ಮಾಡಿ ಯುವ ಮತದಾರರಿಗೂ ಮತದಾನ ಮಾಡಲು ಉತ್ಸಾಹ ತುಂಬಿದರು.

ಇವರಲ್ಲಿ ಕೆಲ ಹಿರಿಯ ನಾಗರಿಕರು ಕಾರು, ಆಟೋ, ಬೈಕ್‌ಗಳ ಮೂಲಕ ಮತಗಟ್ಟೆಗೆ ಬಂದರು. ಅವರಲ್ಲಿ ಹಲವರು ನಡೆಯಲು ಸಾಧ್ಯವಾಗಲಿಲ್ಲ. ಅವರಿಗೆ ಈ ಸ್ವಯಂ ಸೇವಕರು ಅವರ ಬಳಿ ವ್ಹೀಲ್ ಚೇರ್ ತಂದು ಅವರು ಮತದಾನ ಮಾಡಲು ಸಹಾಯ ಮಾಡಿದರು. ಹಾಗೇ ಮತಗಟ್ಟೆಯ ಗೇಟಿನ ಬಳಿ ನಿಂತು ಮೊಬೈಲ್ ತಂದಿರುವವರಿಗೆ ಮೊಬೈಲ್ ಸ್ವಿಚ್ ಆಫ್ ಮಾಡಿಕೊಳ್ಳಿ ಅಥವಾ ನಮ್ಮ ಬಳಿ ನೀಡಿ, ಮತದಾನದ ನಂತರ ಪಡೆದುಕೊಳ್ಳಿ ಎಂದು ಮನವಿ ಮಾಡಿಕೊಂಡರು. ಕೆಲವೆಡೆ ಮಹಿಳಾ ಮತದಾರರು ಮಕ್ಕಳನ್ನು ಮತಗಟ್ಟೆಗೆ ಕರೆದುಕೊಂಡು ಬಂದಿದ್ದರು. ಅವರು ಮತದಾನ ಮಾಡಿ ಬರುವವರೆಗೂ ಮಕ್ಕಳನ್ನು ಹೊರಗೆ ನೋಡಿಕೊಳ್ಳುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಗುರುತಿನ ಚೀಟಿ ಇದೆ; ಮತದಾರರ ಪಟ್ಟಿಯಲ್ಲಿ ಹೆಸರಿಲ್ಲ

ಹಲವೆಡೆ ಬೇಸರ ಹೊರಹಾಕಿದ ಮತದಾರರು

ಮೈಸೂರು, ಮೇ 10(ಎಂಕೆ)– ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರಿಲ್ಲದಿರುವುದನ್ನು ಕಂಡು ನೂರಾರು ಮಂದಿ ಮತದಾರರು ನಿರಾಶೆಯಿಂದ ವಾಪಸ್ ತೆರಳುತ್ತಿದ್ದ ದೃಶ್ಯಗಳು ಮೈಸೂರು ನಗರದಲ್ಲಿ ಹಲವು ಮತಗಟ್ಟೆಗಳಲ್ಲಿ ಕಂಡುಬಂತು.

ಕೃಷ್ಣರಾಜ ಕ್ಷೇತ್ರ ವ್ಯಾಪ್ತಿಯ ಚಾಮರಾಜ ಜೋಡಿ ರಸ್ತೆಯಲ್ಲಿರುವ ಅಂಬಳೆ ಅಣ್ಣಯ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಮತಗಟ್ಟೆ(ಮತಗಟ್ಟೆ ಸಂಖ್ಯೆ–134) ಸೇರಿದಂತೆ ಹಲವೆಡೆ ಮತದಾನ ಮಾಡಲು ಸಾಧ್ಯವಾಗದೆ ಬೇಸರದಿಂದ ಮನೆಗೆ ವಾಪಸ್ಸಾದರು. ಮತದಾನ ಗುರುತಿನ ಚೀಟಿ ಇದೆ. ಆದರೆ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲ. ಪ್ರತೀ ಬಾರಿ ಇದೇ ಮತಗಟ್ಟೆಯಲ್ಲಿ ಮತ ಹಾಕುತ್ತಿದ್ದೇವೆ. ಆದರೆ ಈ ಬಾರಿ ಬೇರೆ ಕಡೆ ಇದೆ ಎನ್ನುತ್ತಿದ್ದಾರೆ. ಆದರೆ ಅಲ್ಲಿಗೂ ಹೋಗಿ ಪರಿಶೀಲನೆ ನಡೆಸಿದರೆ ನಮ್ಮ ಹೆಸರಿಲ್ಲ. ಅಧಿಕಾರಿಗಳು ಬೇಕಂತಲೇ ಈ ರೀತಿ ಮಾಡಿದ್ದಾರೆ ಎಂದು ಕೆ.ಆರ್ ಕ್ಷೇತ್ರದ ಮತದಾರರಾದ ವಿಜಯಲಕ್ಷ್ಮಿ 'ಮೈಸೂರು ಮಿತ್ರ'ನಲ್ಲಿ ದೂರಿದರು. ಮತದಾರರ ಪಟ್ಟಿಯಲ್ಲಿ ಮೃತಪಟ್ಟವರ ಹೆಸರಿದೆ. ಆದರೆ ಬದುಕಿರುವವರ ಹೆಸರಿಲ್ಲ. ಚುನಾವಣಾ ಅಧಿಕಾರಿಗಳದ್ದು, ಪ್ರತಿ ವರ್ಷ ಒಂದಲ್ಲಾ ಒಂದು ಸಮಸ್ಯೆ ಇದ್ದೇ ಇರುತ್ತದೆ. ಕಳೆದ 40 ವರ್ಷದಿಂದ ಮತ ಹಾಕುತ್ತಿರುವ ನಮ್ಮ ಹೆಸರೇ ಈಗ ಮತದಾರರ ಪಟ್ಟಿಯಲ್ಲಿ ಇಲ್ಲ ಎಂದು ಪ್ರಭಾಕರ್ ಕಿಡಿಕಾರಿದರು.



200ಕ್ಕೂ ಹೆಚ್ಚು ಮಂದಿ: ಬೆಳಗ್ಗೆಯಿಂದ ಸಂಜೆಯವರೆಗೂ ಸುಮಾರು 200ಕ್ಕೂ ಹೆಚ್ಚು ಜನರು ಮತಗಟ್ಟೆಗೆ ಬಂದು ಮತದಾರರ ಪಟ್ಟಿಯಲ್ಲಿ ಹೆಸರಿಲ್ಲ ಎಂದು ವಾಪಸ್ ಹೋಗಿದ್ದಾರೆ. ಹಲವರ ಹೆಸರು ಪಟ್ಟಿಯಿಂದ ಬಿಟ್ಟು ಹೋಗಿದೆ. ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿಯೇ ಹೆಚ್ಚು ಎಂದು ಪಕ್ಷವೊಂದರ ಬೂತ್ ಏಜೆಂಟ್ ಮಾಹಿತಿ ನೀಡಿದರು.

ಕಾಲ ಚಪ್ಪಲಿ ಬಿಟ್ಟು ಮತದಾನ ಮಾಡಿದ ಅಜ್ಜಿ!


ಮೈಸೂರು,ಮೇ 10(ಜಿಎ)–ಮೈಸೂರಿನ 96 ವರ್ಷದ ವೃದ್ಧೆಯೊಬ್ಬರು ಪಾದರಕ್ಷೆ ತೊರೆದು ಭಕ್ತಿಭಾವದಿಂದ ಮತದಾನ ಮಾಡುವ ಮೂಲಕ ಮತಗಟ್ಟೆ ಸಿಬ್ಬಂದಿ ಹಾಗೂ ಅಲ್ಲಿದ್ದವರಲ್ಲಿ ಅಚ್ಚರಿ ಮೂಡಿಸಿದರು. ಕೆ.ಆರ್.ಮತಗಟ್ಟೆ ಸಂಖ್ಯೆ 233ರಲ್ಲಿ ಗುಂಡೂರಾವ್‌ನಗರದ ನಿವಾಸಿ ಬಂಗಾರಮ್ಮ ಅವರು ಉತ್ಸಾಹದಿಂದ ಮತದಾನ ಮಾಡಿದರು. ಮೊದಲ ಮತದಾರರಾಗಿ ಬಂದು ಮತ ಚಲಾಯಿಸಿದ ಈ ಅಜ್ಜಿ ಕಾಲಿಗೆ ಧರಿಸಿದ್ದ ಚಪ್ಪಲಿ ಕಳಚಿ, ಭಕ್ತಿಭಾವದಿಂದ ಮತ ಚಲಾಯಿಸುವ ಮೂಲಕ ಮತದಾನದ ಮಹತ್ವ ಸಾರಿದರು. ಎಲ್ಲರಿಗೂ ಒಳ್ಳೆಯದಾಗಲಿ. ದೇಶ, ರಾಜ್ಯದ ಎಲ್ಲರೂ ಚೆನ್ನಾಗಿ ಇರಬೇಕು. ಹಾಗಾಗಿ ಎಲ್ಲರೂ ಮತದಾನ ಮಾಡಬೇಕು ಎಂದರು. ಮನೆಗೆ ಬಂದು, ಮನೆಯಲ್ಲಿಯೇ ವೋಟ್ ಮಾಡಲು ವ್ಯವಸ್ಥೆ ಕಲ್ಪಿಸುತ್ತೇವೆಂದರು. ಆದರೆ, ನಾನು ಮತಗಟ್ಟೆಗೇ ಬಂದು ವೋಟ್ ಮಾಡುತ್ತೇನೆಂದೆ. ಇಲ್ಲಿಗೆ ಬಂದು ಮತದಾನ ಮಾಡುವುದು ನನಗೆ ಇಷ್ಟ ಎಂದರು.



ನಿವೃತ್ತ ಯೋಧ, ಸ್ವಾತಂತ್ರ್ಯ ಹೋರಾಟಗಾರ ಶತಾಯುಷಿ ಗೋಪಾಲ ಐಯ್ಯಂಗಾರ್ ಮತದಾನ


ಮೈಸೂರು, ಮೇ 10(ಎಸ್‌ಬಿಡಿ)– ಸ್ವಾತಂತ್ರ್ಯ ಹೋರಾಟಗಾರ, ನಿವೃತ್ತ ಯೋಧ, ಶತಾಯುಷಿ ಎಂ.ಕೆ.ಗೋಪಾಲ ಐಯ್ಯಂಗಾರ್(100 ವರ್ಷ) ಅವರು ಗಾಲಿಕುರ್ಚಿಯಲ್ಲಿ ಆಗಮಿಸಿ ಮತದಾನದ ಹಕ್ಕು ಚಲಾಯಿಸಿದರು.

ಮೈಸೂರಿನ ಕೃಷ್ಣರಾಜ ಕ್ಷೇತ್ರದ ದೇವಾಂಬ ಅಗ್ರಹಾರ ನಿವಾಸಿಯಾದ ಇವರು, ತಮ್ಮ ಪುತ್ರಿ ಕೃಷ್ಣವೇಣಿ ಅವರೊಂದಿಗೆ ಶ್ರೀಮನ್ ಮಹಾರಾಜ ಸಂಸ್ಕೃತ ಪಾಠಶಾಲೆ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಿದರು. ಈ ಮೂಲಕ ಪ್ರಜಾಪ್ರಭುತ್ವ ಭಾರತದ ಪ್ರತಿಯೊಬ್ಬ ಮತದಾರರೂ ಸಾಂವಿಧಾನಿಕ ಜವಾಬ್ದಾರಿಯನ್ನು ನಿರ್ವಹಿಸಬೇಕೆಂಬ ಸಂದೇಶ ಸಾರಿದರು.


ಮತ ಚಲಾಯಿಸಿದ ನಂತರ ಪುತ್ರಿ ಕೃಷ್ಣವೇಣಿಯೊಂದಿಗೆ ಶತಾಯುಷಿ ಎಂ.ಕೆ.ಗೋಪಾಲ ಐಯ್ಯಂಗಾರ್

ಎಂ.ಕೆ.ಗೋಪಾಲ ಐಯ್ಯಂಗಾರ್ ಅವರು 19ನೇ ವಯಸ್ಸಿನಲ್ಲೇ ಗಾಂಧೀಜಿಯವರ ಭಾರತ ಬಿಟ್ಟು ತೊಲಗಿ ಚಳವಳಿಯಿಂದ ಆಕರ್ಷಿತರಾಗಿ, ಮೈಸೂರಿನ ಕಾರಾಗೃಹದಲ್ಲಿ 44 ದಿನ, ಬೆಂಗಳೂರಿನಲ್ಲಿ 7 ತಿಂಗಳಿಗೂ ಹೆಚ್ಚು ಸೆರೆವಾಸ ಅನುಭವಿಸಿದರು. ರಾಯಲ್ ಇಂಡಿಯನ್ ಏರ್‌ಫೋರ್ಸ್ ವೈಮಾನಿಕ ಪಡೆಯಲ್ಲಿ ಲೀಡಿಂಗ್ ಏರ್ ಕ್ರಾಫ್ಟ್‌ಮನ್ ಹುದ್ದೆಗೆ ಸೇರಿದ ಅವರು, ಸುಭಾಷ್ ಚಂದ್ರಬೋಸರ ಭಾರತೀಯ ರಾಷ್ಟ್ರೀಯ ಪಡೆ(ಐಎನ್‌ಎ)ಗೆ ಸಹಾಯ ಮಾಡಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು.

ಸ್ವಾತಂತ್ರ್ಯ ನಂತರ ವೈಮಾನಿಕ ದಳದ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ಅವರು, ಶ್ರೀರಂಗಪಟ್ಟಣದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಕೆಲ ಕಾಲ ಗುಮಾಸ್ತರಾಗಿ ಸೇವೆ ಸಲ್ಲಿಸಿದರು. ಆ ವೃತ್ತಿಯನ್ನು ತೊರೆದು ಊರೂರು ತಿರುಗಿ ಅಗರಬತ್ತಿ ವ್ಯಾಪಾರ ಮಾಡಿ ಸ್ವಾವಲಂಬನೆ ಜೀವನ ನಡೆಸಿದರು. ಹೆಚ್.ಡಿ.ಕೋಟೆ ಮಾಧ್ಯಮಿಕ ಶಾಲೆಯಲ್ಲಿ ಪಾಠ ಹೇಳಿಕೊಟ್ಟ ಇವರು, ಬಡಮಕ್ಕಳಿಗಾಗಿ ಅತ್ಯುತ್ಕೃಷ್ಟವಾದ ಹಾಲುಕೋವಾ ಅನ್ವೇಷಿಸಿ, ಸಿಹಿ ತಿನಿಸಿನ ವ್ಯಾಪಾರವನ್ನು ಯಶಸ್ವಿಯಾಗಿ ನಡೆಸಿದರು. ಹೀಗೆ ಶಿಸ್ತುಬದ್ಧ ಜೀವನ ನಡೆಸಿಕೊಂಡು ಬಂದಿರುವ ಶತಾಯುಷಿ ಎಂ.ಕೆ.ಗೋಪಾಲ ಐಯ್ಯಂಗಾರ್ ಅವರು ಗಾಲಿ ಕುರ್ಚಿಯಲ್ಲಿ ಬಂದು ಮತ ಚಲಾಯಿಸುವ ಮೂಲಕ ಮತದಾನದ ಮಹತ್ವ ಸಾರಿದರು.


ವಿಧಾನಪರಿಷತ್ ಸದಸ್ಯ ದಿನೇಶ್ ಗೂಳೀಗೌಡ ಅವರು ಮೈಸೂರಿನ ಕೆಆರ್ ಕ್ಷೇತ್ರ ವ್ಯಾಪ್ತಿಯ ಜೆಪಿ ನಗರದ ಜೆಎಸ್‌ಎಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಮತ ಚಲಾಯಿಸಿದರು.

ಒಂದೇ ಕುಟುಂಬದ 65 ಮಂದಿ ಏಕಕಾಲಕ್ಕೆ ಮತದಾನ

ಚಿಕ್ಕಬಳ್ಳಾಪುರ: ರಾಜ್ಯದಲ್ಲಿ ಬುಧವಾರ ವಿಧಾನಸಭೆಗೆ ಚುನಾವಣೆ ಭರದಿಂದ ನಡೆಯಿತು. ಬೆಳ್ಳಂಬೆಳಗ್ಗೆಯೇ ಚಿಕ್ಕಬಳ್ಳಾಪುರದಲ್ಲಿ ಒಂದೇ ಕುಟುಂಬದ 65 ಮಂದಿ ಏಕಕಾಲಕ್ಕೆ ಮತದಾನ ಮಾಡಿದ್ದಾರೆ. ಚಿಕ್ಕಬಳ್ಳಾಪುರದ ಬಾದಂ ಕುಟುಂಬದವರಿಂದ ಮತದಾನ ನಡೆದಿದೆ. ಒಂದೇ ಕುಟುಂಬದ 65 ಮಂದಿಯೂ ಏಕಕಾಲಕ್ಕೆ ಜ್ಯೂನಿಯರ್ ಕಾಲೇಜು ಆವರಣಕ್ಕೆ ಬಂದು ಮತ ಚಲಾಯಿಸಿದ್ದಾರೆ. ಬಾದಾಮ್ ಕುಟುಂಬದ ಸದಸ್ಯರೆಲ್ಲರೂ ಒಂದೇ ಬಾರಿ ಆಗಮಿಸಿ ಮತ ಚಲಾಯಿಸುವ ಮೂಲಕ ಇತರರಿಗೂ ಮಾದರಿಯಾಗಿದ್ದಾರೆ. ಈ ಬಗ್ಗೆ ಮಾತನಾಡಿದ ಬಾದಂ ಕುಟುಂಬಸ್ಥರು, ಪ್ರತಿ ಬಾರಿಯೂ ಕುಟುಂಬಸ್ಥರೆಲ್ಲರೂ ಒಮ್ಮೆಲೆ ಆಗಮಿಸಿ ಮತ ಹಾಕುತ್ತೇವೆ ಎಂದು ತಿಳಿಸಿದ್ದಾರೆ.


ಡಿ.ಎ.ಕೆರೆ ಗ್ರಾಮದ ಮತಗಟ್ಟೆಯಲ್ಲಿ ಶಾಸಕ ಡಿ.ಸಿ. ತಮ್ಮಣ್ಣ ಹಾಗೂ ಕುಟುಂಬದವರು ಮತದಾನ ಮಾಡಿದರು.


ಶಾಸಕ ಸಿ.ಎಸ್. ಪುಟ್ಟರಾಜು ಅವರು ಪತ್ನಿ ನಾಗಮ್ಮ ಅವರೊಂದಿಗೆ ಚಿನಕುರಳಿ ಗ್ರಾಮದ ಮತಗಟ್ಟೆಯಲ್ಲಿ ಹಕ್ಕು ಚಲಾಯಿಸಿದರು.


ಸಂಸದೆ ಸುಮಲತಾ ದೊಡ್ಡರಸಿನಕೆರೆ ಗ್ರಾಮದ ಮತಗಟ್ಟೆಯಲ್ಲಿ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು.


ಕೆ.ಆರ್.ಪೇಟೆ ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್. ದೇವರಾಜು ಹಾಗೂ ಪತ್ನಿ ಸರ್ವಮಂಗಳಾ ಮತದಾನ ಮಾಡಿದರು.

ಮಂಡ್ಯ ಜಿಲ್ಲೆಯಲ್ಲಿ ಶೇ.84.36ರಷ್ಟು ಶಾಂತಿಯುತ ಮತದಾನ

ಮಂಡ್ಯ, ಮೇ 10– ಏಳು ವಿಧಾನಸಭಾ ಕ್ಷೇತ್ರಗಳನ್ನೊಳಗೊಂಡ ಮಂಡ್ಯ ಜಿಲ್ಲೆಯಲ್ಲಿ ಸಣ್ಣ–ಪುಟ್ಟ ಗಲಾಟೆ, ಕೆಲ ಗೊಂದಲಗಳನ್ನು ಹೊರತುಪಡಿಸಿ ಬಹುತೇಕ ಶಾಂತಿಯುತವಾಗಿ ಮತದಾನ ನಡೆದಿದ್ದು, ಜಿಲ್ಲೆಯಲ್ಲಿ ಒಟ್ಟು ಶೇ. 84.36 ರಷ್ಟು ಮತದಾನವಾಗಿದೆ.

ಏಳು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಂಡ್ಯ ಜಿಲ್ಲೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ 77.14ರಷ್ಟು, ಮೇಲುಕೋಟೆಯಲ್ಲಿ 90.93ರಷ್ಟು, ಕೆ.ಆರ್. ಪೇಟೆಯಲ್ಲಿ 84.50ರಷ್ಟು, ನಾಗಮಂಗಲದಲ್ಲಿ 89 ರಷ್ಟು, ಶ್ರೀರಂಗಪಟ್ಟಣದಲ್ಲಿ 86.27ರಷ್ಟು, ಮದ್ದೂರಿನಲ್ಲಿ 86.10ರಷ್ಟು, ಮಳವಳ್ಳಿ ಕ್ಷೇತ್ರದಲ್ಲಿ 78.33ರಷ್ಟು ಮತದಾನವಾಗಿದ್ದು, ಒಟ್ಟಾರೆ 84.36 ರಷ್ಟು ಜಿಲ್ಲೆಯಲ್ಲಿ ಮತದಾನ ನಡೆದಿದೆ. ಕೆಲವೆಡೆ ರಾತ್ರಿ 9 ಗಂಟೆವರೆವಿಗೂ ಮತದಾನ ನಡೆದಿದ್ದು, ನಿಖರ ಮತದಾನದ ವಿವರ ಗುರುವಾರ ಲಭ್ಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಬೆಳಿಗ್ಗೆ ಏಳರಿಂದ ಆರಂಭವಾದ ಮತದಾನ ಪ್ರಕ್ರಿಯೆ ಸಂಜೆ ಆರು ಗಂಟೆವರೆಗೆ ನಡೆಯಿತು. ಅದರಲ್ಲೂ ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಿರುವ ಯುವ ಮತದಾರರು ಜಿಲ್ಲೆಯ ಎಲ್ಲಾ ಕಡೆ ಉತ್ಸಾಹದಿಂದ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿದ್ದ ದೃಶ್ಯಗಳು ಕಂಡು ಬಂತು.

ಮಂಡ್ಯ: ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಬಹುತೇಕ ಶಾಂತಿಯುತವಾಗಿ ಮತದಾನ ಪ್ರಕ್ರಿಯೆ ನಡೆಯಿತು. ಜಿಲ್ಲಾ ಕೇಂದ್ರವಾದ ಮಂಡ್ಯದಲ್ಲಿ ಯುವಕ, ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ ಖುಷಿ ಪಟ್ಟರೆ, ವೃದ್ಧರು, ಶತಾಯುಷಿಗಳು ಸಹ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದು, ವಿಶೇಷವಾಗಿತ್ತು.


ಕದಲೂರು ಉದಯ್ ದಂಪತಿ.

ಜೆಡಿಎಸ್ ಅಭ್ಯರ್ಥಿ ಬಿ.ಆರ್.ರಾಮಚಂದ್ರ ತಾಲೂಕಿನ ಬೊಮ್ಮನಹಳ್ಳಿಯಲ್ಲಿ ಕುಟುಂಬದ ಸಮೇತ ಮತದಾನ ಮಾಡಿದರು. ಬಳಿಕ ಕ್ಷೇತ್ರದ ಗ್ರಾಮೀಣ ಪ್ರದೇಶದಲ್ಲಿ ಬಹುತೇಕ ಮತಕೇಂದ್ರಗಳಿಗೆ ಭೇಟಿ ಮಾಡಿ, ಪರಿಶೀಲನೆ ನಡೆಸಿದರೆ, ನಗರ ಪ್ರದೇಶದಲ್ಲಿ ಜೆಡಿಎಸ್ ಪರವಾಗಿ ನಗರಸಭೆ ಅಧ್ಯಕ್ಷ ಎಚ್.ಎಸ್. ಮಂಜು, ರಾಮಚಂದ್ರ ಸಹೋದರ ಸುರೇಶ್ ಮತಕೇಂದ್ರಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಮಂಡ್ಯ ಕೈ ಅಭ್ಯರ್ಥಿ ಗಣಿಗ ರವಿಕುಮಾರ್ ತಾಲೂಕಿನ ಶಿವಪುರ ಗ್ರಾಮದಲ್ಲಿ ಕುಟುಂಬ ಸಮೇತ ತೆರಳಿ ಮತದಾನ ಮಾಡಿ, ಹಲವು ಮತಕೇಂದ್ರಗಳಿಗೆ ಭೇಟಿ ಕೊಟ್ಟರೆ, ಬಿಜೆಪಿ ಅಭ್ಯರ್ಥಿ ಅಶೋಕ್ ಜಯರಾಂ ನಗರದ ಅಶೋಕ ನಗರದ ಮತಗಟ್ಟೆ 203 ರಲ್ಲಿ ಸ್ನೇಹಿತರೊಂದಿಗೆ ತೆರಳಿ ಮತ ಚಲಾಯಿಸಿದರು. ಮತ್ತೊಂದೆಡೆ ಜೆಡಿಎಸ್ ಬಂಡಾಯ ಅಭ್ಯರ್ಥಿ ಕೆ.ಎಸ್.ವಿಜಯಾನಂದ ಕೀಲಾರ ಗ್ರಾಮದಲ್ಲಿ ಹಕ್ಕು ಚಲಾಯಿಸಿದರೆ, ಮಂಡ್ಯ ಕ್ಷೇತ್ರದ ಹಾಲಿ ಶಾಸಕ ಎಂ.ಶ್ರೀನಿವಾಸ್ ಸ್ವಗ್ರಾಮ ಹನಕೆರೆಯಲ್ಲಿ ಮತ ಚಲಾಯಿಸಿದರು.

ಇದಲ್ಲದೇ ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಫ್ರುಲ್ಲಾಖಾನ್ ಮಂಡ್ಯದ ಗಾಂಧಿನಗರದಲ್ಲಿ, ಮಾಜಿ ಸಚಿವ ಎಂ.ಎಸ್. ಆತ್ಮಾನಂದ ಸುಭಾಷ್ ನಗರದ ಮತಕೇಂದ್ರದಲ್ಲಿ, ಮಾಜಿ ಶಾಸಕ ಹೆಚ್.ಬಿ.ರಾಮು ತಾಲೂಕಿನ ಹೊಳಲು ಗ್ರಾಮದಲ್ಲಿ, ಮಾಜಿ ಶಾಸಕ ಜಿ.ಬಿ.ಶಿವಕುಮಾರ್ ತಾಲೂಕಿನ ಗಾಣದಾಳು ಗ್ರಾಮದಲ್ಲಿ ಹಕ್ಕು ಚಲಾಯಿಸಿದರೆ, ಮಂಡ್ಯದ ಹಳೆ ಬೂದನೂರಿನಲ್ಲಿ 110 ವರ್ಷದ ಶತಾಯುಷಿ ಅಜ್ಜಿ ತಿಮ್ಮಮ್ಮ ತಾವೇ ನಡೆದುಕೊಂಡು ಬಂದು ಮತದಾನ ಮಾಡಿದರು. ಈ ಸಂದರ್ಭದಲ್ಲಿ ಅಜ್ಜಿಯ ಮತದಾನ ಪ್ರಜ್ಞೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಚುನಾವಣಾ ಅಧಿಕಾರಿಗಳು ಅವರನ್ನು ಸನ್ಮಾನಿಸಿ, ಬೀಳ್ಕೊಟ್ಟರು. ಮತ್ತೊಂದೆಡೆ ಮಾಜಿ ಸಂಸದೆ ರಮ್ಯಾ ಈ ಬಾರಿಯೂ ಮತದಾನಕ್ಕೆ ಗೈರು ಹಾಜರಾದರು. ಮಂಡ್ಯದ ವಿದ್ಯಾನಗರದಲ್ಲಿ ರಮ್ಯಾ ತಮ್ಮ ಮತದಾನದ ಹಕ್ಕು ಹೊಂದಿದ್ದಾರೆ.


ದರ್ಶನ್ ಪುಟ್ಟಣ್ಣಯ್ಯ ದಂಪತಿ.

ಮೇಲುಕೋಟೆ: ಮೇಲುಕೋಟೆ ಕ್ಷೇತ್ರದಲ್ಲಿ ಸಣ್ಣಪುಟ್ಟ ಗಲಾಟೆ ಗದ್ದಲ ಬಿಟ್ಟರೆ ಉಳಿದಂತೆ ಶಾಂತಿಯುತವಾಗಿ ಮತದಾನ ನಡೆಯಿತು.

ಜೆಡಿಎಸ್ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಅವರು ಪತ್ನಿ ನಾಗಮ್ಮ, ಪುತ್ರ ಸಿ.ಪಿ.ಶಿವರಾಜು, ಸೊಸೆ ತನುಶ್ರೀ, ಅಣ್ಣನ ಮಗ ಸಿ.ಅಶೋಕ್ ಅವರೊಂದಿಗೆ ಆಗಮಿಸಿ ತಾಲೂಕಿನ ಚಿನಕುರಳಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಆಗಮಿಸಿ ಸರತಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು. ಬಿಜೆಪಿ ಅಭ್ಯರ್ಥಿ ಡಾ.ಎನ್.ಎಸ್. ಇಂದ್ರೇಶ್ ಅವರು ಪತ್ನಿ ಪರಿಮಳ ಅವರೊಂದಿಗೆ ಆಗಮಿಸಿ ಪಟ್ಟಣದ ವಿಜಯ ಕಾಲೇಜಿನ ಮತಗಟ್ಟೆಗೆ ತೆರಳಿ ಮತದಾನ ಮಾಡಿದರು. ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರು ಕ್ಯಾತನಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಗೆ ಪತ್ನಿ ಹಾಗೂ ತಾಯಿ ಸುನೀತಾ ಪುಟ್ಟಣ್ಣಯ್ಯ ಅವರೊಂದಿಗೆ ಆಗಮಿಸಿ ಮತದಾನ ಮಾಡಿದರು. ಬೇಬಿ ಗ್ರಾಮದ ದುರ್ದಂಡೇಶ್ವರ ಮಠದ ಪೀಠಾಧ್ಯಕ್ಷ ಡಾ.ಶ್ರೀ ತ್ರಿನೇತ್ರಮಹಂತಸ್ವಾಮೀಜಿ ಅವರು ಬೇಬಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಗೆ ಆಗಮಿಸಿ ಹಕ್ಕು ಚಲಾಯಿಸಿದರು.

ಹಾಡ್ಯದಲ್ಲಿ ಕೈಕೊಟ್ಟ ಇವಿಎಂ: ಮಂಡ್ಯ ತಾಲೂಕಿನ ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾಡ್ಯದಲ್ಲಿ ಇವಿಎಂ ಕೈಕೊಟ್ಟ ಪರಿಣಾಮ ಮತದಾನ ಪ್ರಕ್ರಿಯೆ ತಡವಾಗಿ ಆರಂಭವಾಯಿತು.



ಮದ್ದೂರು: ಮದ್ದೂರು ಕ್ಷೇತ್ರ ವ್ಯಾಪ್ತಿ ನಡೆದ ಮತದಾನ ಪ್ರಕ್ರಿಯೆ ಬಿರುಸಿನಿಂದ ಆರಂಭಗೊಂಡು ಮಧ್ಯಾಹ್ನ ಬಿಸಿಲೇರುತ್ತಿದ್ದಂತೆ ನಿಧಾನಗತಿಗೆ ಜಾರಿತಲ್ಲದೇ ತಾಲೂಕಿನಾದ್ಯಂತ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ.


ನರೇಂದ್ರ ಸ್ವಾಮಿ

ಸಂಸದೆ ಸುಮಲತಾ ಅಂಬರೀಷ್ ತಾಲೂಕಿನ ದೊಡ್ಡರಸಿನಕೆರೆ ಗ್ರಾಮದಲ್ಲಿ ಸರತಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರೆ, ಶಾಸಕ ಡಿ.ಸಿ.ತಮ್ಮಣ್ಣ ಕುಟುಂಬದೊಂದಿಗೆ ತಾಲೂಕಿನ ಡಿ.ಎ.ಕೆರೆ ಗ್ರಾಮದಲ್ಲಿ, ಕಾಂಗ್ರೆಸ್ ಅಭ್ಯರ್ಥಿ ಕೆ.ಎಂ.ಉದಯ್ ಪತ್ನಿಯೊಟ್ಟಿಗೆ ಸ್ವಗ್ರಾಮ ಕದಲೂರು ಮತಗಟ್ಟೆಯಲ್ಲಿ, ಬಿಜೆಪಿ ಅಭ್ಯರ್ಥಿ ಎಸ್.ಪಿ.ಸ್ವಾಮಿ, ಪತ್ನಿ, ಜಿ.ಪಂ. ಮಾಜಿ ಅಧ್ಯಕ್ಷೆ ನಾಗರತ್ನ ಸ್ವಾಮಿ ಜತೆಗೂಡಿ ಸಾದೊಳಲು ಗ್ರಾಮದ ಸರಕಾರಿ ಶಾಲೆಯ ಮತಗಟ್ಟೆಯಲ್ಲಿ, ಎಂಎಲ್‌ಸಿ ದಿನೇಶ್‌ಗೂಳಿಗೌಡ ಮದ್ದೂರು ಪಟ್ಟಣದಲ್ಲಿ, ಮತ್ತೋರ್ವ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ತಾಲೂಕಿನ ಗುರುದೇವರಹಳ್ಳಿಯಲ್ಲಿ ತಮ್ಮ ಹಕ್ಕು ಚಲಾಯಿಸಿದರು. ಮಾಜಿ ಶಾಸಕ ಬಿ.ರಾಮಕೃಷ್ಣ ಕೆ.ಹೊನ್ನಲಗೆರೆ ಮತಗಟ್ಟೆಯಲ್ಲಿ ಮತದಾನ ಮಾಡಿದರೆ, ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು ಪಟ್ಟಣದ ಬಿಇಓ ಕಚೇರಿ ಮತಗಟ್ಟೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ನಾರಾಯಣಪುರದಲ್ಲಿ ಕಾಂಗ್ರೆಸ್–ಜೆಡಿಎಸ್ ಜಟಾಪಟಿ

ತಾಲೂಕಿನ ನಾರಾಯಣಪುರ ಗ್ರಾಮದಲ್ಲಿ ರೈತಸಂಘದ ಕಾರ್ಯಕರ್ತರು ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ಜಟಾಪಟಿ ನಡೆದಿದೆ. ವಯೋವೃದ್ಧರೊಬ್ಬರನ್ನು ಕರೆತಂದು ಮತದಾನ ಮಾಡುವ ವಿಚಾರವಾಗಿ ಜೆಡಿಎಸ್–ರೈತಸಂಘದ ನಡುವೆ ಗಲಾಟೆ ನಡೆದಿದೆ. ಆ ವೇಳೆಗೆ ಶಾಸಕ ಸಿ.ಎಸ್. ಪುಟ್ಟರಾಜು ಅವರು ಮತಗಟ್ಟೆ ಪರಿಶೀಲನೆಗೆ ಆಗಮಿಸಿದ್ದಾರೆ. ಜೆಡಿಎಸ್ ಕಾರ್ಯಕರ್ತರು ಶಾಸಕರಿಗೆ ಗಲಾಟೆ ವಿಚಾರವನ್ನು ಮುಟ್ಟಿಸುತ್ತಿದ್ದ ಸಂದರ್ಭದಲ್ಲಿ ರೈತಸಂಘದ ಕಾರ್ಯಕರ್ತರು ಗಲಾಟೆ ಆರಂಭಿಸಿದ್ದಾರೆ. ಗಲಾಟೆ ನಡುವೆ ರೈತಸಂಘದ ಕಾರ್ಯಕರ್ತನೋರ್ವ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ ಮಾಡಲು ಮುಂದಾದಾಗ ಶಾಸಕ ಸಿ.ಎಸ್.ಪುಟ್ಟರಾಜು ವಿಡಿಯೋ ತೆಗೆಯದಂತೆ ಅಡ್ಡಿಪಡಿಸಿದ್ದು, ಈ ಸಂದರ್ಭದಲ್ಲಿ ಕಾರ್ಯಕರ್ತರ ನಡುವೆ ತಳ್ಳಾಟ ನೂಕಾಟ ನಡೆದಿದೆ. ಗಲಾಟೆ ತೀವ್ರಗೊಳ್ಳುತ್ತಿದ್ದಂತೆಯೇ ಪೊಲೀಸರು ಆಗಮಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿ ಜಮಾಯಿಸಿದ ಜೆಡಿಎಸ್–ರೈತಸಂಘದ ಕಾರ್ಯಕರ್ತರನ್ನು ಚದುರಿಸಿದ್ದಾರೆ. ಬಳಿಕ ಶಾಸಕ ಸಿ.ಎಸ್.ಪುಟ್ಟರಾಜು ಅವರು ಇಬ್ಬರನ್ನು ಸಮಾಧಾನಪಡಿಸಿ ಅಲ್ಲಿಂದ ವಾಪಸ್ಸಾಗಿದ್ದಾರೆ. ನಂತರ ಗ್ರಾಮದಲ್ಲಿ ಶಾಂತಿಯುತ ಮತದಾನ ನಡೆದಿದೆ.

ಕೆ.ಆರ್.ಪೇಟೆ: ಕೆ.ಅರ್.ಪೇಟೆಯಲ್ಲಿ ಸಣ್ಣಪುಟ್ಟ ಗಲಾಟೆಗಳು ಹೊರತಪಡಿಸಿ, ಬಹುತೇಕ ಶಾಂತಿಯುತ ಮತದಾನ ನಡೆಯಿತು. ಬಿಜೆಪಿ ಅಭ್ಯರ್ಥಿ ಹಾಗೂ ಸಚಿವ ಕೆ.ಸಿ.ನಾರಾಯಣಗೌಡ ಅವರು ಪಟ್ಟಣದ ಬಾಲಕಿಯರ ಸ್ವತಂತ್ರ ಪದವಿಪೂರ್ವ ಕಾಲೇಜಿನ ಮತಗಟ್ಟೆ ನಂ.134ರಲ್ಲಿ ಪತ್ನಿ ದೇವಕಿ, ಪುತ್ರಿ ಲೀನಾ ಹಾಗೂ ಅಳಿಯ ಕರಣ್ ಅವರೊಂದಿಗೆ ಆಗಮಿಸಿ ಮತ ಚಲಾಯಿಸಿದರು. ಕಾಂಗ್ರೆಸ್ ಅಭ್ಯರ್ಥಿ ಬಿ.ಎಲ್. ದೇವರಾಜು ಅವರು ತಮ್ಮ ಪತ್ನಿ ಸರ್ವಮಂಗಳಾ ಅವರೊಂದಿಗೆ ತಮ್ಮ ಸ್ವಗ್ರಾಮವಾದ ಬಂಡಿಹೊಳೆಯ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರೆ, ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು ಹರಳಹಳ್ಳಿ ಗ್ರಾಮದ ಮತಗಟ್ಟೆಯಲ್ಲಿ ತಮ್ಮ ಪತ್ನಿ ಜೊತೆಗೆ ಮತ ಚಲಾಯಿಸಿದರು.


ಕೆ.ಸಿ. ನಾರಾಯಣಗೌಡ

ಹರಿಹರಪುರ ಗ್ರಾಮದ ಮತಗಟ್ಟೆಯಲ್ಲಿ ಮಂದಗತಿಯಲ್ಲಿ ಮತದಾನ ನಡೆದು ಐನೂರಕ್ಕೂ ಹೆಚ್ಚಿನ ಮತದಾರರು ಗಂಟೆಗಟ್ಟಲೆ ಸರತಿಯ ಸಾಲಿನಲ್ಲಿ ಕಾದು ಮತ ಚಲಾಯಿಸಿದರು. ವಯಸ್ಸಾದವರು ಹಾಗೂ ವಿಶೇಷಚೇತನರು ತಳ್ಳುವ ಕುರ್ಚಿಗಳು ಹಾಗೂ ಆಟೋರಿಕ್ಷಾಗಳಲ್ಲಿ ಬಂದು ಸಂಬಂಧಿಗಳ ಸಹಾಯದಿಂದ ಮತ ಚಲಾಯಿಸಿದರು.

ಉಳಿದಂತೆ ಕ್ಷೇತ್ರದ ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಕೆ.ಆರ್.ಪೇಟೆ ಪಟ್ಟಣದ ಕೆಪಿಎಸ್ ಸ್ಕೂಲ್‌ನ ಮತಗಟ್ಟೆಯಲ್ಲಿ ಪತ್ನಿ ಜೊತೆ ಆಗಮಿಸಿ ಮತ ಚಲಾಯಿಸಿದರೆ, ಮಾಜಿ ಶಾಸಕ ಬಿ.ಪ್ರಕಾಶ್ ಪತ್ನಿ, ಜಿ.ಪಂ. ಮಾಜಿ ಸದಸ್ಯೆ ಹೇಮಾ ಅವರೊಂದಿಗೆ ಬೊಮ್ಮೇನಹಳ್ಳಿಯಲ್ಲಿ ಹಕ್ಕು ಚಲಾಯಿಸಿದರು.

ನಾಗಮಂಗಲ: ನಾಗಮಂಗಲ ತಾಲೂಕಿನ ಕಸಬಾ, ಬೆಳ್ಳೂರು, ಬಿಂಡಿಗನವಿಲೆ, ಹೊಣಕೆರೆ, ದೇವಲಾಪುರ ಹಾಗೂ ಕೊಪ್ಪ ಸೇರಿದಂತೆ ಒಟ್ಟು 6 ಹೋಬಳಿಗಳ 257 ಮತ ಕೇಂದ್ರಗಳಲ್ಲಿ ಶಾಂತಿಯುತವಾಗಿ ಮತದಾನ ಪ್ರಕ್ರಿಯೆ ನಡೆಯಿತು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದ ಶ್ರೀಗಳು ಚುಂಚನಗಿರಿ ಮತಗಟ್ಟೆಯಲ್ಲಿ ಮತ ಕೇಂದ್ರದಲ್ಲಿ, ಜೆಡಿಎಸ್ ಅಭ್ಯರ್ಥಿ ಕೆ. ಸುರೇಶ್‌ಗೌಡ ಹಾಗೂ ಬಿಜೆಪಿ ಅಭ್ಯರ್ಥಿ ಸುಧಾ ಶಿವರಾಮೇಗೌಡ ಪಟ್ಟಣದ ಟಿ.ಬಿ.ಬಡಾವಣೆಯ ತಾಲೂಕು ಕಚೇರಿ ಮತಗಟ್ಟೆಗಳಲ್ಲಿ, ಕಾಂಗ್ರೆಸ್ ಅಭ್ಯರ್ಥಿ ಎನ್.ಚಲುವರಾಯಸ್ವಾಮಿ ಸ್ವಗ್ರಾಮ ಇಜ್ಜಲಘಟ್ಟದಲ್ಲಿ ಮತ ಚಲಾಯಿಸಿದರು. ಮಾಜಿ ಸಂಸದ ಎಲ್.ಆರ್.ಶಿವರಾಮೇಗೌಡ ಸಹ ಟಿ.ಬಿ.ಬಡಾವಣೆಯ ಮತಕೇಂದ್ರದಲ್ಲಿ ಹಕ್ಕು ಚಲಾಯಿಸಿದರು.


ಚಲುವರಾಯಸ್ವಾಮಿ ದಂಪತಿ


ಶ್ರೀರಂಗಪಟ್ಟಣ: ಶ್ರೀರಂಗಪಟ್ಟಣದ 249 ಬೂತ್‌ಗಳಲ್ಲಿಯೂ ಸಹ ಬಹುತೇಕ ಶಾಂತಿಯುತವಾಗಿ ಮತದಾನ ಪ್ರಕ್ರಿಯೆ ನಡೆದರೆ, ತಾಲೂಕಿನ ಅರಕೆರೆ ಗ್ರಾಮದಲ್ಲಿ ಜೆಡಿಎಸ್ ಅಭ್ಯರ್ಥಿ ರವೀಂದ್ರ ಶ್ರೀಕಂಠಯ್ಯ, ತಮ್ಮ ತಾಯಿ ಹಾಗೂ ಮಾಜಿ ಶಾಸಕಿ ಪಾರ್ವತಮ್ಮ ಶ್ರೀಕಂಠಯ್ಯ ಮತ್ತು ಪತ್ನಿ ಗೀತಾ ಜೊತೆಗೆ ಆಗಮಿಸಿ ಹಕ್ಕು ಚಲಾಯಿಸಿದರೆ, ಕಾಂಗ್ರೆಸ್ ಅಭ್ಯರ್ಥಿ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ, ತಮ್ಮ ತಾಯಿ ಹಾಗೂ ಮಾಜಿ ಶಾಸಕಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ ಮತ್ತು ಪತ್ನಿ ಸುಮತಿ ಜೊತೆಗೆ ಆಗಮಿಸಿ ಹಕ್ಕು ಚಲಾಯಿಸಿದರು.


ಮಂಡ್ಯ ತಾಲೂಕಿನ ಇಂಡುವಾಳು ಗ್ರಾಮದಲ್ಲಿ ಬಿಜೆಪಿ ಅಭ್ಯರ್ಥಿ ಸಚ್ಚಿದಾನಂದ ಕುಟುಂಬಸ್ಥರು ಹಾಗೂ ಬೆಂಬಲಿಗರೊಡನೆ ಹಕ್ಕು ಚಲಾಯಿಸಿದರೆ, ಜೆಡಿಎಸ್ ಬಂಡಾಯ ಅಭ್ಯರ್ಥಿ ತಗ್ಗಹಳ್ಳಿ ವೆಂಕಟೇಶ್ ಕುಟುಂಬಸ್ಥರೊಂದಿಗೆ ಮಂಡ್ಯ ತಾಲೂಕಿನ ತಗ್ಗಹಳ್ಳಿಯಲ್ಲಿ ಮತಚಲಾಯಿಸಿದರೆ, ಬಿಜೆಪಿ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ ಮಂಡ್ಯದ ಯತ್ತಗದಹಳ್ಳಿಯಲ್ಲಿ ಮತದಾನ ಮಾಡಿದರು.

ಮಳವಳ್ಳಿ: ಜಿಲ್ಲೆಯ ಏಕೈಕ ಮೀಸಲು ವಿಧಾನಸಭಾ ಕ್ಷೇತ್ರ ಮಳವಳ್ಳಿ ತಾಲೂಕಿನಾದ್ಯಂತ ಮತದಾನ ಪ್ರಕ್ರಿಯೆ ಯಾವುದೇ ಅಹಿತಕರ ಘಟನೆ ನಡೆಯದೇ ಶಾಂತಿಯುತವಾಗಿ ನಡೆಯಿತು.

ತಾಲೂಕಿನ ಪೂರಿಗಾಲಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿ ಕುಟುಂಬದ ಸಮೇತ ಹಕ್ಕು ಚಲಾಯಿಸಿದರೆ, ಜೆಡಿಎಸ್ ಅಭ್ಯರ್ಥಿ ಹಾಗೂ ಶಾಸಕ ಡಾ.ಕೆ.ಅನ್ನದಾನಿ ತಮ್ಮ ಸ್ವಗ್ರಾಮ ಹುಸ್ಕೂರಿನಲ್ಲಿ, ಬಿಜೆಪಿ ಅಭ್ಯರ್ಥಿ ಮುನಿರಾಜು ತಾಲ್ಲೂಕಿನ ಅಟುವನಹಳ್ಳಿಯಲ್ಲಿ, ಮಾಜಿ ಸಚಿವ ಬಿ. ಸೋಮಶೇಖರ್ ತಾಲೂಕಿನ ಹೊಸಹಳ್ಳಿಯಲ್ಲಿ ಮತದಾನ ಮಾಡಿದರು.


ಇನ್ಫೋಸಿಸ್ ನಾರಾಯಣಮೂರ್ತಿ ಹಾಗೂ ಅವರ ಪತ್ನಿ ಡಾ. ಸುಧಾ ಮೂರ್ತಿ ಬೆಂಗಳೂರಿನಲ್ಲಿ ಮತ ಚಲಾಯಿಸಿದರು.


ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ. ಚಂದ್ರಶೇಖರ ಕಂಬಾರ ಬುಧವಾರ ಮತ ಚಲಾಯಿಸಿದರು.


ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಬುಧವಾರ ಮಂಗಳೂರಿನಲ್ಲಿ ಮತ ಚಲಾಯಿಸಿದರು.


ಕೆ.ಆರ್. ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ. ಸೋಮಶೇಖರ್ ತಮ್ಮ ಕುಟುಂಬ ಸದಸ್ಯರೊಂದಿಗೆ ಮತ ಚಲಾಯಿಸಿದರು.


ಬೆಂಗಳೂರಲ್ಲಿ ಬುಧವಾರ ಮತ ಚಲಾಯಿಸಿದ ನಂತರ ರಿಯಲ್ ಸ್ಟಾರ್ ಉಪೇಂದ್ರ ವಯೋವೃದ್ಧ ಮತದಾರರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂತೋಷಪಟ್ಟರು.

ಡೆಲ್ಲಿ ಕ್ಯಾಪಿಟಲ್ಸ್ 27 ರನ್‌ಗಳಿಂದ ಸೋಲಿಸಿದ ಚೆನ್ನೈ

ಪ್ಲೇಆಫ್ ಸನಿಹಕ್ಕೆ ಧೋನಿ ಪಡೆ!



ಚೆನ್ನೈ, ಮೇ 10– ಐಪಿಎಲ್ 2023ರ 55ನೇ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು 27 ರನ್‌ಗಳಿಂದ ಮಣಿಸಿದೆ.

ಚೆನ್ನೈನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಚೆನ್ನೈ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 167 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 140 ರನ್ ಗಳಿಸಲಷ್ಟೇ ಶಕ್ತವಾಯಿತು.

ಚೆನ್ನೈ ಪರ ಶಿವಂ ದುಬೆ ಗರಿಷ್ಠ 25 ರನ್ ಗಳಿಸಿದರು. ಮಿಚೆಲ್ ಮಾರ್ಷ್ ಮೂರು ವಿಕೆಟ್ ಪಡೆದರು. 19ನೇ ಓವರ್‌ನಲ್ಲಿ ಖಲೀಲ್ ಅಹ್ಮದ್ ಎರಡು ಸಿಕ್ಸರ್‌ಗಳನ್ನು ಸಿಡಿಸಿದ ಧೋನಿ ಚೆನ್ನೈ ಗೌರವಾನ್ವಿತ ಸ್ಕೋರ್‌ಗೆ ಕೊಂಡೊಯ್ದರು. ಇದಕ್ಕೂ ಮುನ್ನ ಡೆಲ್ಲಿ ಬೌಲರ್‌ಗಳು ಚೆನ್ನೈ ಬ್ಯಾಟ್ಸ್‌ಮನ್‌ಗಳನ್ನು ಒತ್ತಡಕ್ಕೆ ಸಿಲುಕಿಸಿದ್ದರು. ಯಾವುದೇ ಬ್ಯಾಟ್ಸ್‌ಮನ್‌ಗಳು ಉತ್ತಮ ಆರಂಭವನ್ನು ದೊಡ್ಡ ಇನ್ನಿಂಗ್ಸ್ ಆಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ ಶಿವಂ ದುಬೆ ಗರಿಷ್ಠ 25 ರನ್ ಗಳಿಸಿದರು. ರಿತುರಾಜ್ ಗಾಯಕ್ವಾಡ್ 24, ಅಂಬಟಿ ರಾಯುಡು 23 ಮತ್ತು ಅಜಿಂಕ್ಯ ರಹಾನೆ 21 ರನ್ ಕೊಡುಗೆ ನೀಡಿದರು.

ಚೆನ್ನೈ ಸೂಪರ್ ಕಿಂಗ್ಸ್ ಪರ ಡೆವೊನ್ ಕಾನ್ವೆ ಮತ್ತು ರಿತುರಾಜ್ ಗಾಯಕ್ವಾಡ್ ಮೊದಲ ವಿಕೆಟ್‌ಗೆ 32 ರನ್ ಜೊತೆಯಾಟ ನೀಡಿದರು. ಕಾನ್ವೇ 13 ಎಸೆತಗಳಲ್ಲಿ 10 ರನ್ ಗಳಿಸಿ ಔಟಾದರು. ಇದಾದ ಬಳಿಕ ಗಾಯಕ್ವಾಡ್ ಕೂಡ ಪವರ್‌ಪ್ಲೇ ಬಳಿಕ ಮುಂದಿನ ಓವರ್‌ನಲ್ಲಿ ಪೆವಿಲಿಯನ್‌ಗೆ ಮರಳಿದರು. ರಿತುರಾಜ್ 18 ಎಸೆತಗಳಲ್ಲಿ 24 ರನ್ ಗಳಿಸಿದರು.

ಅಕ್ಷರ್ ಪಟೇಲ್ ಎರಡೂ ವಿಕೆಟ್ ಪಡೆದರು. ಮೊಯಿನ್ ಅಲಿ 12 ಎಸೆತಗಳಲ್ಲಿ 7 ರನ್ ಗಳಿಸಿ ಔಟಾದರು. ಅಜಿಂಕ್ಯ ರಹಾನೆ 20 ಎಸೆತಗಳಲ್ಲಿ 21 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಶಿವಂ ದುಬೆ 12 ಎಸೆತಗಳಲ್ಲಿ 25 ರನ್ ಗಳಿಸಿದರು. ಅಂಬಟಿ 23 ರನ್ ಕೊಡುಗೆ ನೀಡಿದರು.

ಮತದಾನಕ್ಕೂ ಮುನ್ನ ವೃದ್ಧೆ ಸಾವು; ಮತ್ತೊಂದೆಡೆ ವೋಟ್ ಹಾಕಿದ ನಂತರ ವ್ಯಕ್ತಿ ನಿಧನ

ಬೆಳಗಾವಿ: ಮತ ಚಲಾಯಿಸಲು ಬಂದಿದ್ದ ವೃದ್ಧೆ ಕುಸಿದು ಬಿದ್ದು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಸವದತ್ತಿ ಯಲ್ಲಮ್ಮ ಕ್ಷೇತ್ರ ವ್ಯಾಪ್ತಿಯ ಯರಝರ್ವಿಯಲ್ಲಿ ನಡೆದಿದೆ.

ಯರಝರ್ವಿ ಗ್ರಾಮದ 70 ವರ್ಷದ ಪಾರವ್ವ ಸಿದ್ನಾಳ ಮತದಾನಕ್ಕೂ ಮುನ್ನ ಮತಗಟ್ಟೆ ಆವರಣದಲ್ಲಿ ಲೋ ಬಿಪಿಯಿಂದ ಕುಸಿದು ಬಿದ್ದು ನಿಧನರಾಗಿದ್ದಾರೆ. ಸವದತ್ತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮತ್ತೊಂದೆಡೆ, ಹಾಸನದಲ್ಲಿ ಮತದಾನ ಮಾಡಿ ಹೊರ ಬಂದ ಬಳಿಕ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಜಿಲ್ಲೆ ಬೇಲೂರು ತಾಲೂಕಿನ ಚಿಕ್ಕೋಲೆ ಗ್ರಾಮದಲ್ಲಿ ನಡೆದಿದೆ. ಚಿಕ್ಕೋಲೆ ಗ್ರಾಮದ ಜಯಣ್ಣ(49) ಮೃತ ದುರ್ದೈವಿ. ಚಿಕ್ಕೋಲೆ ಗ್ರಾಮದಲ್ಲಿ ಮತ ಚಲಾಯಿಸಿ ಹೊರಗೆ ಬಂದ ಬಳಿಕ ಹೃದಯಾಘಾತ ಮತಗಟ್ಟೆ ಆವರಣದಲ್ಲೇ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಡಿವೈಡರ್‌ಗೆ ಕಾರು ಡಿಕ್ಕಿ; ಅದರಲ್ಲಿದ್ದವರು ಪಾರು

ಮೈಸೂರು, ಮೇ 10(ಎಸ್‌ಪಿಎನ್)–ಕಾರಿನ ಚಕ್ರ ಬ್ಲ್ಯಾಸ್ಟ್ ಆಗಿ ರಸ್ತೆ ವಿಭಜಕಕ್ಕೆ (ಡಿವೈ ಡರ್) ಡಿಕ್ಕಿ ಹೊಡೆದ ಪರಿಣಾಮ ಚಾಲಕ ಹಾಗೂ ಪ್ರಯಾಣಿಕರು ಗಾಯ ಗೊಂಡಿದ್ದಾರೆ. ಅದೃಷ್ಟವಶಾತ್ ಯಾರಿಗೂ ಹೆಚ್ಚಿನ ಅನಾಹುತವಾಗಿಲ್ಲ.



ಗದ್ದಿಗೆ ರಸ್ತೆಯಿಂದ ಮೈಸೂರು ಕಡೆಗೆ ಬರುತ್ತಿದ್ದ ಕೆ.ಎ.09 ಎಂಸಿ 5991 ನಂಬರಿನ ಕ್ರೆಟಾ ಕಾರು, ಆಯಿಷ್ ಕಾಲೇಜಿನ ಪಂಚವಟಿ ವಸತಿ ನಿಲಯದ ಮುಂಭಾಗದಲ್ಲಿ ಬಂದಾಗ ಚಕ್ರ ಬ್ಲ್ಯಾಸ್ಟ್ ಆಗಿ ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆಯಿತು. ಒಂದು ವೇಳೆ ಕಾರು ಡಿವೈಡರ್ ದಾಟಿ ಬಲ ಭಾಗದ ರಸ್ತೆಗೆ ನುಗ್ಗಿದ್ದರೆ, ದೊಡ್ಡ ಅನಾಹುತ ಸಂಭವಿಸುತ್ತಿತ್ತು ಎಂದು ಪ್ರತ್ಯಕ್ಷದರ್ಶಿಯೊಬ್ಬರು 'ಮೈಸೂರು ಮಿತ್ರ'ಗೆ ತಿಳಿಸಿದ್ದಾರೆ.

ಹಂಪ್ ನಿರ್ಮಾಣಕ್ಕೆ ಒತ್ತಾಯ: ಮೈಸೂರು–ಗದ್ದಿಗೆ ರಸ್ತೆಯ ಪಂಚವಟಿ (ಆಯಿಷ್) ವಿದ್ಯಾರ್ಥಿ ವಸತಿ ನಿಲಯದ ಮುಂಭಾಗದ ರಸ್ತೆ ಇಳಿಜಾರಿನಿಂದ ಕೂಡಿರುವುದರಿಂದ ಎರಡು ಕಡೆಯಿಂದ ಬರುವ ವಾಹನಗಳು ವೇಗವಾಗಿ ಸಂಚರಿಸುತ್ತಿವೆ. ಈ ಜಾಗದಲ್ಲಿ ರಸ್ತೆ ಹಂಪ್‌ಗಳನ್ನು ನಿರ್ಮಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮತದಾನಕ್ಕೆ ತೆರಳುತ್ತಿದ್ದ ವ್ಯಕ್ತಿ ಕಾಡಾನೆ ದಾಳಿಗೆ ಬಲಿ

ಹನೂರು, ಮೇ 10– ಮತದಾನ ಮಾಡಲು ಹಳೆ ಮಾರ್ಟಳ್ಳಿ ಗ್ರಾಮದಿಂದ ತೋಕೆರೆ ಗ್ರಾಮಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಕಾಡಾನೆ ದಾಳಿ ನಡೆಸಿದ ಪರಿಣಾಮ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಮೃತ ವ್ಯಕ್ತಿಯನ್ನು ಹನೂರು ತಾಲೂಕಿನ ತೋಕರೆ ಗ್ರಾಮದ ಪುಟ್ಟಸ್ವಾಮಿ (42) ಎಂದು ಗುರುತಿಸಲಾಗಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಲೆ ಮಾದೇಶ್ವರ ವನ್ಯಜೀವಿಧಾಮ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಹಳೆ ಮಾಟಳ್ಳಿ ಗ್ರಾಮದಿಂದ ಮಲೆ ಮಹದೇಶ್ವರ ಬೆಟ್ಟ ಗ್ರಾಪಂ ವ್ಯಾಪ್ತಿಯ ತೋಕೆರೆ ಗ್ರಾಮಕ್ಕೆ ಪತಿ ಪತ್ನಿ ನಡೆದುಕೊಂಡು ಹೋಗುತ್ತಿದ್ದ ವೇಳೆ ಪತಿಯ ಮೇಲೆ ಕಾಡಾನೆ ದಾಳಿ ನಡೆಸಿದೆ. ಕಾಡಾನೆ ದಾಳಿಯಿಂದಾಗಿ ತನ್ನ ಪತಿ ಪುಟ್ಟಸ್ವಾಮಿ ಸ್ಥಳದಲ್ಲಿ ಮೃತಪಟ್ಟಿದ್ದಾರೆ ಎಂದು ಪತ್ನಿ ಗ್ರಾಮಸ್ಥರಿಗೆ ಮಾಹಿತಿ ನೀಡಿದ್ದಾರೆ.

ಈ ದುರ್ಘಟನೆ ಕುರಿತಂತೆ ಮಾಹಿತಿ ತಿಳಿದ ಗ್ರಾಮಸ್ಥರು ಕೂಡಲೇ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದು, ತಕ್ಷಣವೇ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕಾಡಂಚಿನ ಗ್ರಾಮಗಳ ರಸ್ತೆ ತೀವ್ರ ಹದಗೆಟ್ಟಿರುವುದರಿಂದ ದ್ವಿಚಕ್ರವಾಹನ ಹಾಗೂ ಇನ್ನಿತರ ವಾಹನಗಳಲ್ಲಿ ತೆರಳಲು ಸಾಧ್ಯವಾಗದೇ ಇರುವುದರಿಂದ ಇಂತಹ ಘಟನೆಗಳು ಮರುಕಳಿಸುತ್ತಿವೆ. ಇನ್ನು ಮುಂದಾದರೂ ಜಿಲ್ಲಾಡಳಿತ ಹಾಗೂ ಜನಪ್ರತಿನಿಧಿಗಳು ಕಾಡಂಚಿನ ಗ್ರಾಮಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದ್ದಾರೆ.


ಮೈಗ್ರಾಪದಿಂದ ಮತ್ತೊಂದು ಪ್ರಜಾಪ್ರಭುತ್ವ ಹಬ್ಬಕ್ಕೆ ತಯಾರಿ!

ಮೈಸೂರು, ಮೇ 10– ವಿಧಾನಸಭೆ ಚುನಾವಣೆ ಮುಗಿದಿದೆ. ಇನ್ನು ಮುಂದೆ ಬರುವ ಪ್ರಜಾಪ್ರಭುತ್ವದ ಇನ್ನೊಂದು ದೊಡ್ಡ ಹಬ್ಬದಲ್ಲಿ ಮೈಸೂರಿನ ನಾಗರಿಕರ ಪಾತ್ರ ಹೇಗಿರಲಿದೆ ಎಂಬುದರ ಕುರಿತು ಮೈಗ್ರಾಪ ತನ್ನ ಮೇ ತಿಂಗಳ ಮಾಸಿಕ ಸಭೆಯಲ್ಲಿ ಚರ್ಚಿಸಲಿದೆ. ಇದು ಮುಂದಿನ ವರ್ಷ ಪಾರ್ಲಿಮೆಂಟಿಗೆ ನಡೆಯುವ ಅತೀ ದೊಡ್ಡ ಚುನಾವಣೆಗೆ ಸನ್ನದ್ಧರಾಗುವುದಕ್ಕೆ ಸಹಾಯಕವಾಗಲಿದೆ.

ಈ ಸಭೆಯಲ್ಲಿ ಮುಂಬರುವ ಮೈಸೂರು ಮಹಾನಗರ ಪಾಲಿಕೆಗೆ ಸಮರ್ಥ ಮತ್ತು ಪ್ರಾಮಾಣಿಕ ಅಭ್ಯರ್ಥಿಗಳನ್ನು ಪಡೆಯಲು ಸ್ವತಂತ್ರ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಯಾವ ತಂತ್ರಗಾರಿಕೆಯನ್ನು ಅಳವಡಿಸಿಕೊಳ್ಳಬೇಕು ಎಂಬುದರ ಕುರಿತು ಚರ್ಚಿಸಲಾಗುವುದು.

ಮೈಗ್ರಾಪದ ಸದಸ್ಯರು ಯಾದವಗಿರಿ, ರಾಮಕೃಷ್ಣನಗರ ಮುಂತಾದ ಕಡೆ ಪ್ರತಿಶತ ನೂರರಷ್ಟು ಮತ ಚಲಾವಣೆಗಾಗಿ ತಾವು ಮಾಡಿದ ಪ್ರಚಾರ, ಅಲ್ಲದೆ ಕೆಲವು ಕಾಲೇಜುಗಳ ವಿದ್ಯಾರ್ಥಿಗಳೊಂದಿಗೆ ತಾವು ನಡೆಸಿದ ವಿಚಾರ ವಿನಿಮಯಗಳ ಕುರಿತು ತಮ್ಮನ್ನು ತಾವೇ ಪರಿವೀಕ್ಷಣೆಗೆ ಒಳಪಡಿಸಿಕೊಳ್ಳಲಿದ್ದಾರೆ. ನಾವು ಇತ್ತೀಚೆಗೆ ಪ್ರಕಟಿಸಿದ ಮೈಗ್ರಾಪದ 33 ವರ್ಷಗಳ ಇತಿಹಾಸವನ್ನು ಚಿತ್ರ ಸಹಿತ ಪರಿಚಯ ಮಾಡಿಕೊಡುವ ಪುಸ್ತಕಕ್ಕೆ ಉತ್ತಮ ಒಳ್ಳೆಯ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ಈ ಪುಸ್ತಕವನ್ನು ಬಳಸಿಕೊಂಡು ಯುವಕರನ್ನು ತಲುಪಿ, ಅವರಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಉಂಟು ಮಾಡುವ ಕುರಿತೂ ಚರ್ಚಿಸಲಾಗುವುದು. ಸಭೆ ನಡೆಯುವ ಸ್ಥಳ: ನಂ.6/1 ವಿವೇಕಾನಂದ ರಸ್ತೆ ಯಾದವಗಿರಿ, ಮೈಸೂರು. ಸಮಯ: ಭಾನುವಾರ, ಮೇ 14, ಸಂಜೆ 4:00 ಗಂಟೆ.

ಮತಗಟ್ಟೆಯಲ್ಲಿ ಮಗುವಿಗೆ ಜನ್ಮ ನೀಡಿದ ತಾಯಿ: ಬಳ್ಳಾರಿಯಲ್ಲೊಂದು ಅಪರೂಪದ ಘಟನೆ



ಕೊರ್ಲಗುಂಡಿ(ಬಳ್ಳಾರಿ): 16ನೇ ಕರ್ನಾಟಕ ವಿಧಾನಸಭೆ ಸಾರ್ವತ್ರಿಕ ಚುನಾವಣೆಗೆ ಮತದಾನ ಮುಕ್ತಾಯವಾಗಲು ಇನ್ನು ಕೆಲವೇ ನಿಮಿಷಗಳು ಬಾಕಿ ಉಳಿದಿವೆ. ಇದು ಮತದಾನ ವೇಳೆ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಕುತೂಹಲಕಾರಿ ಘಟನೆಗಳು ನಡೆದಿವೆ.

ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕಿನ ಕೊರ್ಲಗುಂಡಿ ಎಂಬಲ್ಲಿ ಅಪರೂಪದ ಘಟನೆ ಸಾಕ್ಷಿಯಾಯಿತು. 23 ವರ್ಷದ ತುಂಬು ಗರ್ಭಿಣಿ ಮತಗಟ್ಟೆಯಲ್ಲಿ ಶಿಶುವಿಗೆ ಜನ್ಮನೀಡಿದ ಘಟನೆ ನಡೆದಿದೆ.

ಗರ್ಭಿಣಿಗೆ ಮತಗಟ್ಟೆ ಬಳಿ ತೀವ್ರ ಹೆರಿಗೆ ನೋವು ಕಾಣಿಸಿಕೊಂಡಾಗ ಅಲ್ಲಿದ್ದ ಮಹಿಳಾ ಸಿಬ್ಬಂದಿ ಮತ್ತು ಮಹಿಳಾ ಮತದಾರರು ನೆರವಿಗೆ ಬಂದಿದ್ದಾರೆ. ಮಹಿಳೆಗೆ ಸುಖ ಪ್ರಸವ ಮಾಡಿಸಿದ್ದಾರೆ.

ಗೆಲುವು ನಮ್ಮದೇ...

ವಿವಿಧ ಪಕ್ಷಗಳ ಅಭ್ಯರ್ಥಿಗಳ ಅತೀವ ವಿಶ್ವಾಸ

ಮೈಸೂರು, ಮೇ 10(ಎಂಕೆ)– ಭಾರೀ ಕುತೂಹಲ ಕೆರಳಿಸಿದ್ದ ರಾಜ್ಯ ವಿಧಾನಸಭಾ ಚುನಾವಣೆಯ ಮತದಾನ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಮೈಸೂರು ಭಾಗದ ವಿಧಾನಸಭಾ ಕ್ಷೇತ್ರಗಳ ವಿವಿಧ ಪಕ್ಷಗಳ ಅಭ್ಯರ್ಥಿಗಳು ಮತದಾರರಿಗೆ ಧನ್ಯವಾದ ತಿಳಿಸುವ ಜೊತೆಗೆ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಚಾಮುಂಡೇಶ್ವರಿ ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಭೇಟಿ ನೀಡಿ ಮತಯಾಚಿಸಿದ್ದೇನೆ. ಹಾಗೆಯೇ ಕ್ಷೇತ್ರದ ಜನರು ಪೂರ್ಣಕುಂಭ ಸ್ವಾಗತ ನೀಡಿದರಲ್ಲದೆ ಗೆಲುವಿನ ಆಶೀರ್ವಾದವನ್ನು ಮಾಡಿದ್ದಾರೆ. ಕ್ಷೇತ್ರದ ನಗರ ವ್ಯಾಪ್ತಿಯಲ್ಲಿ ನನಗಿಂತ ನನ್ನ ಶ್ರೀಮತಿಯವರು ಮತಯಾಚನೆ ಮಾಡಿದ್ದು, ಕಳೆದ ಬಾರಿಗಿಂತ ಹೆಚ್ಚಿನ ಮತಗಳ ಅಂತರದಲ್ಲಿ ಗೆಲ್ಲುತ್ತೇನೆಂಬ ವಿಶ್ವಾಸವಿದೆ.

– ಜಿ.ಟಿ.ದೇವೇಗೌಡ, ಜೆಡಿಎಸ್ ಅಭ್ಯರ್ಥಿ, ಚಾಮುಂಡೇಶ್ವರಿ



ಚುನಾವಣೆ ಅಚ್ಚುಕಟ್ಟಾಗಿ ನಡೆದಿದ್ದು, ಕ್ಷೇತ್ರದ ಮತದಾರರು ಆಶೀರ್ವಾದ ಮಾಡಿದ್ದಾರೆ. ಜನರ ಸ್ಪಂದನೆ ಅಭೂತ ಪೂರ್ಣವಾಗಿತ್ತು. ಎಲ್ಲೆಡೆ ನಗುಮುಖದಿಂದ ಸ್ವಾಗತಿಸಿ ಪೂರ್ಣ ಬೆಂಬಲ ನೀಡಿದ್ದಾರೆ. ಯಾವುದಕ್ಕೂ ಕೊರತೆಯಾಗದಂತೆ ಮತದಾನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಫಲಿತಾಂಶ ಬರಬೇಕಿದೆ. ಕ್ಷೇತ್ರದಲ್ಲಿ ಪ್ರತಿ ಬಾರಿ ಬಿಜೆಪಿಗೆ 20–25 ಸಾವಿರ ಲೀಡ್ ಬರುತ್ತಿತ್ತು. ಈಗ ಅದು ಹೆಚ್ಚಾಗಲಿದೆ. –ಟಿ.ಎಸ್.ಶ್ರೀವತ್ಸ, ಬಿಜೆಪಿ ಅಭ್ಯರ್ಥಿ, ಕೆ.ಆರ್.ಕ್ಷೇತ್ರ



ಕ್ಷೇತ್ರದ ಮತದಾನ ತುಂಬಾ ಚೆನ್ನಾಗಿ ನಡೆದಿದ್ದು, ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಕ್ಷೇತ್ರದ ಎಲ್ಲಾ ಮತದಾರರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಇಡೀ ಕ್ಷೇತ್ರದೆಲ್ಲೆಡೆ ಮತಯಾಚನೆ ಮಾಡಿದ್ದು, ಸುಮಾರು 20 ಸಾವಿರ ಮತಗಳ ಅಂತರದಿಂದ ಗೆಲ್ಲುವ ವಿಶ್ವಾಸ ಇದೆ. ಕ್ಷೇತ್ರದ ಮತದಾರರು ನನಗೆ ಆಶೀರ್ವಾದ ಮಾಡಿದ್ದಾರೆ.

–ಕೆ.ಹರೀಶ್‌ಗೌಡ, ಕಾಂಗ್ರೆಸ್ ಅಭ್ಯರ್ಥಿ, ಚಾಮರಾಜ ಕ್ಷೇತ್ರ



ಕ್ಷೇತ್ರದ ಜನರ ಸಮಸ್ಯೆಗಳಿಗೆ ಸದಾ ಸ್ಪಂದಿಸುವ ಹಾಗೂ ಜನರ ಅನುಕೂಲಕ್ಕೆ ತಕ್ಕಂತೆ ಕಾರ್ಯಕ್ರಮಗಳನ್ನು ರೂಪಿಸುವ ಜವಾಬ್ದಾರಿ ಅರಿತು ಕ್ಷೇತ್ರದ ಮತದಾರರ ಸೇವೆ ಮಾಡಿದ್ದೇನೆ. ಮತ್ತೊಮ್ಮೆ ಸೇವೆಗೆ ಅವಕಾಶ ಮಾಡಿಕೊಡುತ್ತಾರೆ ಎಂಬ ಸಂಪೂರ್ಣ ವಿಶ್ವಾಸವಿದೆ. ಕಳೆದ ಚುನಾವಣೆಗಿಂತಲೂ ಹೆಚ್ಚಿನ ಮತಗಳು ದೊರೆ ಯುವ ನಿರೀಕ್ಷೆಯಿದ್ದು, ಬೆಂಬಲಿಸಿದ ಕ್ಷೇತ್ರ ಮತದಾರರಿಗೆ ಧನ್ಯವಾದ ತಿಳಿಸುತ್ತೇನೆ. –ತನ್ವೀರ್‌ಸೇಠ್, ಕಾಂಗ್ರೆಸ್ ಅಭ್ಯರ್ಥಿ, ನರಸಿಂಹರಾಜ ಕ್ಷೇತ್ರ



ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಸುಸೂತ್ರವಾಗಿ ಮತದಾನ ನೆರವೇರಿದೆ. ಸಂಘಟನೆ ಹಾಗೂ ಸಾರ್ವಜನಿಕ ಸೇವೆಯನ್ನು ಪರಿಗಣಿಸಿ 2ನೇ ಬಾರಿ ಟಿಕೆಟ್ ನೀಡಿ ಸ್ಪರ್ಧಿಸಲು ಅವಕಾಶ ನೀಡಿದ ಬಿಜೆಪಿ ಕೇಂದ್ರ ಹಾಗೂ ರಾಜ್ಯ ನಾಯಕರಿಗೆ ಧನ್ಯವಾದಗಳು. ಚುನಾವಣೆಯಲ್ಲಿ ನನಗೆ ಸಹಕರಿಸಿದ ಪಕ್ಷದ ಸ್ಥಳೀಯ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು, ಹಿತೈಷಿಗಳು, ಸ್ನೇಹಿತರು, ಕ್ಷೇತ್ರದ ಎಲ್ಲಾ ನಲ್ಮೆಯ ಮತದಾರ ಬಂಧುಗಳಿಗೆ ಆಭಾರಿಯಾಗಿದ್ದೇನೆ.

–ಸತೀಶ್ ಸಂದೇಶ್‌ಸ್ವಾಮಿ, ಬಿಜೆಪಿ ಅಭ್ಯರ್ಥಿ, ನರಸಿಂಹರಾಜ ಕ್ಷೇತ್ರ



ಪ್ರಜಾಪ್ರಭುತ್ವದ ಹಬ್ಬದಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಸುಮಾರು 140 ಕೋಟಿ ಜನಸಂಖ್ಯೆ ಹೊಂದಿರುವ ಭಾರತದಲ್ಲಿ ಚುನಾವಣಾ ಆಯೋಗ ಚುನಾವಣೆಗಳನ್ನು ಇಷ್ಟು ಅಚ್ಚುಕಟ್ಟಾಗಿ ನಡೆಸುತ್ತಿರುವುದು ಶ್ಲಾಘನೀಯ. ಅದಕ್ಕಾಗಿ ಚುನಾವಣಾ ಆಯೋಗದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಬಾರಿಯ ಚುನಾವಣೆಯಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಡಿಪಿಐ ಪಕ್ಷದ ಪರವಾಗಿ ಜನರೇ ಮುಂದೆ ನಿಂತು ಚುನಾವಣೆ ನಡೆಸಿದ್ದಾರೆ. ಕ್ಷೇತ್ರದಾದ್ಯಂತ ಎಸ್‌ಡಿಪಿಐ ಅಲೆ ಇದ್ದು, ಗೆಲುವು ಸಾಧಿಸುವ ಭರವಸೆ ಇದೆ.

–ಅಬ್ದುಲ್ ಮಜೀದ್, ಎಸ್‌ಡಿಪಿಐ ಅಭ್ಯರ್ಥಿ, ಎನ್.ಆರ್. ಕ್ಷೇತ್ರ



ಚುನಾವಣಾ ಹೋರಾಟ ಸದ್ಯಕ್ಕೆ ಒಂದು ಹಂತಕ್ಕೆ ಬಂದು ನಿಂತಿದೆ. ಎಲ್ಲರ ಅಭಿಪ್ರಾಯದ ಪ್ರಕಾರ ಗೆಲ್ಲುವ ನಂಬಿಕೆ ಮತ್ತಷ್ಟು ಗಟ್ಟಿಯಾಗಿದೆ. 15 ಸಾವಿರಕ್ಕಿಂತಲೂ ಹೆಚ್ಚಿನ ಮತಗಳ ಅಂತರದಿಂದ ಗೆದ್ದರೂ ಅಚ್ಚರಿ ಇಲ್ಲ. ಕ್ಷೇತ್ರದ ಎಲ್ಲಾ ವರ್ಗದ ಮತದಾರರು ಅಭಿವೃದ್ಧಿ ದೃಷ್ಟಿಯಿಂದ ಕಾಂಗ್ರೆಸ್ ಬೆಂಬಲಿಸಿದ್ದು, ಎಲ್ಲರಿಗೂ ನಾನು ಚಿರಋಣಿಯಾಗಿರುತ್ತೇನೆ ಹಾಗೂ ಕೃತಜ್ಞತೆ ಸಲ್ಲಿಸುತ್ತೇನೆ. –ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಅಭ್ಯರ್ಥಿ, ಕೃಷ್ಣರಾಜ ಕ್ಷೇತ್ರ



ಕೃಷ್ಣರಾಜ ವಿಧಾನಸಭಾ ಚುನಾವಣೆಯಲ್ಲಿ ಜಾ.ದಳ ಪಕ್ಷದಿಂದ ಅಭ್ಯರ್ಥಿಯಾದ ನನಗೆ ತಮ್ಮ ಅಮೂಲ್ಯವಾದ ಮತ ನೀಡಿ ಬೆಂಬಲಿಸಿದ ಕೃಷ್ಣರಾಜ ಕ್ಷೇತ್ರದ ಎಲ್ಲ ಮತದಾರರಿಗೆ ಧನ್ಯವಾದಗಳು. ಜೊತೆಗೆ ನಾನು ಸ್ಪರ್ಧಿಸಲು ಟಿಕೆಟ್ ನೀಡಿದ ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ಕುಮಾರಸ್ವಾಮಿ, ಸಿ.ಎಂ.ಇಬ್ರಾಹಿಂ, ನನ್ನ ಪರ ಕೆಲಸ ಮಾಡಿದ ಪಕ್ಷದ ಎಲ್ಲಾ ಕಾರ್ಯಕರ್ತರಿಗೆ, ಪದಾಧಿಕಾರಿಗಳಿಗೆ ಕೃತಜ್ಞತೆಗಳು. ನನ್ನನ್ನು ಬೆಂಬಲಿಸಿದ ಎಲ್ಲಾ ಸಂಘ–ಸಂಸ್ಥೆಗಳು ಹಾಗೂ ವೀರಶೈವ ಲಿಂಗಾಯತ ಸಮುದಾಯ, ಒಕ್ಕಲಿಗ ಸಮುದಾಯಕ್ಕೆ ನಾನು ಆಭಾರಿಯಾಗಿದ್ದೇನೆ.

– ಕೆ.ವಿ.ಮಲ್ಲೇಶ್, ಜೆಡಿಎಸ್ ಅಭ್ಯರ್ಥಿ, ಕೆ.ಆರ್ ಕ್ಷೇತ್ರ



ಮತದಾನ ಪ್ರಕ್ರಿಯೆ ಬಹಳ ಚೆನ್ನಾಗಿ ನಡೆದಿದೆ. ಚುನಾವಣೆ ಅಂದರೆ ಪೈಪೋಟಿ ಇದ್ದೇ ಇರುತ್ತೆ. ಅದರಂತೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಗೆಲ್ಲಲಿದೆ. ವೈಯಕ್ತಿಕವಾಗಿ ಕೆಲ ಸಣ್ಣ–ಪುಟ್ಟ ತಪ್ಪುಗಳಾದರೂ ಕ್ಷೇತ್ರದ ಕಾರ್ಯ ಕರ್ತರು ಹಾಗೂ ಮತದಾರರು ಅತ್ಯಂತ ಉತ್ಸಾಹದಿಂದ ಬೆಂಬಲ ನೀಡಿದ್ದಾರೆ. ಮೇ 13ರ ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದೇನೆ.

–ಸಿದ್ದೇಗೌಡ, ಕಾಂಗ್ರೆಸ್ ಅಭ್ಯರ್ಥಿ, ಚಾಮುಂಡೇಶ್ವರಿ ಕ್ಷೇತ್ರ



ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ನೀಡಿದ ಪಕ್ಷದ ಎಲ್ಲಾ ಮುಖಂಡರು, ಚುನಾವಣೆಯಲ್ಲಿ ಬೆಂಬಲ ನೀಡಿದ ಕ್ಷೇತ್ರದ ಎಲ್ಲಾ ಮತದಾರರು ಹಾಗೂ ಶ್ರಮಿಸಿದ ಕಾರ್ಯಕರ್ತರಿಗೆ ಧನ್ಯವಾದ ತಿಳಿಸುತ್ತೇನೆ. ಕಳೆದ ಬಾರಿಗಿಂತಲೂ ಹೆಚ್ಚು ಮತಗಳ ಅಂತರದಿಂದ ಗೆಲ್ಲುವ ವಿಶ್ವಾಸವಿದೆ.

– ಎಲ್.ನಾಗೇಂದ್ರ, ಬಿಜೆಪಿ ಅಭ್ಯರ್ಥಿ, ಚಾಮರಾಜ ಕ್ಷೇತ್ರ

ಮತದಾನಕ್ಕೆ ಬಿಡುವು ನೀಡಿದ ವರುಣ!

ಮೈಸೂರು, ಮೇ 10(ಎಸ್‌ಬಿಡಿ)– ಪ್ರಜಾಪ್ರಭುತ್ವ ಹಬ್ಬಕ್ಕೆ ವರುಣ ಕೃಪೆ ತೋರಿದ್ದರಿಂದ ಮತದಾನ ಸಾಂಗವಾಗಿ ನೆರವೇರಿತು. ಮೈಸೂರು ಹಾಗೂ ನೆರೆ ಜಿಲ್ಲೆಗಳಾದ ಕೊಡಗು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಮೂರ್‍ನಾಲ್ಕು ದಿನಗಳ ಕಾಲ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಸೂಚನೆ ನೀಡಿತ್ತು. ಹಾಗೆಯೇ ನಿನ್ನೆ ರಾತ್ರಿ ಬಿರುಸಿನ ಮಳೆಯಾಗಿದ್ದರಿಂದ ಮತದಾನಕ್ಕೆ ಮಳೆ ಅಡ್ಡಿಯಾಗುವ ಆತಂಕ ನಿರ್ಮಾಣವಾಗಿತ್ತು. ಆದರೆ ಇಂದು ವರುಣ ಕೃಪೆ ತೋರಿದ್ದರಿಂದ ಮತದಾನ ಸಾಂಗವಾಗಿ ನೆರವೇರಿತು. ಮೈಸೂರು ಹಾಗೂ ನೆರೆ ಜಿಲ್ಲೆಗಳಲ್ಲಿ ಮತದಾನ ಮುಗಿಯುವವರೆಗೂ ಮಳೆ ಬಿಡುವು ನೀಡಿತ್ತು. ಕೆಲವೆಡೆ ತುಂತುರು ಮಳೆಯಾದರೂ ಸ್ವಲ್ಪ ಹೊತ್ತಿಗೆ ನಿಂತು ಹೋಗಿದ್ದರಿಂದ ಯಾವುದೇ ಸಮಸ್ಯೆಯಾಗಲಿಲ್ಲ. ಮಳೆಯ ವಾತಾವರಣ ಇಲ್ಲ ದಿದ್ದರೂ ಅನೇಕ ಮತದಾರರು ಮುಂಜಾಗ್ರತಾ ಕ್ರಮವಾಗಿ ಕೊಡೆಗಳನ್ನು ತಂದಿದ್ದರು.

ಬಳ್ಳಾರಿ: ಮತಗಟ್ಟೆ ಬಳಿಯೇ ಹೆರಿಗೆ



ಕೊರ್ಲಗುಂಡಿ (ಬಳ್ಳಾರಿ): ಮತದಾನ ಸಂದರ್ಭದಲ್ಲಿ ಕೆಲವು ಕುತೂಹಲಕಾರಿ ಸಂಗತಿಗಳು ನಡೆದಿವೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಕೊರ್ಲಗುಂಡಿ ಅಪರೂಪದ ಘಟನೆಗೆ ಸಾಕ್ಷಿಯಾಯಿತು. 23 ವರ್ಷದ ತುಂಬು ಗರ್ಭಿಣಿ ಮತಗಟ್ಟೆಯಲ್ಲಿ ಶಿಶುವಿಗೆ ಜನ್ಮನೀಡಿದ ಘಟನೆ ನಡೆದಿದೆ. ಗರ್ಭಿಣಿಗೆ ಮತಗಟ್ಟೆ ಬಳಿ ತೀವ್ರ ಹೆರಿಗೆ ನೋವು ಕಾಣಿಸಿಕೊಂಡಾಗ ಅಲ್ಲಿದ್ದ ಮಹಿಳಾ ಸಿಬ್ಬಂದಿ ಮತ್ತು ಮಹಿಳಾ ಮತದಾರರು ನೆರವಿಗೆ ಬಂದಿದ್ದಾರೆ. ಮಹಿಳೆಗೆ ಸುಖ ಪ್ರಸವ ಮಾಡಿಸಿದ್ದಾರೆ.



ವಿರಾಜಪೇಟೆ ಬಿಜೆಪಿ ಅಭ್ಯರ್ಥಿ ಕೆ.ಜಿ. ಬೋಪಯ್ಯ ಕುಟುಂಬದೊಂದಿಗೆ ಮತದಾನ ಮಾಡಿ ಹೊರಬಂದ ನಂತರ ಕ್ಯಾಮರಾಗೆ ಫೋಸ್ ನೀಡಿದ್ದು ಹೀಗೆ



ಮಡಿಕೇರಿ ಬಿಜೆಪಿ ಅಭ್ಯರ್ಥಿ ಅಪ್ಪಚ್ಚುರಂಜನ್ ತಮ್ಮ ಪತ್ನಿಯೊಂದಿಗೆ ಮತದಾನ ಮಾಡಿದರು.



ಕಾಂಗ್ರೆಸ್ ಅಭ್ಯರ್ಥಿ ಮಂಥರ್‌ಗೌಡ ತಮ್ಮ ಪತ್ನಿಯೊಂದಿಗೆ ಮತದಾನ ಮಾಡಿದರು.



ವಿರಾಜಪೇಟೆಯ ಕಾಂಗ್ರೆಸ್ ಅಭ್ಯರ್ಥಿ ಪೊನ್ನಣ್ಣ ಅವರು ತಮ್ಮ ಕುಟುಂಬದೊಂದಿಗೆ ಮತದಾನ ಮಾಡಿದರು.



ಜೆಡಿಎಸ್ ಅಭ್ಯರ್ಥಿ ಮನ್ಸೂರ್‌ಅಲಿರಿಂದ ಮತದಾನ

ಕೊಡಗು ಜಿಲ್ಲೆಯಲ್ಲಿ ಶೇ.74.74ರಷ್ಟು ಶಾಂತಿಯುತ ಮತದಾನ

ಮಡಿಕೇರಿ, ವಿರಾಜಪೇಟೆ ಅಭ್ಯರ್ಥಿಗಳ ಭವಿಷ್ಯ ಮತಪೆಟ್ಟಿಗೆಯಲ್ಲಿ

ಮಡಿಕೇರಿ ಮೇ 10– ವಿಧಾನಸಭಾ ಚುನಾವಣೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಶೇ.74.74 ರಷ್ಟು ಮತದಾನವಾಗಿದೆ. ಒಟ್ಟು 4,56,313 ಮತದಾರರಲ್ಲಿ 3,41,046 ಮತದಾರರು ಮತದಾನ ಮಾಡಿದ್ದಾರೆ. ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 2,32,148 ಮತದಾರರಲ್ಲಿ 1,75,009 ಮತದಾರರು ಮತ ಚಲಾಯಿಸಿದ್ದು, ಶೇ.75.39 ರಷ್ಟು ಮತದಾನವಾಗಿದೆ. ವಿರಾಜಪೇಟೆ ಕ್ಷೇತ್ರದಲ್ಲಿ ಒಟ್ಟು 2,24,165 ಮತದಾರರಿದ್ದು, 1,66,037 ಮತದಾರರು ಮತ ಚಲಾಯಿಸಿದ್ದು, ಶೇ.74.07 ರಷ್ಟು ಮತದಾನವಾಗಿದೆ.

ಜಿಲ್ಲೆಯ ಒಟ್ಟು 543 ಬೂತ್‌ಗಳಲ್ಲಿ ಬೆಳಗ್ಗೆ 7 ಗಂಟೆಯಿಂದಲೇ ಮತದಾರರು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸುತ್ತಿದ್ದುದು ಕಂಡು ಬಂತು. ಮತ ಕೇಂದ್ರದ 100 ಮೀಟರ್ ದೂರದಲ್ಲಿ ಕೊನೆಯ ಕಸರತ್ತು ಎನ್ನುವಂತೆ ವಿವಿಧ ಪಕ್ಷಗಳ ಕಾರ್ಯಕರ್ತರು ತಮ್ಮ ಅಭ್ಯರ್ಥಿ ಪರ ಮತಯಾಚಿಸುತ್ತಿದ್ದುದು ಸಾಮಾನ್ಯವಾಗಿತ್ತು.

ಹೊಸ ಮತದಾರರು, ಯುವ ಮತದಾರರು, ವಯಸ್ಸರ ಸಹಿತ ಹಿರಿಯ ಮತದಾರರು ಕೂಡ ಬೆಳ್ಳಂಬೆಳಗ್ಗೆ ಮತದಾನ ಕೇಂದ್ರದಲ್ಲಿ ಕಂಡು ಬಂದರು. ಬಿಸಿಲಿನ ತಾಪ ಏರಿಕೆ ನಡುವೆಯೂ ಉತ್ಸಾಹದಿಂದಲೇ ಮತದಾರರು ಮತ ಕೇಂದ್ರಗಳಿಗೆ ಆಗಮಿಸುತ್ತಿದ್ದುದು ಕಂಡುಬಂತು. ನಡೆಯಲು ಸಾಧ್ಯವಾಗದವರೂ ಕೂಡ ಸಹಾಯಕರೊಂದಿಗೆ ಮತ ಕೇಂದ್ರಕ್ಕೆ ಆಗಮಿಸಿ ವೀಲ್‌ಚೇರ್ ಮೂಲಕ ಮತದಾನ ಮಾಡಿದ್ದು, ಸಮಾಜಕ್ಕೆ ಮತದಾನದ ಮಹತ್ವದ ಕುರಿತು ಅತ್ಯುತ್ತಮ ಸಂದೇಶ ನೀಡಿತು. ಬಹುತೇಕ ಎಲ್ಲಾ ಮತಗಟ್ಟೆಗಳಲ್ಲೂ ಆರೋಗ್ಯ ಇಲಾಖೆ, ಆಶಾ ಕಾರ್ಯಕರ್ತೆಯರು, ಡಿ ಗ್ರೂಪ್ ನೌಕರರನ್ನು ಸಾರ್ವಜನಿಕ ಸೇವೆಗಾಗಿ ಬಳಸಿಕೊಳ್ಳಲಾಗಿತ್ತಲ್ಲದೇ, ಎಲ್ಲಾ ಮತಕೇಂದ್ರದಲ್ಲೂ ವೀಲ್‌ಚೇರ್ ವ್ಯವಸ್ಥೆಗಳನ್ನು ಮಾಡಲಾಗಿತ್ತು.

'ನವ' ಉಲ್ಲಾಸ: ಜಿಲ್ಲೆಯಲ್ಲಿ 22 ಸಾವಿರಕ್ಕೂ ಅಧಿಕ ಯುವ ಮತದಾರರು ಮತಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದು, ಸಾವಿರಾರು ಹೊಸ ಮತದಾರರು ಇದೇ ಮೊದಲ ಬಾರಿಗೆ ಮತ ಹಕ್ಕು ಚಲಾಯಿಸಿ ಸಂಭ್ರಮಿಸಿದರು. ತಮ್ಮ ಪೋಷಕರ ಸಹಿತ ಬೂತ್‌ಗಳಿಗೆ ಹುರುಪಿನಿಂದಲೇ ಆಗಮಿಸಿದ ಹೊಸ ಮತದಾರ ಯುವಕ ಯುವತಿಯರು ತಮ್ಮ ಅಮೂಲ್ಯ ಮತ ಚಲಾಯಿಸಿ ರಾಜ್ಯ ಮತ್ತು ದೇಶದ ಅಭಿವೃದ್ಧಿಯ ಹೊಸ ಅಧ್ಯಾಯ ಬರೆದು ಉಲ್ಲಸಿತರಾದರು. ಮಾತ್ರವಲ್ಲದೇ ಮೊದಲ ಬಾರಿ ಮತ ಚಲಾಯಿಸಿದ ಸಂಭ್ರಮದಲ್ಲಿ ಮತ ಕೇಂದ್ರದ ಹೊರ ಭಾಗ ಸೆಲ್ಫಿ ಕ್ಲಿಕ್ಕಿಸಿಕೊಂಡು ಅಮೂಲ್ಯ ಕ್ಷಣಗಳನ್ನು ತಮ್ಮ ಮೊಬೈಲ್‌ಗಳಲ್ಲಿ ತುಂಬಿಕೊಂಡರು.



ಗಣ್ಯರು–ಅಭ್ಯರ್ಥಿಗಳ ಮತದಾನ: ಮಡಿಕೇರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸೋಮವಾರಪೇಟೆ ತಾಲೂಕಿನ ಕುಂಬೂರು ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಪತ್ನಿ ಶೈಲಾರೊಂದಿಗೆ ಮತ ಚಲಾಯಿಸಿದರು. ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್ ಗೌಡ ಸೋಮವಾರಪೇಟೆ ತಾಲೂಕು ಬೇಗೂರು ಗ್ರಾ.ಪಂ ವ್ಯಾಪ್ತಿಯ ಬಳಗುಂದ ಮತಗಟ್ಟೆಯಲ್ಲಿ ತಮ್ಮ ಪತ್ನಿ ದಿವ್ಯ ಅವರೊಂದಿಗೆ ಬೆಳಿಗ್ಗೆಯೇ ಮತ ಚಲಾಯಿಸಿದರು. ಮಡಿಕೇರಿ ಕ್ಷೇತ್ರದ ಸಿದ್ದಲಿಂಗಪುರದ ಮತಗಟ್ಟೆಯಲ್ಲಿ ಮಡಿಕೇರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ನಾಪಂಡ ಮುತ್ತಪ್ಪ ಮತ ಚಲಾಯಿಸಿದರು.

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಎಸ್. ಪೊನ್ನಣ್ಣ ತಮ್ಮ ಕುಟುಂಬದೊಂದಿಗೆ ಹುದಿಕೇರಿಯ ಬೇಳೂರುವಿನ ಮತಗಟ್ಟೆಯಲ್ಲಿ ಮತ ಚಲಾಯಿಸಿದರು. ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಜಿ. ಬೋಪಯ್ಯ, ಪತ್ನಿ ಕುಂತಿ ಬೋಪಯ್ಯ ಹಾಗೂ ಪುತ್ರಿ ಯಶಿಕರೊಂದಿಗೆ ಮಡಿಕೇರಿ ಜೂನಿಯರ್ ಕಾಲೇಜು ಆವರಣದ ಮತಗಟ್ಟೆಯಲ್ಲಿ ಮತದಾನ ಮಾಡಿದರು. ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂ.ಎ.ಮನ್ಸೂರ್ ಅಲಿ ನಾಪೋಕ್ಲುವಿನ ಕರ್ನಾಟಕ ಪಬ್ಲಿಕ್ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಇದೇ ರೀತಿ ಕಾಂಗ್ರೆಸ್ ಪಕ್ಷದ ರಾಜ್ಯ ವಕ್ತಾರ ಸಂಕೇತ್ ಪೂವಯ್ಯ ಅವರು ವಿರಾಜಪೇಟೆಯ ಸೆಂಟ್ ಆನ್ಸ್ ಸ್ಕೂಲ್‌ನಲ್ಲಿ ಮತದಾನ ಮಾಡಿದರು. ವಿಧಾನಪರಿಷತ್ ಸದಸ್ಯೆ ಸುಜಾ ಕುಶಾಲಪ್ಪ ಅವರು ವಿರಾಜಪೇಟೆಯ ಮೀನುಪೇಟೆಯಲ್ಲಿರುವ ಪ್ರಥಮದರ್ಜೆ ಕಾಲೇಜಿನಲ್ಲಿ ಮತಚಲಾಯಿಸಿದರು. ನಗರದ ತಾಲೂಕು ಪಂಚಾಯಿತ್ ಮತಗಟ್ಟೆಯಲ್ಲಿ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮತ್ತು ರೂಪಶ್ರೀ ಸತೀಶ ಅವರು ಮತದಾನ ಮಾಡಿದರು. ಮಡಿಕೇರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಡಿಕೇರಿ ನಗರದ ಸಂತ ಮೈಕಲರ ಶಾಲೆಯ ಮತಗಟ್ಟೆಯಲ್ಲಿ ಹಿರಿಯ ರಾಜಕಾರಣಿ ಬಿಟ್ಟು ಚಂಗಪ್ಪ ಹಾಗೂ ಪತ್ನಿ ಯಶಿ ಚಂಗಪ್ಪ ಅವರು 30ನೇ ಬಾರಿಗೆ ಮೊದಲಿಗರಾಗಿ ಮತದಾನ ಮಾಡುವ ಮೂಲಕ ಪ್ರಜಾಪ್ರಭುತ್ವದ ಹಕ್ಕು ಚಲಾಯಿಸಿದರು. ಆ ಮೂಲಕ ಯುವಮತದಾರರಿಗೆ ಮಾದರಿಯಾದರು. ಮಾಜಿ ಸಚಿವ ಎಂ.ಸಿ.ನಾಣಯ್ಯ ತಮ್ಮ ಪತ್ನಿಯೊಂದಿಗೆ ಮಡಿಕೇರಿ ಸಂತ ಮೈಕಲರ ಶಾಲಾ ಆವರಣದ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ ಅವರು ನಗರದ ಎವಿ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.



ಸಂಕೇತ್ ಪೂವಯ್ಯ

ಫಾರೆಸ್ಟ್ 'ಟಾಸ್ಕ್‌ಫೋರ್ಸ್': ಗಾಳಿಬೀಡು ಸರ್ಕಾರಿ ಶಾಲಾ ಮತಗಟ್ಟೆ ಮತದಾರರಿಂದ ಕಿಕ್ಕಿರಿದು ತುಂಬಿದ್ದ ದೃಶ್ಯ ಕಂಡು ಬಂತು. ಹುಲಿ, ಆನೆ, ಚಿರತೆ ಹಾಗೂ ವನ್ಯಜೀವಿ ಉಪಟಳ ಇರುವ ಮತಗಟ್ಟೆಗಳಿಗೆ ಎಲಿಫೆಂಟ್ ಟಾಸ್ಕ್‌ಫೋರ್ಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿತ್ತು. ಆ ಮೂಲಕ ಅರಣ್ಯದಂಚಿನ ಗ್ರಾಮಗಳ ನಿವಾಸಿಗಳು ಮತ್ತು ವನ್ಯಪ್ರಾಣಿ ಉಪಟಳವಿರುವ ಪ್ರದೇಶಗಳ ಮತದಾರರು ಭಯ ಮುಕ್ತರಾಗಿ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಲು ಅನುಕೂಲವಾಗುವಂತೆ ಅರಣ್ಯ ಇಲಾಖೆ ವ್ಯವಸ್ಥೆ ಕೈಗೊಂಡಿತ್ತು.



ಸುಜಾ ಕುಶಾಲಪ್ಪ

ತಾಂತ್ರಿಕ ಸಮಸ್ಯೆ, ವಾಗ್ವಾದ: ಮಡಿಕೇರಿ ಕ್ಷೇತ್ರದ ಮಾದಾಪುರ ಮತಗಟ್ಟೆಯಲ್ಲಿ ಇವಿಎಂನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡು, ಕೆಲಕಾಲ ಮತದಾನಕ್ಕೆ ತೊಡಕುಂಟಾಯಿತು. ಈ ಹಂತದಲ್ಲಿ ಮತದಾನಕ್ಕೆ ಕಾಯ್ದು ಬಳಲಿದ್ದ ಮತದಾರರು ಕುಡಿಯುವ ನೀರಿಗಾಗಿ ಪರದಾಡಿದ್ದಾರೆ. ಈ ವೇಳೆ ಅಲ್ಲಿದ್ದ ಭದ್ರತಾ ಪಡೆಗಳ ಸಿಬ್ಬಂದಿಗಳು ಮತದಾರರ ಮೇಲೆ ಬಲ ಪ್ರಯೋಗಕ್ಕೆ ಮುಂದಾಗಿದ್ದರು ಎನ್ನಲಾಗಿದೆ. ಇದರಿಂದಾಗಿ ತಾಳ್ಮೆ ಕಳೆದುಕೊಂಡ ಮತದಾರರು ಮತ್ತು ಭದ್ರತಾ ಸಿಬ್ಬಂದಿಗಳ ನಡುವೆ ತೀವ್ರ ವಾಗ್ವಾದ ನಡೆದು ಗೊಂದಲದ ವಾತಾವರಣ ನಿರ್ಮಾಣವಾಯಿತು. ಈ ಸಂದರ್ಭ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ ಘಟನೆ ನಡೆಯಿತು.



ಜಿಲ್ಲಾಧಿಕಾರಿ ಬಿ.ಸಿ.ಸತೀಶ್ ಅವರು ತಮ್ಮ ಪತ್ನಿಯೊಂದಿಗೆ ಮಡಿಕೇರಿಯಲ್ಲಿ ಮತದಾನ ಮಾಡಿದರು.

ಗಿರಿಜನರ ಉತ್ಸಾಹ: ಸಾಂಪ್ರದಾಯಿಕ ಮತಗಟ್ಟೆ ಸ್ಥಾಪಿಸಲಾಗಿದ್ದ, ನಾಗರಹೊಳೆ ಬಳಿಯ ಸರ್ಕಾರಿ ವಾಲ್ಮೀಕಿ ಆಶ್ರಮ ಶಾಲೆ, ಹಾಗೆಯೇ ತಿತಿಮತಿ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಆದಿವಾಸಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮತಹಕ್ಕು ಚಲಾಯಿಸಿ, ಸಂಭ್ರಮಿಸಿದರು. ಮದೆನಾಡು, ಸುಂಟಿಕೊಪ್ಪ ಸಿದ್ದಾಪುರ, ಗೋಣಿಕೊಪ್ಪ ಪೊನ್ನಂಪೇಟೆ ಹುದಿಕೇರಿ, ಬಾಳೆಲೆ, ಮೂರ್ನಾಡು, ನಾಪೋಕ್ಲು, ಸೋಮವಾರಪೇಟೆ, ಕುಶಾಲನಗರ, ಶನಿವಾರಸಂತೆ, ಕೊಡ್ಲಿಪೇಟೆ, ಮಾದಾಪುರ, ಹೆಬ್ಬಾಲೆ ಮತಗಟ್ಟೆಗಳಲ್ಲಿ ಮತದಾರರು ಮಧ್ಯಾಹ್ನದ ವೇಳೆಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಮತದಾನದಲ್ಲಿ ಪಾಲ್ಗೊಂಡಿದ್ದು ಕಂಡುಬಂತು.

'ಶಸ್ತ್ರಸಜ್ಜಿತ' ಭದ್ರತೆ



ನಕ್ಸಲ್ ಪೀಡಿತ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಲ್ಲಿ ಶಾಂತಿಯುತವಾಗಿ ಬಿರುಸಿನ ಮತದಾನ ನಡೆಯಿತು. ಯಾವುದೇ ಆತಂಕಕ್ಕೆ ಒಳಗಾಗದೇ ಬಿಸಿಲನ್ನು ಲೆಕ್ಕಿಸದೇ ಬೆಳಗ್ಗಿನಿಂದಲೇ ಗ್ರಾಮಸ್ಥರು ಮತಗಟ್ಟೆಗಳಿಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದರು. ನಕ್ಸಲ್ ಪೀಡಿತ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಲ್ಲಿ ಪ್ಯಾರಾ ಮಿಲಿಟರಿ ಪಡೆಗಳ ಶಸ್ತ್ರಸಜ್ಜಿತ ಯೋಧರನ್ನು ಭದ್ರತೆಗಾಗಿ ನಿಯೋಜನೆ ಮಾಡಲಾಗಿತ್ತು. ಸಿಐಎಸ್‌ಎಫ್, ಐಟಿಬಿಪಿ, ಕೆಎಸ್‌ಆರ್‌ಪಿ, ಕೊಡಗು ಜಿಲ್ಲಾ ಪೊಲೀಸರು, ಕೊಡಗು ಸೇರಿದಂತೆ ತಮಿಳುನಾಡಿನ ಗೃಹ ರಕ್ಷಕ ದಳದ ಸಿಬ್ಬಂದಿಗಳನ್ನು ವಿವಿಧ ಬೂತ್‌ಗಳಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆ ಮಾಡಲಾಗಿತ್ತು.

ಮತದಾರರನ್ನು ಸೆಳೆದ ಕಾಫಿ ಮತಗಟ್ಟೆ



'ಕೊಡಗಿನ ಕಾಫಿ' ಈ ಬಾರಿಯ ಚುನಾವಣೆಯಲ್ಲಿ ಮತದಾರರನ್ನು ಮತಗಟ್ಟೆಯತ್ತ ಸೆಳೆಯುವ ಅಂಶವಾಗಿರುವ ಜಿಲ್ಲೆಯ 3 ಮತಗಟ್ಟೆಗಳು ಕಾಫಿಯ ಚಿತ್ರಣಗಳನ್ನು ಒಳಗೊಂಡು ಅತ್ಯಾಕರ್ಷಕವಾಗಿ ಗಮನ ಸೆಳೆದದ್ದು ವಿಶೇಷ. ನಗರದ ಹಿಲ್ ರಸ್ತೆಯ ಸಿಎಂಸಿ ಮಾದರಿ ಪ್ರಾಥಮಿಕ ಶಾಲೆಯ 210ನೇ ಮತಗಟ್ಟೆ ಕಾಫಿ ಹಣ್ಣುಗಳ ಗಿಡ, ಕಾಫಿ ಕೊಯ್ಯುವ ಮಹಿಳೆಯ ಚಿತ್ರಣಗಳೊಂದಿಗೆ ಅತ್ಯಾಕರ್ಷಕವಾಗಿ ಅಲಂಕೃತಗೊಂಡಿತ್ತು. ಮಾತ್ರವಲ್ಲದೇ, ಬಿಸಿ ಬಿಸಿ ಕಾಫಿ ಸವಿಯಲು ಇಲ್ಲಿ ಅವಕಾಶ ಕಲ್ಪಿಸಿದ್ದು ವಿನೂತನವಾಗಿತ್ತು. ಇದೇ ಮತಗಟ್ಟೆಯಲ್ಲಿ ವಿಶೇಷಚೇತನರಿಗಾಗಿ ರ‍್ಯಾಂಪ್, ರೈಲಿಂಗ್ಸ್, ವೀಲ್‌ಚೇರ್ ಹಾಗೂ ವಾಹನ ಸೌಲಭ್ಯ ಕಲ್ಪಿಸುವ ಮೂಲಕ ಮಾದರಿ ಮತಗಟ್ಟೆಯನ್ನಾಗಿಯೂ ರೂಪಿಸಲಾಗಿತ್ತು. ಈ ರೀತಿಯ ಮತಗಟ್ಟೆಗಳನ್ನು ರಂಗಸಮುದ್ರದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಪೊನ್ನಂಪೇಟೆ ಜಿಎಂಪಿಎಸ್ ಶಾಲೆಯಲ್ಲೂ ಸಜ್ಜುಗೊಳಿಸಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುವ ಮೂಲಕ ಸ್ವೀಪ್ ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ಚಾ.ನಗರ ಜಿಲ್ಲೆಯಲ್ಲಿ ಶೇ.81.62ರಷ್ಟು ಮತದಾನ

ಚಾಮರಾಜನಗರ, ಮೇ 10– ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಲ್ಲಿ ಬುಧವಾರ ಶೇ.81.62ರಷ್ಟು ಮತದಾನ ಶಾಂತಿಯುತವಾಗಿ ನಡೆಯಿತು.

ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ, ಹನೂರು ಹಾಗೂ ಕೊಳ್ಳೇಗಾಲ ಸೇರಿದಂತೆ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರು ಉತ್ಸಾಹದಿಂದ ಮತ ಚಲಾಯಿಸಿದರು. ಜಿಲ್ಲೆಯಲ್ಲಿ ಬೆಳಗ್ಗೆ 9 ಗಂಟೆಯ ವೇಳೆಯಲ್ಲಿ ಶೇ 2.86ರಷ್ಟು ಮತದಾನವಾಗಿತ್ತು. 11 ಗಂಟೆಯ ಸುಮಾರಿನಲ್ಲಿ 16.66ರಷ್ಟು, ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಶೇ. 30.66ರಷ್ಟು, ಮಧ್ಯಾಹ್ನ 3 ಗಂಟೆ ಸುಮಾರಿಗೆ 51.71 ರಷ್ಟು, ಸಂಜೆ 5 ಗಂಟೆ ಸುಮಾರಿಗೆ ಚಾಮರಾಜನಗರದಲ್ಲಿ ಶೇ. 73.23, ಗುಂಡ್ಲುಪೇಟೆ ಶೇ.76.81, ಹನೂರಿನಲ್ಲಿ ಶೇ. 62.57 ಹಾಗೂ ಕೊಳ್ಳೇಗಾಲದಲ್ಲಿ ಶೇ. 65ರಷ್ಟು ಒಟ್ಟು 69.31ರಷ್ಟು ಮತದಾನವಾಗಿದೆ.



ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಸಂಜೆ ನಂತರ ಬಿರುಸು: ಸುಡುವ ಬಿಸಿಲಿನ ಮಧ್ಯೆ ಮತದಾರರು ಬೆಳಗ್ಗೆಯಿಂದ ಸಂಜೆಯವರೆಗೆ ಹುರುಪು, ಹುಮ್ಮಸ್ಸಿನಿಂದ ಮತಗಟ್ಟೆಗಳಿಗೆ ಬಂದು ಆಸಕ್ತಿಯಿಂದ ಮತ ಚಲಾಯಿಸಿದರು.

ಸಂಜೆ ಹೊತ್ತು ಮೋಡ ಕವಿದ ವಾತಾವರಣ ನಿರ್ಮಾಣವಾಗಿದ್ದರಿಂದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗಳಿಗೆ ಬಂದು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದ್ದು ಕಂಡು ಬಂದಿತು. ಜಿಲ್ಲೆಯ ಅಲ್ಲಲ್ಲಿ ಸುರಿದ ತುಂತುರು ಮಳೆಯ ಹನಿಗಳ ಮಧ್ಯೆಯೂ ಮತದಾನದ ಉತ್ಸಾಹ ಹೆಚ್ಚಿತ್ತು.

ಆಕರ್ಷಿಸಿದ ಪಿಂಕ್ ಮತಗಟ್ಟೆ: ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಥಾಪಿಸಲಾಗಿದ್ದ 12 ಪಿಂಕ್ ಮತಗಟ್ಟೆಗಳು ಮತದಾರರನ್ನು ಆಕರ್ಷಿಸಿತು. ಉಳಿದಂತೆ ಜಿಲ್ಲೆಯಲ್ಲಿ 9 ಬುಡಕಟ್ಟು ಮತಗಟ್ಟೆಗಳನ್ನು ಕಂಡು ಮತದಾರರು ಹರ್ಷ ವ್ಯಕ್ತಪಡಿಸಿದರು.

ಅದೇ ರೀತಿ ಯುವ ಮತದಾರರಿಗೆ ಸ್ವಾಗತ ಕೋರಿ ನಿರ್ಮಿಸಿದ ಮತಗಟ್ಟೆ ನೋಡುಗರ ಗಮನ ಸೆಳೆಯಿತು. ಮತ ಕ್ಷೇತ್ರದ 982 ಮತಗಟ್ಟೆಗಳಲ್ಲಿ ವೃದ್ಧರಿಗೆ, ಹಿರಿಯರಿಗೆ, ಅನಾರೋಗ್ಯಕ್ಕೆ ಒಳಗಾದ ಮತದಾರರಿಗೆ ವೈದ್ಯಕೀಯ ಚಿಕಿತ್ಸೆ ನೀಡುವುದರ ಜೊತೆಗೆ ಮತ ಚಲಾಯಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿತ್ತು.

ಅಭ್ಯರ್ಥಿಗಳಿಂದ ಮತದಾನ: ತಾಲೂಕಿನ ಆಲೂರು ಗ್ರಾಮದಲ್ಲಿ ಕೊಳ್ಳೇಗಾಲ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ, ನಗರದ ಪೇಟೆ ಪ್ರೈಮರಿ ಶಾಲೆಯ ಮತಗಟ್ಟೆಯಲ್ಲಿ ಚಾಮರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ, ಹನೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಆರ್. ನರೇಂದ್ರ ಸೇರಿದಂತೆ ಜಿಲ್ಲೆಯ ನಾಲ್ಕು ಕ್ಷೇತ್ರಗಳ ಚುನಾವಣಾ ಕಣದಲ್ಲಿರುವ ಅಭ್ಯರ್ಥಿಗಳು ಕುಟುಂಬ ಸಮೇತ ಬಂದು ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಿದರು. ಕಾಂಗ್ರೆಸ್ ಅಭ್ಯರ್ಥಿ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ಅಭಿವೃದ್ಧಿ ಕಾರ್ಯ ನೋಡಿ ಕ್ಷೇತ್ರದ ಜನತೆ ಮತ್ತೊಮ್ಮೆ ಜನಸೇವೆಗೆ ಅವಕಾಶ ಕಲ್ಪಿಸಲ್ಲಿದ್ದಾರೆ ಎಂದರು. ಉಳಿದಂತೆ ಜಿಲ್ಲೆಯ ವಿವಿಧ ಮಠಗಳ ಮಠಾಧೀಶರು, ಹಲವು ಗಣ್ಯರು ಮತ ಚಲಾಯಿಸಿದರು.

ಅಧಿಕಾರಿಗಳ ಭೇಟಿ: ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಮುಖ ಮತಗಟ್ಟೆಗಳಿಗೆ ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಭೇಟಿ ನೀಡಿ, ಪರಿಶೀಲಿಸಿದರು.

ನಟರಾದ ವಿಕ್ಕಿ ವರುಣ್, ನಾಗಭೂಷಣ್, ಗೋಪಿ ಮತದಾನ





ಚಾಮರಾಜನಗರ, ಮೇ 10– ಚಲನಚಿತ್ರ ನಟರಾದ ಜಿಲ್ಲೆಯ ವಿಕ್ಕಿ ವರುಣ್ ಹಾಗೂ ನಾಗಭೂಷಣ್ ಅವರು ಮತ ಹಾಕುವ ಸಲುವಾಗಿಯೇ ಬೆಂಗಳೂರಿನಿಂದ ತಮ್ಮ ಸ್ವಗ್ರಾಮಗಳಿಗೆ ಬಂದು ತಮ್ಮ ಹಕ್ಕು ಚಲಾಯಿಸಿದರು.

ಕೆಂಡಸಂಪಿಗೆ ಖ್ಯಾತಿಯ, ಪ್ರಸ್ತುತ ಕಾಲಾ ಪತ್ಥರ್ ಚಿತ್ರದ ನಾಯಕ ನಟ ವಿಕ್ಕಿ ವರುಣ್ ನಗರದ ಮೂಡ್ಲುಪುರ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮತಗಟ್ಟೆಯಲ್ಲಿ ಮತ ಹಾಕಿದರು. ಆ ಮತಗಟ್ಟೆಯಲ್ಲಿ ಅವರೇ ಮೊದಲ ಮತದಾರ ಎಂಬುದು ವಿಶೇಷ. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮತ ಚಲಾವಣೆ ನಮ್ಮ ಜವಾಬ್ದಾರಿಯಾಗಿದೆ. ನಮ್ಮೂರಿನ ನಾಗರಿಕ ಸಮಸ್ಯೆಗಳನ್ನು ಪ್ರಶ್ನಿಸಲು, ಮತ ಚಲಾವಣೆ ನಮ್ಮ ಕರ್ತವ್ಯ ಎಲ್ಲರೂ ಮತ ಚಲಾಯಿಸಿ ಎಂದು ಮನವಿ ಮಾಡಿದರು.

ಇನ್ನು, ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಶೈಲಿಯ ನಟನೆಯಿಂದ ಪ್ರಸಿದ್ಧರಾಗಿರುವ ನಟ ನಾಗಭೂಷಣ್ ತಮ್ಮ ಸ್ವಗ್ರಾಮ ಕೊಳ್ಳೇಗಾಲ ತಾಲೂಕಿನ ಟಗರಪುರದಲ್ಲಿ ತಮ್ಮ ಕುಟುಂಬದವರೊಡನೆ ಮತ ಚಲಾಯಿಸಿದರು. ಮೈಸೂರಿನಿಂದ ಆಗಮಿಸಿದ ಅವರು ಬಿಳಿ ಪಂಚೆ ಉಟ್ಟು ಸರತಿಯ ಸಾಲಿನಲ್ಲಿ ನಿಂತು ಮತ ಚಲಾವಣೆ ಮಾಡಿದರು.

ನಗರದ ಪಿಡಬ್ಲ್ಯುಡಿ ಶಾಲೆ ಮತಗಟ್ಟೆಯಲ್ಲಿ ಸಾಹಿತಿ, ಚಿಂತಕ ಪ್ರೊ. ಜಿ.ಎಸ್. ಜಯದೇವ ಮತದಾನ ಮಾಡಿದರು. ನಟ ಮಿಮಿಕ್ರಿ ಗೋಪಿ ಅವರು ತಮ್ಮ ಸ್ವಗ್ರಾಮ ಕೊಳ್ಳೇಗಾಲ ತಾಲೂಕಿನ ಕುಣಗಳ್ಳಿಯ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತ ಚಲಾಯಿಸಿದರು.

ಗುಂಡ್ಲುಪೇಟೆಯಲ್ಲಿ ಶಾಂತಿಯುತ ಮತದಾನ



ಗುಂಡ್ಲುಪೇಟೆ, ಮೇ 10– ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಮತದಾನ ಪ್ರಕ್ರಿಯೆಯು ಶಾಂತಿಯುತವಾಗಿ ನಡೆಯಿತು.

ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ತೀವ್ರ ನೇರಾನೇರ ಪೈಪೋಟಿಯುಂಟಾಗಿದ್ದರಿಂದ ಶಾಂತಿಯುತ ಮತದಾನಕ್ಕೆ ಚುನಾವಣಾಧಿಕಾರಿಗಳು ಸಾಕಷ್ಟು ಮುನ್ನೆಚ್ಚರಿಕೆ ಕೈಗೊಂಡಿದ್ದರು.

ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಮತದಾನ ಮಾಡಲು ಸಾರ್ವಜನಿಕರು ಬೆಳಗ್ಗೆ 7 ಗಂಟೆಗೆ ಮತಗಟ್ಟೆಗಳಲ್ಲಿ ಸಾಲುಗಟ್ಟಿ ನಿಂತಿದ್ದರು. ಬಿರು ಬಿಸಿಲನ್ನು ಲೆಕ್ಕಿಸದೇ ಮತದಾರರು ಮತಗಟ್ಟೆಗೆ ಆಗಮಿಸಿ ತಮ್ಮ ಹಕ್ಕು ಚಲಾಯಿಸಿದರು. ತಾಲೂಕಿನ ಕಿಲಗೆರೆ, ಹರವೆ, ಕಬ್ಬಹಳ್ಳಿ ಗ್ರಾಮಗಳಲ್ಲಿ ಇವಿಎಂ ಯಂತ್ರಗಳು ಕೈಕೊಟ್ಟಿದ್ದರಿಂದ ಸುಮಾರು ಮುಕ್ಕಾಲು ಗಂಟೆ ಕಾಲ ಮತದಾನ ಸ್ಥಗಿತವಾಗಿತ್ತು. ಕೂಡಲೇ ಸ್ಥಳಕ್ಕೆ ತೆರಳಿದ ತಾಂತ್ರಿಕ ಸಿಬ್ಬಂದಿ ಯಂತ್ರಗಳನ್ನು ರಿಪೇರಿ ಮಾಡಿದ ನಂತರ ಅವುಗಳಲ್ಲಿಯೇ ಮತದಾನ ನಡೆಸಲಾಯಿತು.

ಮೂಲಭೂತ ಸೌಕರ್ಯಗಳಿಗೆ ಒತ್ತಾಯಿಸಿ ಮತದಾನ ಬಹಿಷ್ಕರಿಸಿದ್ದ ಚಿಕ್ಕೆಲಚೆಟ್ಟಿ ಗ್ರಾಮಕ್ಕೆ ಸ್ವತಃ ಜಿಲ್ಲಾಧಿಕಾರಿ ಡಾ.ರಮೇಶ್ ತೆರಳಿ ಗ್ರಾಮಸ್ಥರ ಮನವೊಲಿಸಿ ಮಧ್ಯಾಹ್ನದ ನಂತರ ಮತಹಾಕಿಸಿದರು.

ಮೊದಲ ಮತದಾನ ಮಾಡಿದ ಸಹೋದರರು: 'ಮೈಸೂರುಮಿತ್ರ' ತಾಲೂಕು ವರದಿಗಾರ ಸೋಮಶೇಖರ್ ಅವರ ಇಬ್ಬರು ಪುತ್ರರಾದ ಜಿ.ಎಸ್.ಗಣೇಶ್‌ಪ್ರಸಾದ್ ಹಾಗೂ ಜಿ.ಎಸ್.ದರ್ಶನ್ ಇಬ್ಬರೂ ಮೊದಲ ಬಾರಿಗೆ ಮತಗಟ್ಟೆಗೆ ತೆರಳಿ ಮತ ಚಲಾಯಿಸಿದರು. ಪ್ರಜಾಪ್ರಭುತ್ವದ ಹಬ್ಬವನ್ನು ಮೊದಲಬಾರಿಗೆ ಮತದಾನ ಮಾಡುವುದರೊಂದಿಗೆ ಸಂಭ್ರಮಿಸಿದ್ದೇವೆ ಎಂದರು.

ಮತ ಚಲಾಯಿಸಿದ ಗಣ್ಯರು: ಹಾಲಿ ಶಾಸಕ ಬಿಜೆಪಿ ಅಭ್ಯರ್ಥಿ ಸಿ.ಎಸ್.ನಿರಂಜನ ಕುಮಾರ್ ತಮ್ಮ ಸ್ವಗ್ರಾಮ ಚೌಡಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು. ಪತ್ನಿ ಸವಿತಾ, ಪುತ್ರ ಭುವನ್ ಕುಮಾರ್, ಪುತ್ರಿ ನಿಹಾರಿಕಾ, ತಾಯಿ ಶಿವಮ್ಮ, ತಂದೆ ಸಿ.ಎಂ.ಶಿವಮಲ್ಲಪ್ಪ ಹಾಗೂ ಕಾರ್ಯಕರ್ತರ ಜತೆಗೂಡಿ ಮತಗಟ್ಟೆಗೆ ತೆರಳಿ ಮತ ಹಾಕಿದರು.

ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ.ಗಣೇಶ್ ಪ್ರಸಾದ್ ಸ್ವಗ್ರಾಮ ಹಾಲಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆಯಲ್ಲಿ ತಮ್ಮ ಮತ ಚಲಾಯಿಸಿದರು. ಪತ್ನಿ ವಿದ್ಯಾ, ತಾಯಿ ಮಾಜಿ ಸಚಿವೆ ಡಾ.ಗೀತಾ ಮಹದೇವ ಪ್ರಸಾದ್, ಚಿಕ್ಕಪ್ಪ ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್ ಜತೆಗೂಡಿ ಮತದಾನ ಮಾಡಿದರು.

ಜೆಡಿಎಸ್ ಅಭ್ಯರ್ಥಿ ಕಡಬೂರು ಮಂಜುನಾಥ್ ತಮ್ಮ ಸ್ವಗ್ರಾಮ ಕಡಬೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮತದಾನ ಮಾಡಿದರು.

ಪತ್ನಿಯೊಂದಿಗೆ ಸೋಮಣ್ಣ ಮತ ಚಲಾವಣೆ

ಚಾಮರಾಜನಗರ, ಮೇ 10– ನಗರದ ಪೇಟೆ ಪ್ರೈಮರಿ ಸರ್ಕಾರಿ ಶಾಲೆಯ ಮತಗಟ್ಟೆ 75ರಲ್ಲಿ ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ ತಮ್ಮ ಪತ್ನಿ ಶೈಲಜಾ ಸೋಮಣ್ಣ ಅವರೊಂದಿಗೆ ಮತಗಟ್ಟೆಗೆ ಬಂದು ಮತ ಚಲಾಯಿಸಿದರು.

ಬೆಂಗಳೂರಿನ ವಿಜಯನಗರದಿಂದ ಚಾಮರಾಜನಗರದ ಶಂಕರಪುರ ಬಡಾವಣೆಯ ಮತದಾರರ ಪಟ್ಟಿಗೆ ತಮ್ಮ ಹೆಸರು ವರ್ಗಾವಣೆ ಮಾಡಿಸಿಕೊಂಡಿರುವ ಸೋಮಣ್ಣ ದಂಪತಿ, ಬೆಳಗ್ಗೆ 9.20ರ ಸುಮಾರಿಗೆ ಮತಗಟ್ಟೆಗೆ ಬಂದು ಸರದಿ ಸಾಲಿನಲ್ಲಿ ನಿಂತು ಹಕ್ಕು ಚಲಾಯಿಸಿದರು.



ತಮಗೆ ತಾವೇ ಮತ ಚಲಾಯಿಸಿಕೊಂಡ ಸೋಮಣ್ಣ: ಬೆಂಗಳೂರಿನ ಗೋವಿಂದರಾಜನಗರ ಶಾಸಕರಾಗಿದ್ದ ವಿ. ಸೋಮಣ್ಣ ವಿಜಯನಗರ ನಿವಾಸಿಯಾದ ಕಾರಣ ಕಳೆದ ಮೂರು ಬಾರಿಯಿಂದ ತಮ್ಮ ಮತ ತಮಗೆ ಚಲಾಯಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಈ ಬಾರಿ ತಮಗೆ ತಾವೇ ಮತ ಹಾಕಿಕೊಂಡಿದ್ದಕ್ಕೆ ಖುಷಿ ವ್ಯಕ್ತಪಡಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರು ಬದಲಾವಣೆ ಬಯಸಿದ್ದಾರೆ. ಹೀಗಾಗಿ ಚಾಮರಾಜನಗರ ಹಾಗೂ ವರುಣ ಎರಡೂ ಕ್ಷೇತ್ರದಲ್ಲಿ ಜಯಗಳಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಾನು ರಾಜಕೀಯಕ್ಕೆ ಬಂದು 45 ವರ್ಷ ಆಯ್ತು. ಎಂಪಿ, ಎಂಎಲ್‌ಎ, ಕಾರ್ಪೋರೇಟರ್ ಸೇರಿ 12 ಬಾರಿ ಚುನಾವಣೆಗೆ ನಿಂತಿದ್ದೇನೆ ಈಗ ಮತ್ತೆ ಚುನಾವಣೆಗೆ ನಿಂತಿದ್ದು, ಜನರು ತೀರ್ಮಾನ ಮಾಡುತ್ತಾರೆ ಎಂದರು.

ಹೆಗ್ಗವಾಡಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮತದಾನ

ಚಾಮರಾಜನಗರ, ಮೇ 10– ತಾಲೂಕಿನ ಹೆಗ್ಗವಾಡಿ ಗ್ರಾಮದಲ್ಲಿ ಬುಧವಾರ ನಂಜನಗೂಡು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮತದಾನ ಮಾಡಿದರು.

ಮತದಾನಕ್ಕೂ ಮೊದಲು ತಮ್ಮ ತಂದೆ ದಿ.ಆರ್. ಧ್ರುವನಾರಾಯಣ್ ಹಾಗೂ ತಾಯಿ ದಿ.ವೀಣಾ ಧ್ರುವನಾರಾಯಣ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು. ದರ್ಶನ್ ಅವರು ಸಹೋದರ ಧೀರನ್ ಅವರ ಜೊತೆಗೂಡಿ ತಮ್ಮ ತಂದೆ–ತಾಯಿಗೆ ಪೂಜೆ ಸಲ್ಲಿಸುವ ಮೂಲಕ ಗೌರವ ಸಲ್ಲಿಸಿದರು.


ನಂತರ ಗ್ರಾಮದಲ್ಲಿನ ಮತಗಟ್ಟೆ ಸಂಖ್ಯೆ 65ರಲ್ಲಿ ಕುಟುಂಬದ ಸದಸ್ಯರು ಹಾಗೂ ಕಾರ್ಯಕರ್ತರೊಂದಿಗೆ ತೆರಳಿ ಮತದಾನ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಬಿ.ಎಸ್. ರೇವಣ್ಣ, ವಕೀಲರಾದ ಅರುಣ್‌ಕುಮಾರ್,



ಅಜಯ್, ಶಂಭು, ಗ್ರಾಪಂ ಸದಸ್ಯರಾದ ಆರ್. ಕೆಂಪರಾಜ್, ನಾಗರಾಜು, ಕೌಶಿಕ್, ಸತೀಶ್, ಮಹೇಶ್, ಮಹದೇವಸ್ವಾಮಿ, ಮನು, ಮಧುಶಂಕರ್, ಇತರರು ಉಪಸ್ಥಿತರಿದ್ದರು.

"ವೋಟರ್ ಲಿಸ್ಟ್‌ನಲ್ಲಿ ನನ್ನ ಹೆಸರು ಸೇರಿಸಿದಾಗಲೇ ಖುಷಿಯಾಗಿತ್ತು. ಮೊದಲ ಬಾರಿ ಮತದಾನ ಮಾಡುತ್ತೇನೆಂಬುದು ಬಹಳ ಸಂತೋಷ, ಕುತೂಹಲ ಮೂಡಿಸಿತ್ತು. ಇಂದು ನನ್ನ ಮೊದಲ ಮತದಾನ ಮಾಡಿದೆ. ನಾನೊಬ್ಬ ಜವಾಬ್ದಾರಿಯುತ ಭಾರತೀಯ ಪ್ರಜೆಯಾಗಿ, ಮತದಾನ ಮಾಡಿದ್ದು ಸಂತೋಷ ಮೂಡಿಸಿತು.



– ಗೌರಿ
ಚಾಮರಾಜನಗರ

ಹಸೆಮಣೆಯಿಂದ ಮತಗಟ್ಟೆಗೆ ಬಂದ ನವ ವಧು–ವರರು!

ಚಾಮರಾಜನಗರ, ಮೇ 10– ಹಸೆಮಣೆಯೇರಿದ ನವ ವಧು–ವರರು ಮದುವೆಯ ಉಡುಗೆಯಲ್ಲೇ ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಿದ ಪ್ರಸಂಗ ತಾಲೂಕಿನ ಮೇಲಾಜಿಪುರದಲ್ಲಿ ನಡೆದಿದೆ. ತಾಲೂಕಿನ ಮೇಲಾಜಿಪುರದ ಮಾದಲಾಂಬಿಕಾ (ಪುಟ್ಟಿ) ಹಾಗೂ ನಂಜನಗೂಡು ತಾಲೂಕಿನ ಕಾರೇಪುರದ ಕೆ.ಎಸ್. ಮಂಜುನಾಥ್ ಅವರ ವಿವಾಹ ಬುಧವಾರ ತಾಲೂಕಿನ ಪಣ್ಯದಹುಂಡಿಯ ಕಲ್ಯಾಣಮಂಟಪದಲ್ಲಿ ನಡೆಯಿತು. ಹಸೆಮಣೆಯೇರಿದರೂ ಮತದಾನದ ಕರ್ತವ್ಯ ಮರೆಯದ ನವ ವಧು–ವರರು ಮದುವೆಯಾದ ಬಳಿಕ ಮೇಲಾಜಿಪುರದ ಮತಗಟ್ಟೆಗೆ ಆಗಮಿಸಿದರು. ವಧು ಮಾದಲಾಂಬಿಕೆಯ ಮತ ಈ ಮತಗಟ್ಟೆಯಲ್ಲಿತ್ತು. ವಧು ಇಲ್ಲಿ ಮತ ಚಲಾಯಿಸಿದರು. ವರ ಮಂಜುನಾಥ್ ಅವರ ಮತ ನಂಜನಗೂಡು ತಾಲೂಕು ಕಾರೇಪುರದಲ್ಲಿತ್ತು. ನವವಧು–ವರರು ಮತ್ತೆ ಕಾರನ್ನೇರಿ ಕಾರೇಪುರಕ್ಕೆ ತೆರಳಿದರು.



ಅಲ್ಲಿ ಮಂಜುನಾಥ್ ಮತ ಚಲಾಯಿಸಿದರು. ಮದುವೆಯ ಸಂಭ್ರಮದಲ್ಲೂ ಮತದಾನ ಮರೆಯದ ಈ ನವ ದಂಪತಿ ಮತದ ಮೌಲ್ಯವನ್ನು ಸಾರಿ ಮಾದರಿಯಾಗಿದ್ದಾರೆ.

ನಾವೂ ಮತದಾನ ಮಾಡಿದೆವು...: ಶ್ರೀಗಳು ಸೇರಿದಂತೆ ಗಣ್ಯರಿಂದ ಸಾಂವಿಧಾನಿಕ ಮತದಾನ ಹಕ್ಕು ಚಲಾವಣೆ...


ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ


ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಶ್ರೀಗಳು



ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ


ನಗರ ಪೊಲೀಸ್ ಆಯುಕ್ತ ರಮೇಶ್ ದಂಪತಿ


ಜಿಪಂ ಸಿಇಓ ಗಾಯತ್ರಿ.


ನಿರ್ಮಲಾ ಸೀತಾರಾಮನ್


ಪ್ರತಾಪ್ ಸಿಂಹ


ಜಾವಗಲ್ ಶ್ರೀನಾಥ್


ದೇವನೂರ ಮಹದೇವ


ಸಿ.ಎನ್.ಮಂಜೇಗೌಡ


ಎಸ್.ಎ.ರಾಮದಾಸ್


ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಮತ್ತು ಕುಟುಂಬದವರು.


ಯಶಸ್ವಿ ಸೋಮಶೇಖರ್


ಆರ್.ಲಿಂಗಪ್ಪ


ಎಸ್‌ಬಿಎಂ ಮಂಜು


ಸಂದೇಶ್ ಸ್ವಾಮಿ, ಬಿ.ಪಿ.ಮಂಜುನಾಥ್, ರಘು ಕೌಟಿಲ್ಯ, ಡಾ.ಅನಿಲ್ ಥಾಮಸ್ ಇನ್ನಿತರರು.


ಯೋಗ ಪಟು ಖುಷಿ.

ವರುಣ: ಸಿದ್ದರಾಮನಹುಂಡಿಯಲ್ಲಿ ಸಿದ್ದರಾಮಯ್ಯ ಮತದಾನ

ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿ ಶ್ರೀ ಸಿದ್ದರಾಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ, ಕಾಂಗ್ರೆಸ್‌ಗೆ 130ಕ್ಕೂ ಹೆಚ್ಚು ಸ್ಥಾನ, ಭಾರಿ ಅಂತರದಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದ ಮಾಜಿ ಸಿಎಂ

ಮೈಸೂರು,ಮೇ 10(ಪಿಎಂ)– ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯೂ ಆದ ಮಾಜಿ ಮುಖ್ಯಮಂತ್ರಿ ಮತ್ತು ವಿಪಕ್ಷ ನಾಯಕ ಸಿದ್ದರಾಮಯ್ಯ ಇದೇ ಕ್ಷೇತ್ರ ವ್ಯಾಪ್ತಿಯ ಸ್ವಗ್ರಾಮ ಸಿದ್ದರಾಮಯ್ಯನ ಹುಂಡಿಯಲ್ಲಿ ಮತದಾನ ಮಾಡಿದರು.

ಕ್ಷೇತ್ರದ ಹಾಲಿ ಶಾಸಕರೂ ಆದ ತಮ್ಮ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಜೊತೆಯಲ್ಲಿ ಗ್ರಾಮಕ್ಕೆ ಆಗಮಿಸಿ, ಗ್ರಾಮದ ಶ್ರೀ ಸಿದ್ದರಾಮೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ (ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ) ಮತಗಟ್ಟೆ ಸಂಖ್ಯೆ 86ರಲ್ಲಿ ತಮ್ಮ ಮತದಾನದ ಹಕ್ಕು ಚಲಾಯಿಸಿದರು. ಬೆಳಗ್ಗೆ 11 ಗಂಟೆ ಸುಮಾರಿಗೆ ಸಿದ್ದರಾಮಯ್ಯ ಮತದಾನ ಮಾಡಿದರು. ಅವರ ಪುತ್ರ ಡಾ.ಯತೀಂದ್ರ ಕೂಡ ಇದೇ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಸಿದ್ದರಾಮಯ್ಯ ಅವರ ಆಗಮನದಿಂದ ಶಾಲೆಯ ಆವರಣದಲ್ಲಿ ಅಪಾರ ಸಂಖ್ಯೆಯಲ್ಲಿ ಅವರು ಅಭಿಮಾನಿಗಳು ನೆರೆದಿದ್ದರು. ಈ ಹಿನ್ನೆಲೆಯಲ್ಲಿ ನೂಕುನುಗ್ಗಲು ಉಂಟಾಗಿ ಪೊಲೀಸರು ಪರಿಸ್ಥಿತಿ ನಿಯಂತ್ರಣಕ್ಕೆ ತರಲು ಹರಸಾಹಸ ಪಟ್ಟರು. 'ಮೈಸೂರು ಹುಲಿ...' 'ಕರ್ನಾಟಕದ ಹುಲಿ...' 'ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ...' ಎಂಬಿತ್ಯಾದಿಯಾಗಿ ಸಿದ್ದರಾಮಯ್ಯ ಪರ ಘೋಷಣೆಗಳನ್ನು ಅಭಿಮಾನಿಗಳು ಮೊಳಗಿಸಿದರು. ಸಿದ್ದರಾಮಯ್ಯನವರ ಸೊಸೆ ಸ್ಮಿತಾ ರಾಕೇಶ್, ಎಂಎಲ್‌ಸಿ ಡಾ.ತಿಮ್ಮಯ್ಯ ಮತ್ತಿತರರು ಹಾಜರಿದ್ದರು.

ಇದೇ ವೇಳೆ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ಈಗ ಬಿಜೆಪಿಯವರಿಗೆ ಹಣ ಬಿಟ್ಟರೆ ಬೇರೆ ಏನೂ ಹೇಳಲು ಇಲ್ಲ. ಮತದಾರರ ಬಳಿ ಹೋಗಿ ಇವರು ಏನು ಅಭಿವೃದ್ಧಿ ಮಾಡಿದ್ದೇವೆ ಎಂದು ಹೇಳಲು ಸಾಧ್ಯ. ಈವರೆಗೆ ಒಂದು ಮನೆ ಕೊಡಲಾಗಿಲ್ಲ. ಜನರಿಗೆ ನೀಡುವ ಅಕ್ಕಿ ಪ್ರಮಾಣ ಇಳಿಕೆ ಮಾಡಿದರು. ಕಳೆದ ನಾಲ್ಕು ವರ್ಷಗಳಲ್ಲಿ ಬಿಜೆಪಿ ಸಾಧನೆ ಶೂನ್ಯ ಹಾಗಾಗಿ ಹಣದ ಮೂಲಕ ಚುನಾವಣೆ ಗೆಲ್ಲಬೇಕೆಂದು ಬಿಜೆಪಿಯವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಧಾನಿ ಮೋದಿಯವರ ಚುನಾವಣಾ ಪ್ರಚಾರದ ರ‍್ಯಾಲಿಯಿಂದ ಏನೂ ಪರಿಣಾಮ ಉಂಟಾಗದು. ಅವರು ಬೆಲೆ ಏರಿಕೆ, ನಿರುದ್ಯೋಗ, 40 ಪರ್ಸೆಂಟ್ ಕಮಿಷನ್‌ನ ಭ್ರಷ್ಟಾಚಾರ ಬಗ್ಗೆ ಮಾತನಾಡಿಲ್ಲ. ಹೀಗಿರುವಾಗ ಜನ ಬಿಜೆಪಿಗೆ ಏಕೆ ಓಟು ಮಾಡುತ್ತಾರೆ ಎಂದು ಪ್ರತಿಕ್ರಿಯಿಸಿದರು.

ಕಾಂಗ್ರೆಸ್ 130ಕ್ಕೂ ಹೆಚ್ಚು ಸ್ಥಾನ ಗಳಿಸಲಿದೆ. ಹಿಂದೆ ನುಡಿದಂತೆ ನಡೆದಿದ್ದೇವೆ. ಇದನ್ನು ಜನ ಮನಗೊಂಡಿದ್ದಾರೆ. ಜೊತೆಗೆ ನಾವು ನೀಡಿರುವ ಭರವಸೆ ಮೇಲೆಯೂ ಜನ ನಂಬಿಕೆ ಹೊಂದಿದ್ದಾರೆ. ಆಡಳಿತ ವಿರೋಧಿ ಅಲೆ ಇದ್ದು, ಕಾಂಗ್ರೆಸ್ 100ಕ್ಕೆ 100 ಅಧಿಕಾರ ಹಿಡಿಯಲಿದೆ. ಭಾರಿ ಅಂತರದಲ್ಲಿ ವರುಣದಲ್ಲಿ ಗೆಲ್ಲುವ ವಿಶ್ವಾಸ ಹೊಂದಿದ್ದೇನೆ ಎಂದು ಹೇಳಿದರು. ಈ ವಾರದಲ್ಲಿ ಮೈಸೂರು ಜನಕ್ಕೆ ಸಿಹಿ ಸುದ್ದಿ ಬರುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಖಂಡಿತ ಬರುತ್ತದೆ ಎಂದರು. ಮುಖ್ಯಮಂತ್ರಿ ಆಗಿ ಸಿಹಿ ಸುದ್ದಿ ಬರುತ್ತದೆಯೇ ಎಂಬುದಕ್ಕೆ ಉತ್ತರಿಸಿ, ಶಾಸಕರಾಗಿ ಆಯ್ಕೆ ಆಗುವವರು ಹಾಗೂ ಹೈಕಮಾಂಡ್‌ಗೆ ಬಿಟ್ಟ ವಿಚಾರವದು. ಒಟ್ಟಾರೆ ಕಾಂಗ್ರೆಸ್ ಅಧಿಕಾರಕ್ಕೆ ಬರುವ ಸಿಹಿ ಸುದ್ದಿ ಇರುತ್ತದೆ. ದೇಶದ ಭವಿಷ್ಯ ಕೂಡ ಈ ಚುನಾವಣೆಯ ಫಲಿತಾಂಶದಲ್ಲಿ ಅಡಕವಾಗಿದೆ ಎಂದು ತಿಳಿಸಿದರು.





ವೈದ್ಯಕೀಯ ಕಾರಣಕ್ಕೆ ಬಲಗೈ ತೋರು ಬೆರಳಿಗೆ ಶಾಯಿ

ಮೈಸೂರು,ಮೇ 10(ಪಿಎಂ)– ವೈದ್ಯಕೀಯ ಕಾರಣದಿಂದ ಮಾಜಿ ಸಿಎಂ ಸಿದ್ದರಾಮಯ್ಯ ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಾಕಲಾಗಿದೆ ಎಂದು ಮತಗಟ್ಟೆ ಅಧಿಕಾರಿಗಳು ತಿಳಿಸಿದ್ದಾರೆ. ಸಿದ್ದರಾಮನಹುಂಡಿಯ ಮತಗಟ್ಟೆ 86ರಲ್ಲಿ ಮತದಾನ ಮಾಡಿದ ಸಿದ್ದರಾಮಯ್ಯ ನವರಿಗೆ ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಾಕಲಾಗಿತ್ತು. ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ಆಯೋಗದ ನಿರ್ಧಾರದಂತೆ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕಬೇಕಾಗಿತ್ತು. ಆದರೆ ಸಿದ್ದರಾಮಯ್ಯ ಅವರಿಗೆ ಬಲಗೈ ತೋರು ಬೆರಳಿಗೆ ಶಾಯಿ ಹಾಕಿದ್ದ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಸಿದ್ದರಾಮಯ್ಯರವರು ತಮ್ಮ ವೈದ್ಯಕೀಯ ಕಾರಣವನ್ನು ಮತಗಟ್ಟೆ ಪ್ರಿಸೈಡಿಂಗ್ ಅಧಿಕಾರಿಗೆ ತಿಳಿಸಿದ ಹಿನ್ನೆಲೆಯಲ್ಲಿ ಅಪ್ಲಿಕೇಷನ್ ನಿಯಮ 49ಕೆ ಪ್ರಕಾರ ಬಲ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಾಕಲಾಗಿದೆ ಎಂಬುದು ಪ್ರಾಥಮಿಕ ಮಾಹಿತಿಗಳಿಂದ ತಿಳಿದು ಬಂದಿದೆ ಎಂದು ವಾರ್ತಾ ಇಲಾಖೆ ಪ್ರಕಟಣೆ ತಿಳಿಸಿದೆ.



ಕೈ ಕೊಟ್ಟ ಇವಿಎಂ; ಒಂದು ತಾಸು ಮತದಾನ ವಿಳಂಬ




ಮೈಸೂರು, ಮೇ 10.(ಸಿಎನ್)–ಇವಿಎಂ ಮತಯಂತ್ರ ತಾಂತ್ರಿಕ ದೋಷ ಉಂಟಾಗಿ ಮತದಾರರು ಮತಗಟ್ಟೆಯಲ್ಲೇ ಕಾದು ಕುಳಿತು, ನಂತರ ಮತ ಚಲಾಯಿಸಿದ ಘಟನೆ ನಡೆಯಿತು. ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಮಾನುಜ ರಸ್ತೆಯಲ್ಲಿನ ಸೇಂಟ್ ಮೇರಿಸ್ ಶಾಲೆ ಮತಗಟ್ಟೆ ಸಂಖ್ಯೆ 190ರಲ್ಲಿ ಇವಿಎಂ ತಾಂತ್ರಿಕ ದೋಷ ಉಂಟಾಗಿ ಸುಮಾರು 1 ಗಂಟೆ ಮತದಾನ ಸ್ಥಗಿತವಾಗಿತ್ತು. ಬೆಳಗ್ಗೆ 11–30 ಗಂಟೆಗೆ ಇವಿಎಂಗಳಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ಮಧ್ಯಾಹ್ನ 12–30 ಗಂಟೆಗೆ ಚುನಾವಣಾ ತಾಂತ್ರಿಕ ತಂಡದಿಂದ ದೋಷ ಸರಿಪಡಿಸಿ ಮತ ಚಲಾಯಿಸಲು ಅನುವು ಮಾಡಿಕೊಡಲಾಯಿತು.

ಸಾಲುಗಟ್ಟಿ ನಿಂತ ಮತದಾರರು: ಇವಿಎಂ ಮಷಿನ್ ಕೆಟ್ಟುನಿಂತ ಪರಿಣಾಮ ಮತಗಟ್ಟೆಯಲ್ಲಿ ಸುಮಾರು 1 ತಾಸು ಮತದಾರರು ಕಾದು ನಿಂತು ಹೈರಾಣಾದರು. ಕೆಲ ಮತದಾರರು, ತಾಂತ್ರಿಕ ದೋಷ ತಿಳಿದು ತಮ್ಮ ಮನೆಗಳಿಗೆ ತೆರಳಿ ವಾಪಸ್ ಮತಗಟ್ಟೆಗೆ ಬಂದು ಮತ ಚಲಾಯಿಸಿದರು.

ಮತದಾರರ ಆಕ್ರೋಶ: ಇದೆಲ್ಲಾ ರಾಜಕೀಯ ನಾಯಕರ ದೊಂಬರಾಟ ಸರ್. ಅವರವರ ಗಲಾಟೆಗಳಲ್ಲಿ ಮತದಾರರಿಗೆ ತೊಂದರೆ ನೀಡುತ್ತಿದ್ದಾರೆ. 1 ಗಂಟೆ ಅವಧಿಯಲ್ಲಿ ಎಷ್ಟೋ ಮತದಾನ ಮಾಡಬಹುದಿತ್ತು. ಬೇಕು ಅಂತಲೇ ಈ ರೀತಿಯ ಮತಯಂತ್ರಗಳನ್ನು ನೀಡಿ ಮತದಾರರ ಸಮಯ ವ್ಯರ್ಥ ಮಾಡಿದ್ದಾರೆ. ಚುನಾವಣೆ ಅಧಿಕಾರಿಗಳು ವಿಳಂಬವಾದ ಸಮಯ ಸರಿ ಹೊಂದಿಸಲು ಮತದಾನದ ಸಮಯ ವಿಸ್ತರಣೆ ಮಾಡಬೇಕಿತ್ತು. ಈ ಬೂತ್‌ನಲ್ಲಿ 60% ಮತದಾನವಾಗಿದೆ ಎಂದು ಮತದಾರ ನಾರಾಯಣಪ್ಪ ಆರೋಪಿಸಿದರು.

ಒಂದು ಕಡೆ ಇವಿಎಂ ಸಮಸ್ಯೆ ಆದರೆ ಮತ್ತೊಂದೆಡೆ ಬಿರುಬಿಸಿಲಿನಿಂದ ಬಳಲಿದ ಮತದಾರರಿಗೆ ಹಾಗೂ ಚುನಾವಣಾ ಸಿಬ್ಬಂದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕೂಡ ಮಾಡಿರಲಿಲ್ಲ.

ಅಮೆರಿಕಾದಿಂದ ಬಂದು ಮತ ಚಲಾಯಿಸಿದ ಯುವತಿ!



ಬೆಂಗಳೂರು: ಪ್ರಜಾಪ್ರಭುತ್ವದ ಹಬ್ಬದಲ್ಲಿ ತನ್ನ ಹಕ್ಕು ಚಲಾಯಿಸಲೇಬೇಕೆಂದು ಯುವತಿಯೊಬ್ಬರು ಅಮೆರಿಕದಿಂದ ಬೆಂಗಳೂರಿಗೆ ಬಂದು ಮತ ಚಲಾಯಿಸಿದ ಬಗ್ಗೆ ವರದಿಯಾಗಿದೆ. ಬೆಂಗಳೂರಿನ ಬಸವನಗುಡಿ ನಿವಾಸಿಯಾಗಿದ್ದು, ಹಾಲಿ ಅಮೆರಿಕಾದಲ್ಲಿ ಉದ್ಯೋಗಿಯಾಗಿರುವ ಮೇಘನಾ ಅವರು ಮತ ಚಲಾಯಿಸುವ ಉದ್ದೇಶದಿಂದಲೇ ಬೆಂಗಳೂರಿಗೆ ಆಗಮಿಸಿದ್ದಾರೆ. ಬಸವನಗುಡಿ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ಮತ ಚಲಾಯಿಸಿದರು. ಮೇಘನಾ 2ನೇ ಬಾರಿಗೆ ಮತ ಚಲಾಯಿಸಿದ್ದು, ಈ ಹಿಂದೆ ಚುನಾವಣೆ ನಡೆದಾಗ ಬೆಂಗಳೂರಿನಲ್ಲೇ ವಾಸವಾಗಿದ್ದರು.


ಮೈಸೂರಿನ ಸಿದ್ಧಾರ್ಥನಗರದ ನಿವಾಸಿಗಳಾದ 99 ವರ್ಷದ ಕೆ.ವಿ.ಕಪನಿಪತಯ್ಯ ಹಾಗೂ 89 ವರ್ಷದ ಸುಂದರಮ್ಮ ಸಂಭ್ರಮದಿಂದ ಮತ ಚಲಾಯಿಸಿದರು.

ವ್ಹೀಲ್ ಕುರ್ಚಿಯಲ್ಲಿ ಬಂದು ಮತ ಚಲಾಯಿಸಿದ 80 ವರ್ಷದ ಶಾರದಮ್ಮ



ಮೈಸೂರು, ಮೇ 10 (ಸಿಎನ್)–ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಾದವಗಿರಿ ಮತಗಟ್ಟೆ ಸಂಖ್ಯೆ 217ರಲ್ಲಿ 80 ವರ್ಷದ ವೃದ್ಧೆ ಶಾರದಮ್ಮ ತಮ್ಮ ಕುಟುಂಬಸ್ಥರೊಂದಿಗೆ ವ್ಹೀಲ್ ಕುರ್ಚಿಯಲ್ಲಿ ಆಗಮಿಸಿ ಮತದಾನ ಮಾಡಿದರು. ಈ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮತದಾನದಿಂದ ಯಾರೂ ವಂಚಿತರಾಗಬಾರದು. ಎಲ್ಲರೂ ತಪ್ಪದೇ ಮತ ಚಲಾಯಿಸಿ ಪ್ರಜಾಪ್ರಭುತ್ವ ಸಂದೇಶ ಸಾರಬೇಕು. ಮತದಾನ ನಮ್ಮೆಲ್ಲರ ಹಕ್ಕು ಎಂದು ಮತದಾನದ ಮಹತ್ವದ ಬಗ್ಗೆ ವಿವರಿಸಿದರು.

ಹಿರಿಯರು, ಯುವ ಮತದಾರರಿಗೆ 'ನಮ್ಮ ಮತ ನಮ್ಮ ಶಕ್ತಿ', 'ನನ್ನ ಮೊದಲ ಮತ' ಗೌರವ

ಮೈಸೂರು,ಮೇ10(ಎಂಟಿವೈ)– ಮತದಾನದ ಪ್ರಮಾಣ ಹೆಚ್ಚಿಸಲು ರಾಜ್ಯದಲ್ಲೇ ಮೊದಲ ಬಾರಿಗೆ ಮೈಸೂರಲ್ಲಿ ಹಿರಿಯ ಹಾಗೂ ಯುವ ಮತದಾರರಿಗೆ ಜಿಲ್ಲಾ ಸ್ವೀಪ್ ಸಮಿತಿಯು ವಿಶೇಷ ಗೌರವ ಸೂಚಿಸಿ ಗಮನ ಸೆಳೆದಿದೆ.

ಮತದಾನದ ಪ್ರಮಾಣ ಹೆಚ್ಚಿಸಲು ವಿವಿಧ ಕಾರ್ಯಕ್ರಮ ರೂಪಿಸಿದ್ದ ಸ್ವೀಪ್ ಸಮಿತಿ, ಜನರು ಮತದಾನ ಮಾಡಲು ಅರಿವು ಮೂಡಿಸಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಇದೇ ಮೊದಲ ಬಾರಿಗೆ ಮತ ಚಲಾಯಿಸಿದ ಯುವ ಮತದಾರರಿಗೆ 'ನನ್ನ ಮೊದಲ ಮತ' ಶೀರ್ಷಿಕೆಯ ಸುತ್ತು ಪಟ್ಟಿಯನ್ನು (ಎಸ್‌ಎಎಸ್‌ಹೆಚ್) ಹಾಕಿ ಪ್ರಮಾಣ ಪತ್ರ ನೀಡಲಾಯಿತು. ಮತ ಚಲಾಯಿಸಿದ ಹಿರಿಯ ನಾಗರೀಕರಿಗೆ 'ನಮ್ಮ ಮತ ನಮ್ಮ ಪವರ್' ಶೀರ್ಷಿಕೆಯ ಕವಚ ಹಾಕಿ ಗೌರವಿಸಲಾಯಿತು.

ಮೈಸೂರಿನ ಕುವೆಂಪುನಗರದ ಜ್ಞಾನಗಂಗಾ ಶಾಲೆಯಲ್ಲಿನ ಮತಗಟ್ಟೆಯಲ್ಲಿ ಇದೇ ಮೊದಲ ಬಾರಿಗೆ ಮತದಾನ ಮಾಡಿದ ಇಬ್ಬರು ಯುವತಿಯರಿಗೆ ಜಿಲ್ಲಾ ಚುನಾವಣಾ ಅಂಬಾಸಿಡರ್, ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ ಹಾಗೂ ಪಾಲಿಕೆಯ ಪರಿಸರ ಅಭಿಯಂತರ ಮೈತ್ರಿ ಅವರು ಪ್ರಮಾಣ ಪತ್ರ ವಿತರಿಸಿ ಶುಭ ಕೋರಿದರು. ಅಲ್ಲದೆ, ವಿವಿಧೆಡೆ ಮತ ಚಲಾಯಿಸಿದ ಹಿರಿಯ ನಾಗರಿಕರಿಗೆ ಕವಚ ತೊಡಿಸಿ ಗೌರವಿಸಲಾಯಿತು. ಮೈಸೂರಿನ ಪ್ರಮುಖ ನಾಲ್ಕು ಕ್ಷೇತ್ರಗಳಲ್ಲಿ ತಲಾ 6 ಮಂದಿ ಯುವ ಮತದಾರರು ಹಾಗೂ ಹಿರಿಯ ಮತದಾರರಿಗೆ ಸ್ವೀಪ್ ಸಮಿತಿ ಗೌರವ ಸೂಚಿಸಿತು. ಮತದಾನ ಮಾಡಲು ಪ್ರೇರಣೆ ನೀಡುವ ನಿಟ್ಟಿನಲ್ಲಿ ಮೈಸೂರಲ್ಲಿ ಕೈಗೊಂಡ ಈ ಕ್ರಮ ಮೆಚ್ಚುಗೆಗೆ ಪಾತ್ರವಾಗಿದೆ.



ಮೊದಲ ಬಾರಿಗೆ ಮತ ಚಲಾಯಿಸಿ ಇಬ್ಬರು ಯುವತಿಯರಿಗೆ ಚುನಾವಣಾ ಅಂಬಾಸಿಡರ್, ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ ಹಾಗೂ ಪಾಲಿಕೆಯ ಪರಿಸರ ಅಭಿಯಂತರ ಮೈತ್ರಿ ಅವರು ಪ್ರಮಾಣ ಪತ್ರ ವಿತರಿಸಿ, ಶುಭ ಕೋರಿದರು



ಮತ ಚಲಾಯಿಸಿದ ಹಿರಿಯ ಮತದಾರರಿಗೆ 'ನಮ್ಮ ಮತ, ನಮ್ಮ ಪವರ್' ಪಟ್ಟಿ ತೊಡಿಸಿ, ಗೌರವಿಸಲಾಯಿತು.

ಮೂರನೇ ಪುಟದಿಂದ

ಶಾಂತಿಯುತ ಶೇ.72.81 ಮತದಾನ

ಸಿ.ಎಂ. ಇಬ್ರಾಹಿಂ, ತಮ್ಮ ತಮ್ಮ ಮತ ಕ್ಷೇತ್ರಗಳಲ್ಲಿ ಮತಚಲಾಯಿಸಿದರು. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಮತ್ತು ಇತರ ರಾಷ್ಟ್ರೀಯ ರಾಜಕೀಯ ಪಕ್ಷಗಳು, ಪಕ್ಷೇತರ ಸದಸ್ಯರು ಸೇರಿದಂತೆ 2615 ಅಭ್ಯರ್ಥಿಗಳು ಕಣದಲ್ಲಿದ್ದು, ಅವರ ಭವಿಷ್ಯ ವನ್ನು ಮತದಾರರು ನಿರ್ಧರಿಸಿದ್ದಾರೆ. ಮೂರೂ ರಾಜಕೀಯ ಪಕ್ಷಗಳು ಅಧಿಕಾರದ ಚುಕ್ಕಾಣಿ ಹಿಡಿಯಲು ಹಾತೊರೆಯುತ್ತಿದ್ದು, ಯಾವ ಪಕ್ಷಕ್ಕೆ ಮತದಾರರು ಆಶೀರ್ವಾದ ಮಾಡಲಿದ್ದಾರೆ ಎಂಬುದು ಮೇ 13 ರಂದು ಬಹಿರಂಗ ಗೊಳ್ಳಲಿದೆ. ಅಂದು ಎಲ್ಲಾ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಆಯಾ ತಾಲೂಕು, ಜಿಲ್ಲಾ, ಪಾಲಿಕೆ ಕೇಂದ್ರಗಳಲ್ಲಿ ನಡೆಯಲಿದೆ.

ಮತಗಟ್ಟೆಯಲ್ಲೇ ಮಗು ಜನನ: ಮತದಾನ ಸಂದರ್ಭದಲ್ಲಿ ಕೆಲವು ಮನಮುಟ್ಟುವ ಘಟನೆಗಳೂ ಜರುಗಿವೆ. ಕುರುಗೋಡು ವಿಧಾನಸಭಾ ಕ್ಷೇತ್ರದಲ್ಲಿ ತುಂಬು ಗರ್ಭಿಣಿಗೆ ಮತ ಕೇಂದ್ರದಲ್ಲಿಯೇ ಸಹಜ ಹೆರಿಗೆ ಆಗಿದೆ. ಆಕೆ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಕೂಡಲೇ ತಾಯಿ ಮತ್ತು ನವಜಾತಶಿಶುವನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ. ಮತ ಚಲಾಯಿಸಿ, ಗುರುತು ತೋರಿಸಿದವರಿಗೆ ರಾಜ್ಯದ ಕೆಲವು ಹೋಟೆಲ್‌ಗಳಲ್ಲಿ ಉಚಿತವಾಗಿ ತಿಂಡಿ–ಊಟ ನೀಡಲಾಗಿದೆ. ಕೆಲವೆಡೆ ತಾಂತ್ರಿಕ ದೋಷದಿಂದ ವಿದ್ಯುನ್ಮಾನ ಯಂತ್ರಗಳು ಬದಲಾವಣೆ ಮಾಡಿದರೆ, ಮತ್ತೆ ಕೆಲವೆಡೆ ಕಾರ್ಯಕರ್ತರು, ವಾಹನದಲ್ಲಿ ಕೊಂಡೊಯ್ಯುತ್ತಿದ್ದ ಮತಯಂತ್ರವನ್ನೇ ಪುಡಿಪುಡಿ ಮಾಡಿದ್ದಾರೆ.

ಕೆಲವೆಡೆ ಒಂದು ಪಕ್ಷಕ್ಕೆ ಮತಚಲಾಯಿಸಿ ಎಂದು ಮತಗಟ್ಟೆಯ ಬಳಿ, ಕಾರ್ಯಕರ್ತರು ಮತದಾರರಿಗೆ ಮನವಿ ಮಾಡುವ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದಿದೆ. ಕೆಲವೆಡೆ ಮತಗಟ್ಟೆ ಸಿಬ್ಬಂದಿ ವಿರುದ್ಧ ಕಾಂಗ್ರೆಸ್ ಏಜೆಂಟ್ ಆಕ್ಷೇಪಣೆ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಕೂಡಲೇ ಮತಗಟ್ಟೆಯ ಓರ್ವ ಬಿಎಲ್‌ಓ ಅನ್ನು ಮೇಲಧಿಕಾರಿಗಳು ಬದಲಾವಣೆ ಮಾಡಿದ್ದಾರೆ.ಮೈಸೂರು ಜಿಲ್ಲೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಏಳಿಗೆಹುಂಡಿ ಗ್ರಾಮಸ್ಥರು ಮತದಾನ ಬಹಿಷ್ಕಾರ ಮಾಡಿದ್ದಾರೆ. ಚುನಾವಣಾ ಆಯೋಗ ಬೆಂಗಳೂರಿನ ಮತಗಟ್ಟೆಯ ಸುತ್ತ ಸಿಸಿ ಕ್ಯಾಮರಾ ಅಳವಡಿಕೆ ಮಾಡಿದ್ದು, ಜಿಲ್ಲಾ ಚುನಾವಣಾ ಆಯೋಗ ಪ್ರತಿ ಮತಗಟ್ಟೆಗೆ 5 ಜನ ಅಧಿಕಾರಿಗಳ ನಿಯೋಜನೆ ಹಾಗೂ ಸೂಕ್ಷ್ಮ, ಅತಿ ಸೂಕ್ಷ್ಮ ಮತಗಟ್ಟೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಕೆ ಮಾಡಲಾಗಿದೆ. 60 ವರ್ಷ ಮೇಲ್ಪಟ್ಟ ವೃದ್ಧರಿಗೆ, ವಿಕಲಚೇತನರಿಗೆ ಸುಲಭವಾಗಿ ಮತದಾನ ಮಾಡಲು ವ್ಯವಸ್ಥೆ ಮಾಡಿತ್ತು. ಇದರ ಮಧ್ಯೆ ಶಾಂತಿಯುತವಾಗಿ ಮತದಾನ ನಡೆದು, ರಾಜ್ಯದ ಜನತೆ ಹೊಸ ಸರ್ಕಾರದ ಭವಿಷ್ಯ ನಿರ್ಧಾರ ಮಾಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಶೇ.75.07 ಮತದಾನ

ಮತದಾನದ ವಿವರ

ಕ್ಷೇತ್ರ	ಶೇಕಡವಾರು
ಚಾಮರಾಜ	– 61.12
ಚಾಮುಂಡೇಶ್ವರಿ	– 74.27
ಹೆಚ್‌ಡಿ ಕೋಟೆ	– 79.85
ಹುಣಸೂರು	– 82.16
ಕೃಷ್ಣರಾಜ	– 59.34
ಕೆ.ಆರ್. ನಗರ	– 85.10
ನಂಜನಗೂಡು	– 80.67
ನರಸಿಂಹರಾಜ	– 63.44
ಪಿರಿಯಾಪಟ್ಟಣ	– 84.42
ಟಿ.ನರಸೀಪುರ	– 78.77
ವರುಣ	– 84.39
ಒಟ್ಟು	**– 75.07**

ಮತಯಂತ್ರಗಳಲ್ಲಿ ಅಣಕು ಮತದಾನ ಮಾಡಿ, ಸುರಕ್ಷತೆ ಬಗ್ಗೆ ಖಾತರಿಪಡಿಸಿಕೊಂಡರು. ತಾವು ಚಲಾಯಿಸಿದ ಮತ ಆ ಅಭ್ಯರ್ಥಿಗೇ ಹೋಗಿದೆಯೇ ಎಂಬುದನ್ನು ವಿವಿ ಪ್ಯಾಟ್‌ನಲ್ಲಿ ಖಚಿತಪಡಿಸಿಕೊಂಡ ಬಳಿಕವೇ ಬೆಳಗ್ಗೆ 7 ಗಂಟೆಯಿಂದ ಮತದಾನಕ್ಕೆ ಅವಕಾಶ ನೀಡಲಾಯಿತು. ಆರಂಭದಲ್ಲಿ ನೀರಸ ಮತದಾನವಾಯಿತಾದರೂ, ಬೆಳಗ್ಗೆ 9 ಗಂಟೆವರೆಗೆ ಮೊದಲ ಎರಡು ತಾಸುಗಳಲ್ಲಿ ಜಿಲ್ಲೆಯಾದ್ಯಂತ ಶೇ.8.19ರಷ್ಟು ಮತದಾನವಾಗಿತ್ತು. ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಶೇ.8.13, ಕೆ.ಆರ್.ನಗರದಲ್ಲಿ ಶೇ.8.4, ಹುಣಸೂರಲ್ಲಿ ಕೇವಲ ಶೇ.5.5, ಹೆಚ್.ಡಿ.ಕೋಟೆಯಲ್ಲಿ ಶೇ.6.53, ನಂಜನಗೂಡಲ್ಲಿ ಶೇ.8, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಶೇ.9, ಕೆಆರ್‌ನಲ್ಲಿ ಶೇ.6.32, ಚಾಮರಾಜದಲ್ಲಿ ಶೇ.8.82, ನರಸಿಂಹರಾಜದಲ್ಲಿ ಶೇ.6, ವರುಣದಲ್ಲಿ ಶೇ.8.5 ಹಾಗೂ ಟಿ.ನರಸೀಪುರ ಕ್ಷೇತ್ರದಲ್ಲಿ ಶೇ.8.19ರಷ್ಟು ಮತದಾನ ದಾಖಲಾಗಿತ್ತು. ತದನಂತರ ಮತದಾನ ಚುರುಕುಗೊಂಡಿತು. 18 ವರ್ಷ ಮೇಲ್ಪಟ್ಟ ಯುವ ಮತದಾರರು, ವೃದ್ಧರು, ವಿಕಲ ಚೇತನರು ಉತ್ಸಾಹದಿಂದ ಬಂದು ತಮ್ಮ ಹಕ್ಕು ಚಲಾಯಿಸಲಾರಂಭವಾದಾಗ ಬೆಳಗ್ಗೆ 11 ಗಂಟೆವರೆಗೆ 4 ಗಂಟೆ ಅವಧಿಯಲ್ಲಿ ಮೈಸೂರು ಜಿಲ್ಲೆಯಾದ್ಯಂತ ಎಲ್ಲಾ ಕ್ಷೇತ್ರಗಳಲ್ಲೂ ಶೇ.19.07ರಷ್ಟು ಮತ ಚಲಾವಣೆಯಾಗಿತ್ತು. ಇಂದು ಬೆಳಗ್ಗೆಯಿಂದಲೂ ಮೋಡ ಮುಸುಕಿದ ವಾತಾವರಣವಿದ್ದ ಕಾರಣ, ಬಿಸಿಲಿನ ತೀವ್ರತೆ ಇಲ್ಲದಿದ್ದರೂ, ತಾಪಮಾನ ಮಾತ್ರ ಕಡಿಮೆಯಾಗಿರಲಿಲ್ಲ. ಆದರೂ ಮಧ್ಯಾಹ್ನ 1 ಗಂಟೆ ವೇಳೆಗೆ ಶೇ.36.73ರಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಿದ್ದರು. ಮಧ್ಯಾಹ್ನ 3 ಗಂಟೆವರೆಗೆ ಶೇ.52.45, ಸಂಜೆ 5 ಗಂಟೆವರೆಗೆ ಶೇ.66.70, ಅಂತಿಮವಾಗಿ ಶೇ.75.07ರಷ್ಟು ಮತದಾನವಾಯಿತು.

ಕ್ಷೇತ್ರವಾರು ಮತದಾನ: ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಶೇ.84.42, ಕೆ.ಆರ್.ನಗರದಲ್ಲಿ ಶೇ.85.10, ಹುಣಸೂರಿನಲ್ಲಿ ಶೇ.82.16, ಹೆಚ್.ಡಿ.ಕೋಟೆಯಲ್ಲಿ ಶೇ.79.85, ನಂಜನಗೂಡಲ್ಲಿ ಶೇ.80.67, ಚಾಮುಂಡೇಶ್ವರಿಯಲ್ಲಿ ಶೇ.74.27, ಕೃಷ್ಣರಾಜದಲ್ಲಿ ಶೇ.59.34, ಚಾಮರಾಜದಲ್ಲಿ ಶೇ.61.12, ನರಸಿಂಹರಾಜದಲ್ಲಿ ಶೇ.63.44, ವರುಣದಲ್ಲಿ ಶೇ.84.39 ಹಾಗೂ ತಿ.ನರಸೀಪುರ ಕ್ಷೇತ್ರದಲ್ಲಿ ಶೇ.78.77 ರಷ್ಟು ಸೇರಿ ಜಿಲ್ಲೆಯಲ್ಲಿ ಒಟ್ಟು ಶೇ.75.75ರಷ್ಟು ಮತದಾನವಾಗಿರುವುದಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಕಡೇ ಘಳಿಗೆಯಲ್ಲಿ ಬಿರುಸಿನಿಂದ ಮತದಾನವಾಗಿದ್ದು, ಸಂಜೆ 5 ರಿಂದ 6 ಗಂಟೆವರೆಗೆ ಮತಗಟ್ಟೆ ಆವರಣ ಪ್ರವೇಶಿಸಿದ ಎಲ್ಲರಿಗೂ ಮತದಾನ ಮಾಡಲು ಅವಕಾಶ ಕಲ್ಪಿಸಲಾಯಿತು. 6 ಗಂಟೆಗೆ ಮತಗಟ್ಟೆ ಕಾಂಪೌಂಡ್ ಗೇಟ್ ಅನ್ನು ಬಂದ್ ಮಾಡಿ, ನಂತರ ಬಂದವರನ್ನು ವಾಪಸ್ ಕಳುಹಿಸಲಾಯಿತು. ಈ ಸಂದರ್ಭ ಕೆಲ ಮತಗಟ್ಟೆಗಳಲ್ಲಿ ಮತದಾರರು, ಮತಗಟ್ಟೆ ಅಧಿಕಾರಿಗಳೊಂದಿಗೆ ವಾದ ಮಾಡಲೆತ್ನಿಸಿದರಾದರೂ, ಪೊಲೀಸರು ಮತ್ತು ಪಿಆರ್‌ಓಗಳು ಭಾರತ ಚುನಾವಣಾ ಆಯೋಗದ ಸ್ಪಷ್ಟ ಲಿಖಿತ ಆದೇಶ ತರಿಸಿ, ತಡವಾಗಿ ಬಂದವರಿಗೆ ಹಕ್ಕು ಚಲಾಯಿಸಲು ಅವಕಾಶವಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟು ಕಳುಹಿಸಿದರು.

ಅಲ್ಪಮಟ್ಟಿನ ಸುಧಾರಣೆ: ಕಳೆದ 2018ರ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ 12,40,035 ಮಹಿಳೆಯರು ಸೇರಿ ಒಟ್ಟು 24,89,355 ಮಂದಿ ಮತದಾರರ ಪೈಕಿ 18,45,996 ಮಂದಿ ತಮ್ಮ ಹಕ್ಕು ಚಲಾಯಿಸಿದ್ದು, ಜಿಲ್ಲೆಯ ಎಲ್ಲಾ 11 ಕ್ಷೇತ್ರಗಳಲ್ಲಿ ಶೇ.74.16ರಷ್ಟು ಮತದಾನವಾಗಿತ್ತು. ಈ ಬಾರಿ ಜಿಲ್ಲಾ ಸ್ವೀಪ್ ಕಮಿಟಿಯು ಹೆಚ್ಚು ಆಸಕ್ತಿ ವಹಿಸಿ ಮತ ಜಾಗೃತಿ ಮೂಡಿಸಿದ್ದಲ್ಲದೆ, 80 ವರ್ಷದ ಮೇಲ್ಪಟ್ಟ ಹಿರಿಯ ನಾಗರಿಕರು, ವಿಶೇಷಚೇತನರು ಮನೆಯಿಂದಲೇ ಅಂಚೆ ಮತದಾನಕ್ಕೆ ಅವಕಾಶ ನೀಡಿದ ಫಲವಾಗಿ ಮತದಾನ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ.

ಅಚ್ಚುಕಟ್ಟಿನ ಮತದಾನ: ಇಂದು ಮತದಾನದ ವೇಳೆ ಮತಗಟ್ಟೆಗಳಲ್ಲಿ ಮುಕ್ತ ಹಾಗೂ ನಿರ್ಭೀತಿಯಿಂದ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿತ್ತು. ನಿಯಮಾನುಸಾರ ಮತಗಟ್ಟೆಯಿಂದ 200 ಮೀಟರ್ ದೂರದಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಟೇಬಲ್ ಹಾಕಿಕೊಂಡು ಮತದಾರರಿಗೆ ಮಾಹಿತಿ ನೀಡಿ, ಸಹಾಯ ಮಾಡಲು ಅವಕಾಶ ನೀಡಲಾಗಿತ್ತೇ ಹೊರತು, ಮತ ಪ್ರಚಾರ ಮಾಡಲು ನಿರ್ಬಂಧ ಹೇರಲಾಗಿತ್ತು.

ಅಭ್ಯರ್ಥಿಗಳು ತಮ್ಮ ಕ್ಷೇತ್ರದಾದ್ಯಂತ ಎಲ್ಲಾ ಮತಗಟ್ಟೆಗಳಿಗೆ ಭೇಟಿ ನೀಡಿ, ಮತದಾನ ಪ್ರಕ್ರಿಯೆ ವೀಕ್ಷಿಸುತ್ತಿದ್ದರಾದರೂ ಚುನಾವಣಾ ಪ್ರಚಾರ ನಡೆಸಲಿಲ್ಲ. ಅಭ್ಯರ್ಥಿಗಳು, ಪ್ರಮುಖ ರಾಜಕೀಯ ಮುಖಂಡರು, ಸಂಸದ, ಶಾಸಕರು, ಮಾಜಿ ಸಚಿವರು, ಗಣ್ಯರು ಉತ್ಸಾಹದಿಂದ ತಮ್ಮ ಕುಟುಂಬದ ಸದಸ್ಯರೊಂದಿಗೆ ತೆರಳಿ ಮತ ಚಲಾಯಿಸಿದರು.

ವೃದ್ಧರು, ವಿಶೇಷ ಚೇತನರು, ಅನಾರೋಗ್ಯ ಪೀಡಿತರು ಬಂದಾಗ ನಿಯೋಜಿತ ಸ್ವಯಂ ಸೇವಕರು ಹಾಗೂ ಅಧಿಕಾರಿಗಳು ವ್ಹೀಲ್‌ಚೇರ್ ಸಹಾಯದಿಂದ ಅವರನ್ನು ಕರೆದೊಯ್ದು ಆದ್ಯತೆ ಮೇಲೆ ಮತ ಹಾಕಿಸಿ ಕಳುಹಿಸಲು ನೆರವು ನೀಡಿದರು. ಪ್ರತೀ ಮತಗಟ್ಟೆ ಬಳಿ ಮತಗಟ್ಟೆ ಸಂಖ್ಯೆ, ಅಭ್ಯರ್ಥಿಗಳ ಹೆಸರು, ಕ್ರಮಸಂಖ್ಯೆ, ಚಿಹ್ನೆಯ ಮಾಹಿತಿಯನ್ನು ಪ್ರಕಟಿಸಲಾಗಿತ್ತು. ಪ್ರತೀ ಮತಗಟ್ಟೆಗಳಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಸೂಕ್ಷ್ಮ ಮತಗಟ್ಟೆಗಳಲ್ಲಿ ಶಸ್ತ್ರಸಜ್ಜಿತ ಅರೆಮಿಲಿಟರಿ ಪಡೆ ಸಿಬ್ಬಂದಿಯನ್ನು ನಿಯೋಜಿಸಿ ವೆಬ್‌ಕಾಸ್ಟಿಂಗ್ ಮೂಲಕ ಸಂಪೂರ್ಣ ಮತದಾನ ಪ್ರಕ್ರಿಯೆ ಮೇಲೆ ತೀವ್ರ ನಿಗಾ ಇರಿಸಲಾಗಿತ್ತು. ಪರಿಣಾಮ ಇಂದು ಯಾವುದೇ ಅಹಿತಕರ ಘಟನೆಗಳೂ ನಡೆಯದಂತೆ ಮೈಸೂರು ಜಿಲ್ಲೆಯಲ್ಲಿ ಶಾಂತಿಯುತವಾಗಿ ಮತದಾನ ಮುಕ್ತಾಯವಾಯಿತು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ವಿ.ಸೋಮಣ್ಣ ಸ್ಪರ್ಧಿಸಿರುವ ವರುಣ ಹೈವೋಲ್ಟೇಜ್ ಕ್ಷೇತ್ರದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ನೇತೃತ್ವದಲ್ಲಿ ಇನ್ನಿಲ್ಲದ ಭಾರೀ ಬಂದೋಬಸ್ತ್ ಮಾಡಿ, ತೀವ್ರ ಕಟ್ಟೆಚ್ಚರ ವಹಿಸಲಾಗಿತ್ತು. ಎಲ್ಲಾ 54 ಸೂಕ್ಷ್ಮ ಮತಗಟ್ಟೆಗಳಿಗೆ ಅರೆಮಿಲಿಟರಿ ಪಡೆ ಸಿಬ್ಬಂದಿಯನ್ನು ನಿಯೋಜಿಸಿ, ಹಿರಿಯ ಪೊಲೀಸ್ ಅಧಿಕಾರಿಗಳು ಕ್ಷೇತ್ರದಾದ್ಯಂತ ಗಸ್ತು ಕರ್ತವ್ಯದ ಮೇಲ್ವಿಚಾರಣೆ ನಡೆಸಿದರು.

ಅಭ್ಯರ್ಥಿಗಳ ಭವಿಷ್ಯ ಇವಿಎಂಗಳಲ್ಲಿ ಭದ್ರ

ಮತಯಂತ್ರಗಳನ್ನು ಭಾರೀ ಭದ್ರತೆಯಲ್ಲಿ ಆಯಾ ಕ್ಷೇತ್ರವಾರು ಕೇಂದ್ರಗಳಿಗೆ ತರಲಾಯಿತು. ಅಲ್ಲದೆ ಮಸ್ಟರಿಂಗ್ ನಂತರ ಅವುಗಳನ್ನು ಸ್ಟ್ರಾಂಗ್ ರೂಂಗಳಿಗೆ ಸುರಕ್ಷಿತವಾಗಿ ತಂದರು. ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಸ್ಟ್ರಾಂಗ್ ರೂಂನಲ್ಲಿರಿಸಿ, ಮೂರು ಸುತ್ತಿನ ಭದ್ರತೆ ಒದಗಿಸಲಾಗಿದೆ.

ದಿನದ 24 ಗಂಟೆಯೂ 3 ಪಾಳಿಯಲ್ಲಿ ಶಸ್ತ್ರಸಜ್ಜಿತ ಅರೆ ಮಿಲಿಟರಿ ಪಡೆ, ಸಿಟಿ ಸಿವಿಲ್ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಿ ಹಿರಿಯ ಪೊಲೀಸ್ ಅಧಿಕಾರಿಗಳು ಸಹ ಸ್ಥಳದಲ್ಲಿ ಮೊಕ್ಕಾಂ ಹೂಡುವರು. ಮೇ 13ರಂದು ಬೆಳಗ್ಗೆ 8 ಗಂಟೆಗೆ ಜಿಲ್ಲಾ ಚುನಾವಣಾಧಿಕಾರಿಗಳು ಸೆಕ್ಟರ್ ಮ್ಯಾಜಿಸ್ಟ್ರೇಟ್‌ಗಳು ಹಾಗೂ ಅಭ್ಯರ್ಥಿಗಳ ಸಮಕ್ಷಮ ಸ್ಟ್ರಾಂಗ್ ರೂಂ ತೆರೆದು ಮತ ಎಣಿಕೆ ಕಾರ್ಯಕ್ಕೆ ಚಾಲನೆ ನೀಡುವರು. ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯವು ಮೈಸೂರಿನ ಮಹಾರಾಣಿ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜು ಕೇಂದ್ರದಲೇ ನಡೆಯಲಿದ್ದು, ಅಂದು (ಮೇ 13) ಮಧ್ಯಾಹ್ನದ ವೇಳೆಗೆ ಪೂರ್ಣ ಪ್ರಮಾಣದ ಫಲಿತಾಂಶ ಹೊರ ಬೀಳುವ ಸಾಧ್ಯತೆ ಇದೆ.

ಇಂಡಿಯಾ ಟುಡೆ ಸಮೀಕ್ಷೆಯಲ್ಲಿ ಕಾಂಗ್ರೆಸ್‌ಗೆ 150 ಸ್ಥಾನ

ಬಹುಮತದ ಅತೀವ ವಿಶ್ವಾಸದಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ

ಮೈಸೂರು,ಮೇ 10(ಪಿಎಂ)– ಕಾಂಗ್ರೆಸ್ ಈ ಬಾರಿ 150 ಸ್ಥಾನ ಪಡೆಯಲಿದೆ ಎಂದು ಇಂಡಿಯಾ ಟುಡೆ ಸಮೀಕ್ಷೆ ಹೇಳಿದ್ದು, ಅಂತೆಯೇ ನಾನು ಮೊದಲಿನಿಂದಲೂ ಕಾಂಗ್ರೆಸ್ 130ರಿಂದ 150 ಸ್ಥಾನಗಳವರೆಗೆ ಗೆಲ್ಲುತ್ತದೆ ಎಂದು ಹೇಳಿಕೊಂಡೇ ಬಂದಿದ್ದೇನೆ. ಹಾಗಾಗಿ ಕಾಂಗ್ರೆಸ್ ಬಹುಮತ ಪಡೆಯುವ ವಿಶ್ವಾಸವಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಟಿಕೆ ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ಎಕ್ಸಿಟ್ ಪೋಲ್ ಬಳಿಕ ಬುಧವಾರ ರಾತ್ರಿ ಮಾಧ್ಯಮದವರಿಗೆ ಅವರು ಪ್ರತಿಕ್ರಿಯೆ ನೀಡಿದರು. ಬಹುಶಃ ನಾನು ಜನತೆ ನಾಡಿಮಿಡಿತ ಅರ್ಥ ಮಾಡಿಕೊಂಡಿದ್ದು. ಈ ಹಿನ್ನೆಲೆಯಲ್ಲಿ ನಾನು ಮಾಡಿದ ಲೆಕ್ಕಾಚಾರ ಸರಿ ಇದೆ ಎಂಬ ಭಾವನೆ ಬರುತ್ತಿದೆ. ಕರಾವಳಿಯಲ್ಲಿ 13 ಸ್ಥಾನಗಳ ಪೈಕಿ ಕಳೆದ ಬಾರಿ ನಾವು ಗೆದ್ದಿದ್ದು ಒಂದೇ. ಈ ಬಾರಿ ಹೆಚ್ಚು ಸ್ಥಾನ ಗೆಲ್ಲುತ್ತೇವೆ ಎಂದರು.

ಪ್ರಧಾನಿ ಮೋದಿಯವರ ಚುನಾವಣಾ ಪ್ರಚಾರ ರ್‍ಯಾಲಿ, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭಜರಂಗ ದಳ ನಿಷೇಧ ವಿಚಾರಗಳು ಕಾಂಗ್ರೆಸ್ ಮೇಲೆ ವ್ಯತಿರಿಕ್ತ ಪರಿಣಾಮ ಉಂಟು ಮಾಡಲಿಲ್ಲವೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಅದು ಸಮಸ್ಯೆ ಆಗುವಂತಹ ವಿಷಯವೇ ಅಲ್ಲ ಎಂದು ಹೇಳಿದರು.

ದ್ವೇಷದ ರಾಜಕಾರಣ ಮಾಡುವ, ಸಮಾಜದಲ್ಲಿ ಶಾಂತಿ ಕದಡುವ, ಹಿಂಸಾಚಾರದಲ್ಲಿ ತೊಡಗುವ ಸಂಘಟನೆಗಳನ್ನು ನಿಷೇಧ ಮಾಡುವುದಾಗಿ ಹೇಳಿದ್ದೆವು. ಅದು ಪಿಎಫ್‌ಐ ಆಗಿರಬಹುದು, ಇಲ್ಲವೇ ಭಜರಂಗ ದಳ ಆಗಿರಬಹುದು. ಅಂತಹ ಸಂಘಟನೆಗಳನ್ನು ನಿಷೇಧಿಸುವ ಕ್ರಮ ವಹಿಸುತ್ತೇವೆ ಎಂದು ಹೇಳಿದ್ದೆವು. ಆದರೆ ಬಿಜೆಪಿಯವರು ಇದನ್ನು ಅಪ ಪ್ರಚಾರ ಮಾಡಲು ಶುರು ಮಾಡಿದ್ದರು ಎಂದು ಕಿಡಿಕಾರಿದರು.



ಲಿಂಗಾಯತ ಮುಖ್ಯಮಂತ್ರಿಗಳೆಲ್ಲಾ ಭ್ರಷ್ಟರು ಎಂದು ನಾನು ಹೇಳಿಯೇ ಇಲ್ಲ. ಲಿಂಗಾಯತ ಸಮುದಾಯದ ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ್, ಜೆ.ಹೆಚ್. ಪಟೇಲ್ ಅವರೆಲ್ಲಾ ಮುಖ್ಯಮಂತ್ರಿಗಳಾಗಿ ಪ್ರಾಮಾಣಿಕವಾಗಿದ್ದವರು. ಆದರೆ ಬಸವರಾಜ ಬೊಮ್ಮಾಯಿ ಅತ್ಯಂತ ಭ್ರಷ್ಟ ಮುಖ್ಯಮಂತ್ರಿ ಎಂದಷ್ಟೇ ಹೇಳಿದ್ದೆ. ಅದರಲ್ಲಿ ಏನು ತಪ್ಪಿದೆ. ಆದರೆ ಇದನ್ನೇ ಸಿದ್ದರಾಮಯ್ಯ, ಲಿಂಗಾಯತ ಸಮುದಾಯದ ಮುಖ್ಯಮಂತ್ರಿಗಳೆಲ್ಲರನ್ನೂ ಭ್ರಷ್ಟರು ಎಂದು ಹೇಳಿದರೆಂದು ಅಪಪ್ರಚಾರ ಮಾಡಿದರು ಎಂದು ಅಸಮಾಧಾನ ವ್ಯಕ್ತಪಡಿಸಿದರು. ನನ್ನ ಪ್ರಕಾರ ವರುಣದಲ್ಲಿ ಸುಲಭವಾಗಿ ಗೆಲ್ಲುತ್ತೇನೆ. ಇಡೀ ಜಿಲ್ಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನಗಳನ್ನು ಪಡೆಯಲಿದೆ ಎಂದರು. ವರುಣದಲ್ಲಿ ಈ ಬಾರಿ ಕಠಿಣ ಎನ್ನಿಸಲಿಲ್ಲವೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ವರುಣಗೆ ಸೋಮಣ್ಣನ ಕೊಡುಗೆ ಏನು. ಹಾಗಾಗಿ ಜನ ಏಕೆ ಓಟು ಹಾಕುತ್ತಾರೆ. ಜಾತಿ ಎಂಬ ಕಾರ್ಡ್ ಪ್ಲೇ ಮಾಡಿದರು. ಜೊತೆಗೆ ಹಣ ಚೆಲ್ಲಿದರು. ಜನ ಅದಕ್ಕೆಲ್ಲಾ ಮಣೆ ಹಾಕುವುದಿಲ್ಲ. ಕಳೆದ ಬಾರಿ ನನ್ನ ಪುತ್ರ ಡಾ.ಯತೀಂದ್ರ 59 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದ. ಇಬ್ಬರು ಲಿಂಗಾಯತರು ಪ್ರತಿಸ್ಪರ್ಧಿಗಳಾಗಿದ್ದರು. ಹಾಗಾಗಿ ಲಿಂಗಾಯತರು ಓಟು ವಿಭಜನೆ ಆಗಿತ್ತು ಎಂದು ತಿಳಿಸಿದರು.

ಈಗ ಒಬ್ಬರು ಸ್ಪರ್ಧೆಯಲ್ಲಿದ್ದಾರೆ. 2008ರಲ್ಲಿ ರೇವಣ್ಣ ಸಿದ್ದಯ್ಯ ವಿರುದ್ಧ ಮೊದಲ ಬಾರಿ 28 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದೆ. ಕಾ.ಪು. ಸಿದ್ದಲಿಂಗಸ್ವಾಮಿ ಎದುರು 31 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದೆ. ಸೋಮಣ್ಣ ವಿರುದ್ಧ ಈ ಹಿಂದಿನ ಎರಡು ಚುನಾವಣೆಗಳಿಂತಲೂ ಹೆಚ್ಚು ಮತಗಳ ಅಂತರದಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದು ನುಡಿದರು. ವರುಣದಲ್ಲಿ ಜೆಡಿಎಸ್–ಬಿಜೆಪಿ ಒಳಒಪ್ಪಂದ ಮಾಡಿಕೊಂಡಿವೆ ಎನ್ನಲಾಗಿರುವ ಸಂಬಂಧ ಪ್ರತಿಕ್ರಿಯಿಸಿ, ಜೆಡಿಎಸ್‌ನವರೆಲ್ಲಾ ಬಿಜೆಪಿಗೇ ಓಟು ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.



ಬುಧವಾರ ನಡೆದ ವಿಧಾನಸಭಾ ಚುನಾವಣೆಗೆ ಮತಗಟ್ಟೆವೊಂದರಲ್ಲಿ ಸಾಲು ಮರದ ತಿಮ್ಮಕ್ಕ ಅವರು ಮತದಾನ ಮಾಡಿದರು.



ಮೈಸೂರಿನ ಖ್ಯಾತ ಉದ್ಯಮಿ ಶ್ರೀಕಾಂತ್ ದಾಸ್ ಅವರು ತಮ್ಮ ಪತ್ನಿ ಪ್ರತಿಭಾ ದಾಸ್ ಅವರೊಂದಿಗೆ ಮೈಸೂರಿನ ಕೆ.ಆರ್. ಕ್ಷೇತ್ರದ ವ್ಯಾಪ್ತಿಯ ಮತಗಟ್ಟೆವೊಂದರಲ್ಲಿ ಬುಧವಾರ ಮತ ಚಲಾಯಿಸಿದರು.

ಮತಕ್ಕಾಗಿ ನೀಡಿದ್ದ ಸೀರೆ, ಕೋಳಿ ಬಿಸಾಡಿದ ಮತದಾರರು!

ಕೆ.ಆರ್.ಪೇಟೆ, ಮೇ 10–ಮತಕ್ಕಾಗಿ ಹಂಚಿದ್ದ ಸೀರೆ ಮತ್ತು ಕೋಳಿಗಳನ್ನು ಗ್ರಾಮಸ್ಥರು ಸಚಿವ ಕೆ.ಸಿ.ನಾರಾಯಣಗೌಡ ಬೆಂಬಲಿಗನಾದ ಗ್ರಾಮ ಪಂಚಾಯ್ತಿ ಸದಸ್ಯನ ಮನೆ ಮುಂದೆ ಬಿಸಾಕಿ ಆಕ್ರೋಶ ವ್ಯಕ್ತಪಡಿಸಿದ ಘಟನೆ ತಾಲೂಕಿನ ಗಂಜಿಗೆರೆ ಗ್ರಾಮದಿಂದ ವರದಿಯಾಗಿದೆ.

ಬಿಜೆಪಿ ಅಭ್ಯರ್ಥಿ, ಸಚಿವ ನಾರಾಯಣಗೌಡರಿಗೆ ಮತ ಚಲಾಯಿಸುವಂತೆ ಗ್ರಾಪಂ ಸದಸ್ಯ ರವಿ, ಗ್ರಾಮದ ದಲಿತರ ಬೀದಿಯಲ್ಲಿ ಸೀರೆ ಹಾಗೂ ಕೋಳಿಗಳನ್ನು ಕಳೆದ ರಾತ್ರಿ ಹಂಚಿದ್ದ ಎನ್ನಲಾಗಿದೆ. ಇಂದು ಬೆಳಗ್ಗೆ ಮತದಾನ ಆರಂಭವಾಗುತ್ತಿದ್ದಂತೆಯೇ ಸೀರೆ ಮತ್ತು ಕೋಳಿಗಳನ್ನು ಹಿಡಿದು ಬಿಜೆಪಿ ಹಾಗೂ ನಾರಾಯಣ ಗೌಡರಿಗೆ ಧಿಕ್ಕಾರ ಕೂಗುತ್ತಾ, ತಂಡೋಪತಂಡವಾಗಿ ಗ್ರಾಪಂ ಸದಸ್ಯ ರವಿ ಮನೆ ಬಳಿಗೆ ತೆರಳಿದ ನೂರಾರು ಗ್ರಾಮಸ್ಥರು, ಆತ ಕಳೆದ ರಾತ್ರಿ ನೀಡಿದ್ದ ಸೀರೆ ಹಾಗೂ ಕೋಳಿಗಳನ್ನು ಆತನ ಮನೆ ಮುಂದೆ ಬಿಸಾಕಿ ಆಕ್ರೋಶ ವ್ಯಕ್ತಪಡಿಸಿದರು. ಮೂಲಗಳ ಪ್ರಕಾರ ಗ್ರಾಪಂ ಸದಸ್ಯ ರವಿ ಗ್ರಾಮದ ಮತ್ತೊಂದು ಕಡೆ





ದೊಡ್ಡ ಮೊತ್ತದ ಹಣ ಹಂಚಿಕೆ ಮಾಡಿ ದಲಿತರ ಬೀದಿಯಲ್ಲಿ ಸೀರೆ ಹಾಗೂ ಕೋಳಿಗಳನ್ನು ಹಂಚಿದ ವಿಷಯ ತಿಳಿದು, ಗ್ರಾಮಸ್ಥರು ಆಕ್ರೋಶಗೊಂಡು ಈ ರೀತಿ ವರ್ತಿಸಿದರು ಎಂದು ಹೇಳಲಾಗಿದೆ.

ಸಚಿವರಿಗೆ ತರಾಟೆ, ತಳ್ಳಾಟ–ನೂಕಾಟ: ಮತ್ತೊಂದೆಡೆ ಬಣ್ಣೇನಹಳ್ಳಿ ಗ್ರಾಮಕ್ಕೆ ಮತಗಟ್ಟೆ ಪರಿಶೀಲನೆಗಾಗಿ ತೆರಳಿದ ನಾರಾಯಣಗೌಡರನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ. ಏಕವಚನದಲ್ಲೇ ಸಚಿವರನ್ನು ನಿಂದಿಸಲಾಗಿದೆ. ಇದಕ್ಕೆ ಪ್ರತಿಯಾಗಿ ಸಚಿವರೂ ಏಕವಚನ ಪ್ರಯೋಗ ಮಾಡಿದ್ದು, ಸಚಿವರೊಂದಿಗಿದ್ದ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರೊಂದಿಗೆ ಘರ್ಷಣೆಗಿಳಿದು, ತಳ್ಳಾಟ–ನೂಕಾಟ ನಡೆದಿದೆ. ಈ ವೇಳೆ ಮಧ್ಯೆ ಪ್ರವೇಶಿಸಿದ ಪೊಲೀಸರು, ಪರಿಸ್ಥಿತಿಯನ್ನು ತಿಳಿಗೊಳಿಸಿ ಸಚಿವರನ್ನು ಭದ್ರತೆಯೊಂದಿಗೆ ಕಳುಹಿಸಿಕೊಟ್ಟಿದ್ದಾರೆ.

ವರುಣ: ಮತಗಟ್ಟೆ ಪರಿಶೀಲನೆಗೆ ಬಂದ ವಿ.ಸೋಮಣ್ಣಗೆ ಅಡ್ಡಿ, ಉದ್ವಿಗ್ನ ಪರಿಸ್ಥಿತಿ

ಮೈಸೂರು,ಮೇ 10(ಪಿಎಂ)– ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಂಜನಗೂಡು ತಾಲೂಕಿನ ಕಾರ್ಯ ಗ್ರಾಮದಲ್ಲಿ ಮತಗಟ್ಟೆ ಪರಿಶೀಲಿಸಲು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರಿಗೆ ಕಾಂಗ್ರೆಸ್ ಕಾರ್ಯಕರ್ತರು ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಸೋಮಣ್ಣ ಅವರು ಗ್ರಾಮದ ಮತಗಟ್ಟೆಯತ್ತ ನಡೆದುಕೊಂಡು ಹೋಗುತ್ತಿದ್ದಾಗ ಆಕ್ರೋಶಗೊಂಡು ಕಾಂಗ್ರೆಸ್ ಕಾರ್ಯಕರ್ತರು ಘೋಷಣೆ ಕೂಗಿ ಸುತ್ತುವರೆಯಲು ಯತ್ನಿಸಿದರು. ಇದರಿಂದ ಕೆರಳಿದ ಬಿಜೆಪಿ ಕಾರ್ಯಕರ್ತರು ತಮ್ಮ ಅಭ್ಯರ್ಥಿ ಸೋಮಣ್ಣ ಪರ ಘೋಷಣೆ ಕೂಗಿದರು.

ಈ ವೇಳೆ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ತಮ್ಮ ತಮ್ಮ ಅಭ್ಯರ್ಥಿಗಳ ಪರ ಘೋಷಣೆ ಕೂಗಲು ಆರಂಭಿಸಿದ ಹಿನ್ನೆಲೆಯಲ್ಲಿ ಗದ್ದಲದ ವಾತಾವರಣ ನಿರ್ಮಾಣವಾಗಿತ್ತು. ಅಲ್ಲದೆ, ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು. ಪೊಲೀಸ್ ಸಿಬ್ಬಂದಿ ಮಧ್ಯಪ್ರವೇಶಿಸಿ ಪರಿಸ್ಥಿತಿ ಹತೋಟಿಗೆ ತಂದರಲ್ಲದೇ, ಸೋಮಣ್ಣ ಅವರನ್ನು ಮತಗಟ್ಟೆಯತ್ತ ಸುರಕ್ಷಿತವಾಗಿ ಕರೆದೊಯ್ದರು. ಬಳಿಕ ಸೋಮಣ್ಣ ಮತಗಟ್ಟೆ ಪರಿಶೀಲನೆ ನಡೆಸಿದರು. ಅವರೊಂದಿಗೆ ಬಿಜೆಪಿ ಮುಖಂಡರಾದ ಕಾ.ಪು.ಸಿದ್ದಲಿಂಗಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಕಾ.ಪು.ಸಿದ್ದವೀರಪ್ಪ ಮತ್ತಿತರರು ಇದ್ದರು.



ಈ ಸಂಬಂಧ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ವಿ.ಸೋಮಣ್ಣ, ವರುಣ ಕ್ಷೇತ್ರದಲ್ಲಿ ನಾನು ಪರಿಶೀಲಿಸಲು ಬಂದಿರುವ 15ನೇ ಬೂತ್ ಇದು. ಪ್ರತಿಸ್ಪರ್ಧಿಗೆ ಹತಾಶೆಯಾಗಿದೆ. ಅದರ ಪರಿಣಾಮ ಇದು. ಅಲ್ಲಿ ಕೂಗಾಡುತ್ತಿದ್ದವರು ಸ್ಥಳೀಯರಲ್ಲ, ಬದಲಿಗೆ ಅವರು ಮೈಸೂರಿನವರಾಗಿದ್ದಾರೆ. ಜೊತೆಗೆ ಒಂದೇ ಕೋಮಿಗೆ ಸೇರಿದವರಾಗಿದ್ದಾರೆ ಎಂದು ದೂರಿದರು. ಅಭ್ಯರ್ಥಿಯೊಬ್ಬರ ಬೂತ್ ಪರಿಶೀಲನೆಗೆ ಅಡ್ಡಿಪಡಿಸುವುದು ಎಷ್ಟರ ಮಟ್ಟಿಗೆ ಸರಿ ಎಂಬುದಕ್ಕೆ ಪ್ರತಿಕ್ರಿಯಿಸಿ, ವಿವೇಕ ಇಲ್ಲದವರು. ಅವರಲ್ಲಿ ಇರುವ ಬಹುತೇಕರು ಅಂತಹವರೇ. ನಾನೊಬ್ಬ ಹಿರಿಯ ರಾಜಕಾರಣಿ. ಚುನಾವಣೆ ಮುಗಿದ ಮೇಲೆ ಇದರ ಪರಿಣಾಮ ಎದುರಿಸಬೇಕಾಗುತ್ತದೆ. 100ಕ್ಕೆ 100 ಈ ಭಾಗದ ಜನ ಆಶೀರ್ವಾದ ಮಾಡುತ್ತಾರೆ ಎಂದು ಸಚಿವ ವಿ.ಸೋಮಣ್ಣ ವಿಶ್ವಾಸ ವ್ಯಕ್ತಪಡಿಸಿದರು.

ವರುಣ ಹಾಗೂ ಚಾಮರಾಜನಗರ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಿದ ಪಕ್ಷದ ಎಲ್ಲಾ ಮುಖಂಡರು ಹಾಗೂ ಎರಡೂ ಕ್ಷೇತ್ರದ ಮತ ಬಾಂಧವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಕಾರ್ಯಕರ್ತರು, ಅಭಿಮಾನಿಗಳ ಸಹಕಾರದಿಂದ ಪಕ್ಷದ ವರಿಷ್ಠರು ನೀಡಿದ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದೇನೆ. ಎರಡೂ ಕ್ಷೇತ್ರಗಳಲ್ಲಿಯೂ ಜಯಗಳಿಸುವ ವಿಶ್ವಾಸವಿದೆ. – ವಿ.ಸೋಮಣ್ಣ, ಬಿಜೆಪಿ ಅಭ್ಯರ್ಥಿ.



ಮತದಾನ ಅಂತ್ಯವಾಗುತ್ತಿದ್ದಂತೆ ವರುಣ ಮತ್ತು ಚಾಮರಾಜನಗರ ವಿಧಾನಸಭಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಹಾಗೂ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಬುಧವಾರ ಸಂಜೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ಚಾಮುಂಡೇಶ್ವರಿ ದರ್ಶನ ಪಡೆದು, ಗೆಲುವಿಗಾಗಿ ದೇವಿಯಲ್ಲಿ ಪ್ರಾರ್ಥಿಸಿದರು.

ದೋ ನಂಬರ್‌ಗೆ ಮತ ಹಾಕಿ, ಸಿಲಿಂಡರ್ ಬಟನ್ ಒತ್ತಿ.....

ಮೈಸೂರು, ಮೇ 10 (ಎಸ್‌ಪಿಎನ್)– ನರಸಿಂಹರಾಜ ಕ್ಷೇತ್ರದ ಚುನಾವಣೆಯಲ್ಲಿ ಶೇ.63.44ರಷ್ಟು ಮತದಾನವಾಗಿದೆ.

ಮತದಾರರು ಬೆಳಗ್ಗೆ 7ರಿಂದ ಸಂಜೆ 6ರವರೆಗೂ ಹುಮ್ಮಸ್ಸಿನಿಂದ ಮತ ಚಲಾಯಿಸಿದ್ದಾರೆ. ರಾಜೀವ್‌ನಗರ, ಗೌಸಿಯಾ ನಗರದ ಬೂತ್ ನಂ. 176, 177, 178, 179 ವ್ಯಾಪ್ತಿಯಲ್ಲಿ 3991 ಮತದಾರರಿದ್ದು, ಇದರಲ್ಲಿ ಶೇ.70 ಮತದಾನವಾಗಿದೆ. ಈ ಬಡಾವಣೆಯಲ್ಲಿ ಎಸ್‌ಡಿಪಿಐ ಮತ್ತು ಬಿಎಸ್‌ಪಿ ಬೆಂಬಲಿತ ಅಭ್ಯರ್ಥಿ ಅಬ್ದುಲ್ ಮಜೀದ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ನಡುವೆ ತೀವ್ರ ಜಿದ್ದಾಜಿದ್ದಿ ಕೂಡಿದೆ ಎಂದು ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಕಾರ್ಯಕರ್ತರು ತಿಳಿಸಿದರು.

'ದೋ' ನಂಬರ್, 'ಸಿಲಿಂಡರ್' ಗುರುತಿಗೆ ಮತ ಹಾಕಿ: ಈ ಬೂತ್ ವ್ಯಾಪ್ತಿಯಲ್ಲಿ ಮತದಾರರನ್ನು ಕಾಂಗ್ರೆಸ್ ಕಾರ್ಯಕರ್ತರು 'ದೋ'(2) ನಂಬರ್‌ಗೆ ಮತಹಾಕುವಂತೆ ತನ್ವೀರ್ ಸೇಠ್ ಪರ ಕಾರ್ಯಕರ್ತರು ಕೂಗಿ ಮತದಾರರ ಬಳಿ ಮತಯಾಚನೆ ಮಾಡುತ್ತಿದ್ದರು. ಪಕ್ಕದಲ್ಲಿರುತ್ತಿದ್ದ ಎಸ್‌ಡಿಪಿಐ ಕಾರ್ಯಕರ್ತರು 'ಸಿಲಿಂಡರ್' ಗುರುತಿಗೆ ಮತ ಹಾಕುವಂತೆ ಮತದಾರರನ್ನು ಸೆಳೆಯಲು ಪ್ರಯತ್ನಿಸಿದರು. ಈ ರೀತಿ ಮತದಾರರನ್ನು ಸೆಳೆಯುವ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಎಸ್‌ಡಿಪಿಐ ಕಾರ್ಯಕರ್ತರ ನಡುವೆ ಹಾಗಾಗ ಮಾತಿನ ಚಕಮಕಿ ನಡೆಯಿತು. ಪೊಲೀಸರ ಮಧ್ಯ ಪ್ರವೇಶದಿಂದ ಪರಿಸ್ಥಿತಿ ತಿಳಿಯಾಯಿತು.

ಮತದಾರರನ್ನು ಮತಗಟ್ಟೆಗೆ ಕರೆತಂದ ಕಾರ್ಯಕರ್ತರು: ಅಜಿತ್ ಸೇಠ್ ನಗರ ವ್ಯಾಪ್ತಿಯ ಬೂತ್ ನಂ.220, 221,222, 223ರಲ್ಲಿ ಆಟೋ, ಕಾರು, ಬೈಕ್‌ಗಳಲ್ಲಿ ಮತದಾರರನ್ನು ಕರೆದು ತಂದು ಉತ್ಸಾಹದಿಂದ ಮತದಾನ ಮಾಡಿಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ನಮಗೇನು ಕೊಡಲೇ ಇಲ್ಲ: ಗಾಂಧಿನಗರ ವ್ಯಾಪ್ತಿಯ ಬೂತ್ ನಂ.83, 83ರಲ್ಲಿ ಎಸ್‌ಡಿಪಿಐ, ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರು ಮತದಾರರನ್ನು ಸೆಳೆಯಲು ನಾನಾ ಕಸರತ್ತು ನಡೆಸಿದರು. ಈ ವೇಳೆ ಕೆಲ ಮತದಾರರು ನಮಗೇನು ಕೊಡಲೇ ಇಲ್ಲ, ಪ್ರಚಾರ ವೇಳೆ ನಮ್ಮ ಮನೆ ಕಡೆ ನಿಮ್ಮ ಅಭ್ಯರ್ಥಿ ಬರಲೇ ಇಲ್ಲ. ನಿಮಗೇಕೆ ಮತ ಹಾಕಬೇಕು. ನಮಗಿಷ್ಟ ಬಂದವರಿಗೆ ಮತ ಹಾಕುತ್ತೇವೆ ಎಂದು ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಕೋಪಿಸಿಕೊಂಡು ಹೋಗುತ್ತಿದ್ದುದು ಕಂಡುಬಂತು.

ಮತದಾನಕ್ಕೆ ನಿರುತ್ಸಾಹ: ಹಲವು ಭಾಗಗಳಲ್ಲಿ ಮತದಾನ ಮಾಡುವಂತೆ ನಾಲ್ಕೈದು ಬಾರಿ ಮನೆ ಬಾಗಿಲಿಗೆ ಹೋಗಿ ಹೇಳಿ ಬಂದರೂ ಮತದಾನಕ್ಕೆ ಬರಲು ಹಲವು ನಿರುತ್ಸಾಹ ತೋರಿದರು ಎಂದು ಕಾರ್ಯಕರ್ತರು ತಿಳಿಸಿದ್ದಾರೆ.

ಸೌಲಭ್ಯಗಳ ಕೊರತೆ: ಏಳಿಗೆಹುಂಡಿ ಗ್ರಾಮಸ್ಥರಿಂದ ಮತದಾನ ಬಹಿಷ್ಕಾರ

- ಮನವೊಲಿಸಲು ಹೈರಾಣಾದ ಚುನಾವಣಾ ಅಧಿಕಾರಿಗಳು
- 6 ಗಂಟೆ 30 ನಿಮಿಷ ವಿಳಂಬವಾಗಿ ಮತದಾನ ಆರಂಭ

ಮೈಸೂರು,ಮೇ 10 (ಎಂಟಿವೈ)– ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಮೂಲ ಸೌಲಭ್ಯಕ್ಕಾಗಿ ಆಗ್ರಹಿಸಿ ತಾಲೂಕಿನ ಏಳಿಗೆಹುಂಡಿ ಗ್ರಾಮಸ್ಥರು ಮತದಾನ ಬಹಿಷ್ಕರಿಸಿ ಆಕ್ರೋಶ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಏಳಿಗೆಹುಂಡಿಯಲ್ಲಿ ಎಂದಿನಂತೆ ಮತದಾನಕ್ಕಾಗಿ ಸರ್ಕಾರಿ ಶಾಲೆಯಲ್ಲಿ ಮತಗಟ್ಟೆ ತೆರೆಯಲಾಗಿತ್ತು. ಬೆಳಗ್ಗೆ 7 ಗಂಟೆಗೆ ಮತದಾನ ಪ್ರಕ್ರಿಯೆ ಆರಂಭವಾಗಿದ್ದರೂ ಗ್ರಾಮಸ್ಥರು ಮಾತ್ರ ಮತಗಟ್ಟೆ ಬಳಿ ನುಸುಳಲಿಲ್ಲ. ಒಂದೂವರೆ ಗಂಟೆಯಾದರೂ ಮತಗಟ್ಟೆ ಬಳಿ ಯಾರೊಬ್ಬರೂ ಆಗಮಿಸಲಿಲ್ಲ. ಇದರಿಂದ ಗ್ರಾಮಸ್ಥರು ಮತದಾನ ಬಹಿಷ್ಕರಿಸಲು ನಿರ್ಧರಿಸಿರುವುದು ತಿಳಿಯಿತು. ಮತಗಟ್ಟೆ ಸಿಬ್ಬಂದಿ ಗ್ರಾಮಸ್ಥರ ಬಹಿಷ್ಕಾರದ ನಿರ್ಧಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿದರು.

ಇದರಿಂದ ಸ್ಥಳಕ್ಕೆ ಬಂದ ಚುನಾವಣಾಧಿಕಾರಿಯೊಬ್ಬರು ಗ್ರಾಮಸ್ಥರೊಂದಿಗೆ ಸಮಾಲೋಚಿಸಿ ಮತದಾನ ಮಾಡುವಂತೆ ಮನವೊಲಿಸುವ ಪ್ರಯತ್ನ ಮಾಡಿದರು. ಆದರೆ, ಗ್ರಾಮಸ್ಥರು ಮಾತ್ರ ಬಿಗಿಪಟ್ಟು ಹಿಡಿದರು. ಇದರಿಂದ ಬಂದಿದ್ದ ಚುನಾವಣಾಧಿಕಾರಿ ವಾಪಸಾದರು. ಈ ವೇಳೆ ಗ್ರಾಮದಲ್ಲಿ ಪಕ್ಷಾತೀತವಾಗಿ ಸಭೆ ನಡೆಸಿದ ಗ್ರಾಮಸ್ಥರು ತಮ್ಮ ನಿರ್ಧಾರದಿಂದ ಹಿಂದೆ ಸರಿಯಲೇಬಾರದು ಎಂದು ನಿರ್ಣಯ ಕೈಗೊಂಡರು.

ವಿಷಯ ತಿಳಿದು ಮಧ್ಯಾಹ್ನ 12.30ಕ್ಕೆ ಸ್ಥಳಕ್ಕೆ ತಹಶೀಲ್ದಾರ್ ಗಿರೀಶ್, ಕಡಕೊಳ ಪುರಸಭೆಯ ಅಧಿಕಾರಿಗಳು ಮತದಾನ ಮಾಡುವಂತೆ ಮನವಿ ಮಾಡಿದರು.



ಮೂಲ ಸೌಲಭ್ಯಕ್ಕಾಗಿ ಆಗ್ರಹಿಸಿ ಚಾಮುಂಡೇಶ್ವರಿ ಕ್ಷೇತ್ರ ಏಳಿಗೆಹುಂಡಿ ಗ್ರಾಮಸ್ಥರು ಮತದಾನ ಬಹಿಷ್ಕರಿಸಿದ್ದರು.

ಈ ವೇಳೆ ಕಡಕೊಳ ಪುರಸಭಾ ಅಧಿಕಾರಿಗಳ ಧೋರಣೆ ವಿರುದ್ಧ ಕಿಡಿಕಾರಿದ ಗ್ರಾಮಸ್ಥರು, ಹಲವು ಬಾರಿ ಮನವಿ ಸಲ್ಲಿಸಿದರೂ ಏಳಿಗೆಹುಂಡಿ ಗ್ರಾಮದ ಅಭಿವೃದ್ಧಿಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಅಧಿಕಾರಿಗಳಿಗೆ ಏಳಿಗೆಹುಂಡಿ ಗ್ರಾಮ ಎಲ್ಲಿದೆ ಎಂಬುದೇ ತಿಳಿದಿಲ್ಲ. ಗ್ರಾಮದ ರಸ್ತೆಗಳೆಲ್ಲಾ ಗುಂಡಿಬಿದ್ದು ಹಾಳಾಗಿವೆ. ಹಿರಿಯ ನಾಗರೀಕರು, ಮಹಿಳೆಯರು, ಮಕ್ಕಳು ಗುಂಡಿ ಬಿದ್ದ ರಸ್ತೆಯಲ್ಲಿ ಓಡಾಡಲು ಕಷ್ಟಪಡುವಂತಾಗಿದೆ. ಮಳೆ ನೀರು ರಸ್ತೆ ಮೇಲೆ ತುಂಬಿಕೊಂಡು ಜನ ಸಂಚಾರಕ್ಕೆ ಅಡಚಣೆಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಮದ ಸಮಸ್ಯೆ ಬಗೆಹರಿಸಲು ಜನಪ್ರತಿನಿಧಿಗಳು ಮುಂದಾಗಿಲ್ಲ. ನಾವು ಯಾಕೆ ಅವರಿಗೆ ಓಟ್ ಹಾಕಬೇಕು ಎಂದು ಪ್ರಶ್ನಿಸಿದರು. ನಮ್ಮ ಓಟಿಗೆ ಬೆಲೆ ಇಲ್ವಾ? ಯಾವೊಬ್ಬ ಜನಪ್ರತಿನಿಧಿಯೂ ನಮ್ಮ ಗ್ರಾಮದ ಮೇಲೆ ಗಮನ ಹರಿಸಿಲ್ಲ ಎಂದು ಕಿಡಿಕಾರಿದರು.

ಇದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಗಿರೀಶ್, ನಿಮ್ಮೂರಿನ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುತ್ತೇವೆ. ಸಮಸ್ಯೆ ಬಗ್ಗೆ ಬರವಣಿಗೆಯಲ್ಲಿ ದೂರು ನೀಡುವಂತೆ ಸಲಹೆ ನೀಡಿದರು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮತದಾನ ಪ್ರಕ್ರಿಯೆ ಮಹತ್ವದ ಪಾತ್ರ ವಹಿಸುತ್ತದೆ. ಸಂವಿಧಾನದಲ್ಲಿ ನೀಡಿರುವ ಮತದಾನದ ಹಕ್ಕನ್ನು ಪ್ರತಿಪಾದಿಸಬೇಕು. ನಿಮ್ಮ ಸಮಸ್ಯೆ ಬಗೆಹರಿಸಲು ಜಿಲ್ಲಾಡಳಿತ ಬದ್ಧವಾಗಿದೆ ಎಂದು ಹೇಳಿ ಮನವೊಲಿಸಿದರು.

ವಿಳಂಬವಾಗಿ ಆರಂಭವಾದ ಮತದಾನ: ತಹಶೀಲ್ದಾರ್ ಗಿರೀಶ್ ನೀಡಿದ ಭರವಸೆ ಮೇರೆಗೆ ಮತದಾನ ಮಾಡಲು ಒಪ್ಪಿದ ಗ್ರಾಮಸ್ಥರು ಮಧ್ಯಾಹ್ನ 1.30ರಿಂದ ಮತದಾನ ಮಾಡಲು ಮತಗಟ್ಟೆಗೆ ಆಗಮಿಸಿದರು. 1085 ಮತವಿರುವ ಏಳಿಗೆಹುಂಡಿಯಲ್ಲಿ ಸರ್ಕಾರಿ ಶಾಲೆಯಲ್ಲಿ ತೆರೆದಿದ್ದ ಮತಗಟ್ಟೆ ಸಂಖ್ಯೆ 239ರಲ್ಲಿ ಮತದಾನ ಪ್ರಕ್ರಿಯೆ ಆರಂಭವಾಯಿತು. ಸಂಜೆ 7.45 ರವರೆಗೂ ಮತದಾನ ಮಾಡಲು ಅವಕಾಶ ನೀಡಲಾಗಿತ್ತು. ಅಂತಿಮವಾಗಿ ಮತದಾನ ಪ್ರಕ್ರಿಯೆ ಮುಗಿಯುವ ವೇಳೆ 745 ಮತ ಚಲಾವಣೆಯಾಗಿತ್ತು. ರಾತ್ರಿ 8.30ರ ವೇಳೆಗೆ ಮತಯಂತ್ರ ಪ್ಯಾಕ್ ಮಾಡಿ ಭದ್ರತೆಯಲ್ಲಿ ಸ್ಟ್ರಾಂಗ್ ರೂಮ್‌ಗೆ ಕೊಂಡೊಯ್ಯಲು ಅಗತ್ಯ ವ್ಯವಸ್ಥೆ ಕಲ್ಪಿಸಲಾಯಿತು.

ತಿ.ನರಸೀಪುರದಲ್ಲಿ ಶೇ.78.77ರಷ್ಟು ಶಾಂತಿಯುತ ಮತದಾನ

ಬಿಜೆಪಿ ಅಭ್ಯರ್ಥಿ ಡಾ.ಎಂ. ರೇವಣ್ಣ, ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹದೇವಪ್ಪ, ಜೆಡಿಎಸ್ ಅಭ್ಯರ್ಥಿ ಎಂ.ಅಶ್ವಿನ್‌ಕುಮಾರ್, ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮತ ಚಲಾವಣೆ

ತಿ.ನರಸೀಪುರ, ಮೇ 10– ಮೀಸಲು ವಿಧಾನಸಭಾ ಕ್ಷೇತ್ರವಾದ ನರಸೀಪುರದಲ್ಲಿ ಶೇ.78.77 ಶಾಂತಿಯತ ಮತದಾನವಾಗಿದೆ. ಬೆಳಗ್ಗೆಯಿಂದಲೇ ಮತಗಟ್ಟೆಗಳ ಬಳಿಗೆ ಜನ ಆಗಮಿಸಿ ಬಂದು ಸರತಿ ಸಾಲಿನಲ್ಲಿ ನಿಂತು ತಮ್ಮ ಹಕ್ಕು ಚಲಾಯಿಸಿದರು.

ಕಳೆದ ಬಾರಿಗೆ ಹೋಲಿಸಿದರೆ ಈ ಬಾರಿ ಮತದಾನಕ್ಕೆ ಮತದಾರರಿಂದ ಉತ್ತಮ ಪ್ರತಿ ಕ್ರಿಯೆ ವ್ಯಕ್ತವಾಗಿದೆ. ಕಳೆದ ಬಾರಿ ಇವಿಎಂ ನಲ್ಲಿ ಕಾಣಿಸಿಕೊಂಡಿದ್ದ ತೊಂದರೆ ಈ ಬಾರಿ ಇರಲಿಲ್ಲ. ಅಧಿಕಾರಿಗಳು ಅಚ್ಚುಕಟ್ಟಾಗಿ ಮತದಾನಕ್ಕೆ ಮತಯಂತ್ರವನ್ನು ಸಿದ್ಧ ಪಡಿಸಿದ್ದರು.

ಬಿಜೆಪಿ ಅಭ್ಯರ್ಥಿ ಡಾ.ಎಂ.ರೇವಣ್ಣ ತಾಲೂಕಿನ ನಿಲಸೋಗೆ ಮತಗಟ್ಟೆಯೊಂದರಲ್ಲಿ ಕುಟುಂಬ ಸಮೇತರಾಗಿ ಬಂದು ಮತ ಚಲಾಯಿಸಿದರೆ, ಹಾಲಿ ಶಾಸಕ ಜೆಡಿಎಸ್ ಅಭ್ಯರ್ಥಿ ಎಂ.ಅಶ್ವಿನ್ ಕುಮಾರ್ ಸ್ವಗ್ರಾಮ ತುಂಬಲದಲ್ಲಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಪುತ್ರ ಸುನಿಲ್ ಬೋಸ್ ಹದಿನಾರು ಗ್ರಾಮದಲ್ಲಿ ಮತ ಚಲಾಯಿಸಿದರು. ಚಿತ್ರನಟ





ಮಾಜಿ ಸಚಿವ ಡಾ.ಮಹದೇವಪ್ಪ, ಶಾಸಕ ಎಂ.ಅಶ್ವಿನ್‌ಕುಮಾರ್, ಬಿಜೆಪಿ ಅಭ್ಯರ್ಥಿ ಡಾ.ರೇವಣ್ಣ ಮತ ಚಲಾಯಿಸಿದರು.

ಅರ್ಜುನ್ ರಮೇಶ್ ಪಟ್ಟಣದ ಪಿಆರ್‌ಎಂ ಕಾಲೇಜಿನಲ್ಲಿ ಮತದಾನ ಮಾಡಿದರು. ಈ ನಡುವೆ ಕುಂತನಹಳ್ಳಿ ಗ್ರಾಮದಲ್ಲಿ ತಾಪಂ ಮಾಜಿ ಅಧ್ಯಕ್ಷ, ಹಾಲಿ ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಮತ ಚಲಾಯಿಸಿ ಕಾಂಗ್ರೆಸ್ ಪಕ್ಷದ ಬಗ್ಗೆ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು.

ಬೆಳಗ್ಗೆ ಮಂದಗತಿಯಿಂದ ಆರಂಭವಾದ ಮತದಾನ ಮಧ್ಯಾಹ್ನದ ನಂತರ ಬಿರುಸು ಪಡೆದುಕೊಂಡಿತು. ಕ್ಷೇತ್ರ ವ್ಯಾಪ್ತಿಯ ಕಸಬಾ, ಸೋಸಲೆ, ಬನ್ನೂರು, ತಲಕಾಡು ಹಾಗೂ ಮೂಗೂರು ಹೋಬಳಿಗಳಲ್ಲಿ ಮತದಾರರು ಉತ್ಸಾಹದಿಂದ ಮತದಾನದಲ್ಲಿ ಭಾಗಿಯಾದರು. ಯಾವುದೇ ಗೊಂದಲ, ಗದ್ದಲಕ್ಕೆ ಅವಕಾಶ ಇಲ್ಲದೇ ಶಾಂತಿಯುತವಾಗಿ ಮತದಾನ ನಡೆಯಿತು. ಬಿಜೆಪಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ತಮ್ಮ ಪಕ್ಷದ ಮತದಾರರಿಗೆ ಮತ ಚಲಾಯಿಸಲು ಸಹಕಾರ ನೀಡಿದರು. ವಯೋವೃದ್ದರು, ಮಹಿಳೆಯರು, ಯುವಕರು, ಅಂಗವಿಕಲರು ಮತದಾನದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಕಳೆದ ಬಾರಿಗಿಂತ ಈ ಬಾರಿ ಮತಗಟ್ಟೆಗಳಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮೊಬೈಲ್‌ಗಳನ್ನು ಮತಗಟ್ಟೆಯೊಳಗೆ ಕೊಂಡೊಯ್ಯಲು ಅವಕಾಶ ಇರಲಿಲ್ಲ. ಅಭ್ಯರ್ಥಿಗಳು ಮತದಾನ ಮಾಡುವ ಚಿತ್ರ ತೆಗೆಯಲು ಸಹ ಅವಕಾಶ ನಿರಾಕರಿಸಲಾಯಿತು. ಮೊದಲೆಲ್ಲಾ ಕಾರ್ಯಕರ್ತರು ಮತದಾರನ ಮನೆಗೆ ತೆರಳಿ ವಾಹನಗಳಲ್ಲಿ ಕರೆತಂದು ಮತ ಹಾಕಿಸುತ್ತಿದ್ದರು. ಆದರೆ ಈ ಬಾರಿ ಸ್ವಯಂ ಪ್ರೇರಿತರಾಗಿ ಮತದಾರರು ಮತಗಟ್ಟೆಗೆ ಬಂದು ಮತ ಚಲಾಯಿಸುತ್ತಿದ್ದ ದೃಶ್ಯ ಕಂಡುಬಂತು.

ತಿ.ನರಸೀಪುರ ಕ್ಷೇತ್ರದಿಂದ ಹಾಲಿ ಶಾಸಕ ಜೆಡಿಎಸ್ ಪಕ್ಷದ ಎಂ.ಅಶ್ವಿನ್‌ಕುಮಾರ್, ಮಾಜಿ ಸಚಿವ, ಕಾಂಗ್ರೆಸ್ ಪಕ್ಷದ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಇದೇ ಮೊದಲ ಬಾರಿಗೆ ರಾಜಕಾರಣ ಪ್ರವೇಶಿಸಿರುವ ಬಿಜೆಪಿ ಪಕ್ಷದ ಅಭ್ಯರ್ಥಿ ಡಾ.ಎಂ.ರೇವಣ್ಣ ಸ್ಪರ್ಧೆಯಲ್ಲಿರುವುದರಿಂದ ತೀವ್ರ ಕುತೂಹಲ ಮೂಡಿಸಿದೆ.

ವರುಣ ಕ್ಷೇತ್ರ ಸಹ ತಿ.ನರಸೀಪುರ ತಾಲೂಕಿನೊಂದಿಗೆ ಹಂಚಿಕೆಯಾಗಿದ್ದು ಹೈವೋಲ್ಟೇಜ್ ಕ್ಷೇತ್ರವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ತವರು ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದರೆ, ಬಿಜೆಪಿ ಹೈಕಮಾಂಡ್ ಆದೇಶದ ಮೇರೆ ಸಚಿವ ಸೋಮಣ್ಣ ಅವರಿಗೆ ಪ್ರಬಲ ಎದುರಾಳಿಯಾಗಿದ್ದು ತೀವ್ರ ಸ್ಪರ್ಧೆ ಒಡ್ಡಿದ್ದಾರೆ.




ಚೆಲುವರಾಜು ನಂಜುಂಡಸ್ವಾಮಿ

ಕಂಪಲಾಪುರದಲ್ಲಿ ಶೇ.84 ಮತದಾನ

ಕಂಪಲಾಪುರ, ಮೇ 10– ಬುಧವಾರ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಂಪಲಾಪುರದಲ್ಲಿ ಶೇ.84 ಮತದಾನವಾಗಿದೆ. ಒಟ್ಟು 3788 ಮತದಾರರಿದ್ದು 3193 ಮಂದಿ ಮತ ಚಲಾಯಿಸಿದ್ದಾರೆ. ಇಲ್ಲಿ ಒಟ್ಟು ನಾಲ್ಕು ಬೂತ್‌ಗಳಲ್ಲಿ ಮತ ಚಲಾಯಿಸಿದ್ದಾರೆ. ಚುನಾವಣೆ ಶಾಂತಿಯುತವಾಗಿ ನೆರವೇರಿತು. ಅರೆಸೇನಾಪಡೆ ಹಾಗೂ ಪೋಲೀಸ್ ಸಿಬ್ಬಂದಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.



ಪಿರಿಯಾಪಟ್ಟಣದ ಜೆಡಿಎಸ್ ಅಭ್ಯರ್ಥಿಯಾದ ಶಾಸಕ ಕೆ. ಮಹದೇವ್ ತಮ್ಮ ಕುಟುಂಬ ಸಮೇತರಾಗಿ ಮತದಾನ ಮಾಡಿದರು.



ಚಾಮರಾಜನಗರ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಮೈಸೂರಿನಲ್ಲಿ ತಮ್ಮ ಕುಟುಂಬ ಸಮೇತರಾಗಿ ಮತದಾನ ಮಾಡಿದರು.

ಹುಣಸೂರು ಕ್ಷೇತ್ರದಲ್ಲಿ ಶೇ.82.16 ಮತದಾನ

ಹುಣಸೂರು, ಮೇ 10– ಹುಣಸೂರು ತಾಲೂಕಿನಲ್ಲಿ ಶಾಂತಿಯುತವಾಗಿ ಒಟ್ಟು ಶೇ.82.16ರಷ್ಟು ಮತದಾನ ನಡೆದಿದೆ.

ಬೆಳಗ್ಗೆಯಿಂದಲೇ ಮಹಿಳೆಯರು ಮತ್ತು ಯುವ ಜನರು ಹೆಚ್ಚಿನ ಆಸಕ್ತಿಯಿಂದ ಮತದಾನದಲ್ಲಿ ತೊಡಗಿದ್ದು ಕಂಡುಬಂತು. ಬೆಳಗ್ಗೆ ಮತಗಟ್ಟೆ ಸಂಖ್ಯೆ 128ರಲ್ಲಿ ಶಾಸಕ ಹೆಚ್.ಪಿ. ಮಂಜುನಾಥ್ ತಮ್ಮ ಕುಟುಂಬ ಪರಿವಾರದೊಂದಿಗೆ ಬಂದು ಮತ ಚಲಾಯಿಸಿದರು. ಈ ಸಂದರ್ಭದಲ್ಲಿ ಪತ್ನಿ ಸುಪ್ರಿಯ ಮಂಜುನಾಥ್, ಪುತ್ರ ಪವನ್ ಮಂಜುನಾಥ್, ತಂದೆ ಹೆಚ್.ಎನ್. ಪ್ರೇಮ್‌ಕುಮಾರ್, ತಾಯಿ ರತ್ನ ಪ್ರೇಮ್‌ಕುಮಾರ್, ಸಹೋದರ ಡಾ.ಶ್ರೀನಾಥ್, ಇವರ ಪತ್ನಿ ಡಾ.ಸಾನವಿ ಮತ್ತು ಮಕ್ಕಳು ಸಹ ಮತ ಚಲಾಯಿಸಿದರು.

ಇದೇ ರೀತಿ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಮ್ಮ ಪತ್ನಿಯೊಂದಿಗೆ ನಗರದ ಕರಿಗೌಡ ಶಾಲೆಯ ಮತಗಟ್ಟೆ ಸಂಖ್ಯೆ–113ರಲ್ಲಿ ಮತ ಚಲಾಯಿಸಿದರು. ಬಿಜೆಪಿ ಪಕ್ಷದ ಅಭ್ಯರ್ಥಿ ದೇವರಳ್ಳಿ ಸೋಮಶೇಖರ್ ತಾಲೂಕಿನ ದೇವರಳ್ಳಿ ಮತಗಟ್ಟೆ ಸಂಖ್ಯೆ 162ರಲ್ಲಿ ತಮ್ಮ ಕುಟುಂಬದವರೊಂದಿಗೆ ಬಂದು ಮತ ಚಲಾಯಿಸಿದರು.

ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಡಾ.ಪುಷ್ಪ ಅಮರ್‌ನಾಥ್ ತಮ್ಮ ಪತಿ ಹೆಚ್.ಪಿ.ಅಮರ್‌ನಾಥ್‌ರವರೊಂದಿಗೆ ತಾಲೂಕಿನ ಕುಡ್ಲೂರು ಗ್ರಾಮದ ಮತಗಟ್ಟೆ ಸಂಖ್ಯೆ–209ರಲ್ಲಿ ಮತ ಚಲಾಯಿಸಿದರು. ಅಮೇರಿಕದ ಕ್ಯಾಲಿಫೋರ್ನಿಯದಲ್ಲಿ ವ್ಯಾಸಂಗ ಮಾಡುತ್ತಿರುವ ಶಾಸಕ ಹೆಚ್.ಪಿ.ಮಂಜುನಾಥ್‌ರವರ ಪುತ್ರಿ ಆಗಮಿಸಿ ನಗರದ ಹಾರಂಗಿ ಕಚೇರಿಯ ಮತಗಟ್ಟೆ 128ರಲ್ಲಿ ಮೊದಲ ಬಾರಿಗೆ ಮತದಾನದಲ್ಲಿ ಪಾಲ್ಗೊಂಡು ಮತ ಚಲಾಯಿಸಿದರು.

ಗಿರಿಜನರ ಪ್ರತಿಭಟನೆ: ಮಳೆ ಬಿದ್ದಿದ್ದ ಕಾರಣ ಕೃಷಿ ಚಟುವಟಿಕೆಗೆ ತೆರಳಿದ್ದ ರೈತಾಪಿ ಜನರು ಸಂಜೆ ನಂತರ ಮತದಾನಕ್ಕೆ ಆಗಮಿಸಿದರು. ತಾಲೂಕಿನ ನಾಗಪುರ ಗಿರಿಜನ ಆಶ್ರಮ ಶಾಲೆಯಲ್ಲಿ ನಿರ್ಮಿಸಿರುವ ಮತಗಟ್ಟೆ ಮುಂದೆ ಗಿರಿಜನ ಮತದಾರರು ಮತದಾನ ಮಾಡದೆ ಹೊರಗೆ ಕುಳಿತಿದ್ದರು ಯಾಕೆ ಎಂದು ಕೇಳಿದಾಗ ನಾವು ಈ ದಿನ ಕೆಲಸ ಬಿಟ್ಟು ಬಂದು ಕುಳಿತ್ತಿದ್ದೇವೆ. ಅಭ್ಯರ್ಥಿಗಳು ಬಂದು ನಮ್ಮನ್ನು ವಿಚಾರಿಸಿ ಮಾತನಾಡುವ ತನಕ ಮತದಾನದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಹಾಡಿಯ ಗಿರಿಜನರು ಪ್ರತಿಭಟನೆ ನಡೆಸಿದರು. ಮತದಾನ ಪ್ರಾರಂಭವಾಗುತ್ತಿದ್ದಂತೆ ತಾಲೂಕಿನ ಮತಗಟ್ಟೆ ಸಂಖ್ಯೆ 16, 100, 160, 164, 192, ಇವಿಎಂ ಮತಯಂತ್ರಗಳು ಕೈಕೊಟ್ಟು ಬದಲಿ ಯಂತ್ರಗಳನ್ನು ಅಳವಡಿಸಿ ಕೆಲ ಸಮಯದ ನಂತರ ಮತದಾನ ಪ್ರಾರಂಭಿಸಲಾಯಿತು. ಹಾಗೂ ತಾಲೂಕಿನ ಯಶೋದರಪುರ ಗ್ರಾಮದ ಮತಗಟ್ಟೆಯಲ್ಲಿ ಇವಿಎಂ ಮತಯಂತ್ರ ಕೆಟ್ಟಿತು. ಇಂಜಿನಿಯರ್‌ಗಳು ಬಂದು ರಿಪೇರಿ ಮಾಡಿದ ನಂತರ ಅರ್ಧ ಗಂಟೆ ನಂತರ ಮತದಾನ ಮುಂದುವರಿಯಿತು.



ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ತಮ್ಮ ಪತ್ನಿಯೊಂದಿಗೆ ನಗರದ ಕರೀಗೌಡ ಶಾಲೆಯಲ್ಲಿ ಮತ ಚಲಾಯಿಸಿದರು.



ಹುಣಸೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಬಿ. ಮಂಜುನಾಥ್ ತಮ್ಮ ಕುಟುಂಬ ಸದಸ್ಯರೊಂದಿಗೆ ಬುಧವಾರ ಮತ ಚಲಾಯಿಸಿದರು.

ನಂಜನಗೂಡು ಕ್ಷೇತ್ರದಲ್ಲಿ ಶೇ.80.67 ರಷ್ಟು ಮತ ಚಲಾವಣೆ



ನಂಜನಗೂಡು, ಮೇ 10– ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಶಾಂತಿಯುತವಾಗಿ ಶೇ.80.67 ರಷ್ಟು ಮತದಾನವಾಗಿದೆ. ಎಲ್ಲಾ 249 ಮತಗಟ್ಟೆಗಳಲ್ಲೂ ಕೂಡ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸದೆ ಶಾಂತಿಯುತವಾಗಿ ಮತದಾನ ಯಶಸ್ವಿಯಾಗಿ ನಡೆಯಿತು.

ಕ್ಷೇತ್ರದಾದ್ಯಂತ ಬೆಳಗ್ಗೆ 9 ಗಂಟೆಗೆ ಶೇ.9 ರಷ್ಟು ಮತದಾನವಾಗಿತ್ತು. 11 ಗಂಟೆ ವೇಳೆಗೆ ರಂಗೇರಿದ ಚುನಾವಣೆ ಶೇ.23 ರಷ್ಟು ಮತದಾನವಾಗಿತ್ತು. 12 ಗಂಟೆ ವೇಳೆಗೆ ಶೇ.40ಕ್ಕೆ ಏರಿಕೆಯಾಯಿತು. ಮಧ್ಯಾಹ್ನ 3ರ ವೇಳೆಗೆ ಸ್ವಲ್ಪ ಚುರುಕುಗೊಂಡ ಮತದಾನ ಶೇ.58 ರಷ್ಟು ತಲುಪಿತು. ಸಂಜೆ 5 ಗಂಟೆಯ ವೇಳೆಗೆ ಶೇ.74 ರಷ್ಟು ಮತದಾನವಾಗಿತ್ತು. ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

6 ಬೂತ್‌ಗಳಲ್ಲಿ ಅರ್ಧ ಗಂಟೆ ತಡ ಮತದಾನ: ತಾಲೂಕಿನಲ್ಲಿ 6 ಮತ ಕೇಂದ್ರಗಳಲ್ಲಿ ವಿವಿ ಪ್ಯಾಟ್ ಮೆಷಿನ್‌ಗಳ ತಾಂತ್ರಿಕ ತೊಂದರೆಯಿಂದಾಗಿ ಅರ್ಧ ಗಂಟೆ ತಡವಾಗಿ ಮತದಾನ ಆರಂಭವಾಯಿತು. ಉಳಿದಂತೆ ಇತರ ಕಡೆಗಳಲ್ಲಿ ಬೆಳಗ್ಗೆನಿಂದಲೇ ಪ್ರಾರಂಭಗೊಂಡಿತು. ಕೆಲವೆಡೆಯಲ್ಲಿ ನಿಗದಿತ ಸಮಯಕ್ಕೆ ಮತದಾನ ಅಂತ್ಯಗೊಂಡರೆ ಕೆಲವೆಡೆ ರಾತ್ರಿ 7 ಗಂಟೆಯವರೆಗೂ ಮತದಾನ ಮಾಡಲು ಅವಕಾಶ ಕಲ್ಪಿಸಿಕೊಡಲಾಗಿತ್ತು.

ಸಖಿ ಮತ ಕೇಂದ್ರ: ತಾಲೂಕಿನ ಶಿರಮಳ್ಳಿ, ಕುರಹಟ್ಟಿ, ನೇರಳೆ, ಕಸುವಿನಹಳ್ಳಿ, ಹಲ್ಲರೆ ಗ್ರಾಮದ ಶಾಲೆಯಲ್ಲಿ ಸಖಿ ಮತ ಕೇಂದ್ರಗಳನ್ನು ಸ್ಥಾಪಿಸಲಾಗಿತ್ತು. ಮತಕೇಂದ್ರದಲ್ಲಿ ಪಿಂಕ್ ಕಲರ್ ಬಣ್ಣ ಬಳಿದು ಅಲಂಕಾರ ಮಾಡಲಾಗಿತ್ತು. ಪಿಂಕ್ ಬಣ್ಣದ ಸೀರೆಯನ್ನು ಉಟ್ಟಂತಹ ಮಹಿಳಾ ಚುನಾವಣಾ ಸಿಬ್ಬಂದಿ ಮತದಾರರಿಗೆ ಗುಲಾಬಿ ಹೂಗಳನ್ನು ನೀಡಿ ಸ್ವಾಗತ ಕೋರಿ ಮಾದರಿ ಮತದಾನ ಮಾಡಿಸಿದ್ದು ವಿಶೇಷವಾಗಿತ್ತು. ತಾಲೂಕಿನ ಚಿನ್ನದ ಗುಡಿಹುಂಡಿ ಗ್ರಾಮದ ಮತಗಟ್ಟೆಯಲ್ಲಿ 73 ವರ್ಷದ ತಿಮ್ಮಯ್ಯ ಮತಗಟ್ಟೆಗೆ ತೆರಳಿ ತಮ್ಮ ಹಕ್ಕು ಚಲಾಯಿಸಿದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಮ್ಮ ಹುಟ್ಟೂರಾದ ಕಳಲೆ ಗ್ರಾಮದ ಸರ್ಕಾರಿ ಶಾಲೆಗೆ ತೆರಳಿ ಮತಚಲಾವಣೆ ಮಾಡುವ ಮೂಲಕ ತಮ್ಮ ಹಕ್ಕು ಚಲಾಯಿಸಿದರು.

ಸರಗೂರಲ್ಲಿ ಶಾಂತಿಯುತ ಮತದಾನ

ಸರಗೂರು, ಮೇ 10– ತಾಲೂಕಿನಾದ್ಯಂತ ಬುಧವಾರ ಶಾಂತಿಯುತವಾಗಿ ಮತದಾನ ನಡೆಯಿತು.

ಮಂಗಳವಾರ ರಾತ್ರಿ ಉತ್ತಮ ಮಳೆಯಾಗಿದ್ದರೂ ಮತದಾರರು ತಮ್ಮ ಕೃಷಿಕ ಕೆಲಸಗಳಿಗೆ ವಿರಾಮ ನೀಡಿ, ಮತ ಚಲಾಯಿಸಲು ಮತಗಟ್ಟೆಗಳತ್ತ ಮುಖ ಮಾಡಿದ್ದರು. ಶುರುವಿನಲ್ಲಿ ನಿಧಾನಗತಿಯಲ್ಲಿ ನಡೆದ ಮತದಾನವು ಸಂಜೆ 3.30ರ ನಂತರ ವೇಗ ನಡೆಯಿತು.

ಕೆಲ ಮತಗಟ್ಟೆಗಳ ಮುಂಭಾಗದಲ್ಲಿ ಆಶಾ ಕಾರ್ಯಕರ್ತೆಯರು ಮತದಾರರಿಗೆ ಸ್ಯಾನಿಟೈಸರ್ ಹಚ್ಚುವುದು. ಸ್ಕ್ರೀನಿಂಗ್ ಮಾಡುತ್ತಿದ್ದರು. ಇದಲ್ಲದೆ ವೃದ್ಧರು, ವಿಕಲಚೇನತರ ಮತದಾನಕ್ಕೆ ಅವಕಾಶ ಮಾಡಿಕೊಡಲಾಗುತ್ತಿತ್ತು. ವಿಕಲಚೇನತರನ್ನು ವ್ಹೀಲ್ ಚೇರ್‌ಗಳ ಸಹಾಯದಿಂದ ಕರೆತರಲಾಗುತ್ತಿತ್ತು.

ಮತಯಂತ್ರಗಳು ನಿಧಾನಗತಿಯಲ್ಲಿದ್ದರಿಂದ ಮತದಾರರು ಮತದಾನ ಮಾಡಲು ತಡವಾಗುತ್ತಿತ್ತು. ಪಟ್ಟಣದ ಜೆಎಸ್‌ಎಸ್ ಶಾಲೆಯ 194ರ ಮತಗಟ್ಟೆಯಲ್ಲಿನ ಮತಯಂತ್ರ ಒಂದೂವರೆ ತಾಸು ಕೆಟ್ಟ ಹಿನ್ನೆಲೆಯಲ್ಲಿ ಮತದಾರರು ಕೆಲ ಸಮಯ ಕಾಯಬೇಕಿತ್ತು. ನಂತರ ಬೇರೆ ಮತಯಂತ್ರ ಅಳವಡಿಸಿ ಮತದಾನ ಮಾಡಲಾಯಿತು.

ಸರಗೂರು ಪಟ್ಟಣದ ಜೆಎಸ್‌ಎಸ್ ವಿದ್ಯಾ ಸಂಸ್ಥೆ, ಹಂಚೀಪುರ ಗ್ರಾಪಂ ವ್ಯಾಪ್ತಿಯ ಹಳೆಯೂರು ಗ್ರಾಮದಲ್ಲಿ ಸಖಿ ಮತಗಟ್ಟೆ ತೆರೆಯಲಾಗಿತ್ತು. ಯಾವುದೇ ಅಹಿತಕರ ಘಟನೆ ಜರುಗದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿತ್ತು. ಇದಲ್ಲದೇ ಪೊಲೀಸ್ ಸಿಬ್ಬಂದಿ ಸೂಕ್ತ ಬಂದೋಬಸ್ತ್ ವಹಿಸಿದ್ದು, ಶಾಂತಿಯುತ ಮತದಾನ ನಡೆಯಿತು.

ಸರಗೂರು ಪಟ್ಟಣದಲ್ಲಿ ಮತದಾರರಿಗೆ 10 ಮತಗಟ್ಟೆ ತೆರೆಯಲಾಗಿತ್ತು. ಈ ಪೈಕಿ 9751 ಮತದಾರರಿದ್ದು, 7346 ಮತ ಚಲಾವಣೆಯಾಗಿವೆ.

ಬೆಟ್ಟದಪುರ ಬಳಿ ಮತದಾನ ವೇಳೆ ಕಾಂಗ್ರೆಸ್, ಜೆಡಿಎಸ್ ಕಾರ್ಯಕರ್ತರ ನಡುವೆ ಘರ್ಷಣೆ

ಕೈ–ಕೈ ಮಿಲಾಯಿಸಲು ಮುಂದಾಗಿದ್ದ ಗುಂಪಿನ ಮೇಲೆ ಲಘು ಲಾಠಿ ಪ್ರಹಾರ, ಶಾಂತಿಯುತ ಮತದಾನ

ಪಿರಿಯಾಪಟ್ಟಣ, ಮೇ 10– ತಾಲೂಕಿನ ಬೆಟ್ಟದಪುರದ ಸುರಹಳ್ಳಿ ಗ್ರಾಮದ ಮತಗಟ್ಟೆ 9ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಘರ್ಷಣೆ ಸಂಭವಿಸಿದ ಹಿನ್ನೆಲೆಯಲ್ಲಿ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿ ಪರಿಸ್ಥಿತಿ ನಿಯಂತ್ರಿಸಿದರು.

ಮತಗಟ್ಟೆ ಬಳಿ ಎರಡು ಪಕ್ಷಗಳ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು ಕೈ–ಕೈ ಮಿಲಾಯಿಸುವ ಹಂತ ತಲುಪಿದಾಗ, ಪೊಲೀಸರು ಲಘು ಲಾಟಿ ಪ್ರಹಾರ ನಡೆಸಿ ಪರಿಸ್ಥಿತಿ ಹತೋಟಿಗೆ ತಂದರು. ಈ ಸಂದರ್ಭದಲ್ಲಿ ಪರಿಸ್ಥಿತಿ ಕೆಲಕಾಲ ಉದ್ವಿಗ್ನಗೊಂಡಿತ್ತು.

ಸ್ಥಳಕ್ಕೆ ಬೈಲುಕೊಪ್ಪ ವೃತ್ತದ ವೃತ್ತನಿರೀಕ್ಷಕ ಪ್ರಕಾಶ್, ಬೆಟ್ಟದಪುರ ಠಾಣೆಯ ಠಾಣಾಧಿಕಾರಿ ಪ್ರಕಾಶ್ ಎತ್ತಿನಮನಿ ಲಘು ಲಾಠಿ ಬೀಸಿ ಕಾರ್ಯಕರ್ತರನ್ನು ಚದುರಿಸಿದರು. ನಂತರ ಮತಗಟ್ಟೆಗೆ ಹೆಚ್ಚಿನ ಭದ್ರತೆ ಒದಗಿಸಿ ಶಾಂತಿಯುತ ಮತದಾನಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿದ್ದಾರೆ.

ಸುರಗಳ್ಳಿ ಗ್ರಾಮದಲ್ಲಿ ನಡೆದ ಜೆಡಿಎಸ್, ಕಾಂಗ್ರೆಸ್ ಕಾರ್ಯಕರ್ತರ ಗಲಾಟೆ ಸ್ಥಳಕ್ಕೆ ಶಾಸಕ ಕೆ.ಮಹದೇವ ಭೇಟಿ ನೀಡಿ ಜೆಡಿಎಸ್ ಕಾರ್ಯಕರ್ತರಿಗೆ ಧೈರ್ಯ ಹೇಳಿ ಯಾವುದೇ ತರಹದ ಗಲಾಟೆಗಳನ್ನು ಮಾಡಿಕೊಳ್ಳದೆ ತಾವುಗಳು ಒಂದೇ ಗ್ರಾಮದ ಜನರು ಸ್ನೇಹಿತರಂತಿರಬೇಕು. ಚುನಾವಣೆ ಬರುತ್ತದೆ, ಹೋಗುತ್ತದೆ. ಗ್ರಾಮದಲ್ಲಿ ಶಾಂತಿ ನೆಮ್ಮದಿಯಿಂದ ಇರಬೇಕೆಂದು ಅವರು ಕಾರ್ಯಕರ್ತರಿಗೆ ತಿಳಿಸಿದರು.

ಬೆಟ್ಟದಪುರದಲ್ಲಿ ಒಟ್ಟು ಐದು ಮತಗಟ್ಟೆಗಳನ್ನು ತೆರೆಯಲಾಗಿದ್ದು ಒಟ್ಟು 5736 ಮತದಾರರ ಪೈಕಿ 4142 ಜನ ಮತದಾರರು ಮತ ಚಲಾಯಿಸಿದರು. ಒಟ್ಟು ಶೇ.72 ರಷ್ಟು ಮತದಾನವಾಗಿದೆ. ಕಿತ್ತೂರು ಗ್ರಾಮದ ಮತಗಟ್ಟೆ ಸಂಖ್ಯೆ 50 ರಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ವೆಂಕಟೇಶ್ ತಮ್ಮ ಪತ್ನಿ ಭಾರತಿ ವೆಂಕಟೇಶ್ ಹಾಗೂ ಪುತ್ರ ನಿತಿನ್ ವೆಂಕಟೇಶ್ ಜೊತೆ ಮತ ಚಲಾಯಿಸಿದರು.

ಹಲಗನಹಳ್ಳಿ ಗ್ರಾಮದ ಮತಗಟ್ಟೆ ಸಂಖ್ಯೆ 7, 8 ರಲ್ಲಿ ಸಂಜೆ ಮತದಾನ ಮಾಡಲು ಸಾಲುಕಟ್ಟಿ ನಿಂತಿರುವುದು ಕಂಡುಬಂತು. ಈಚೂರು ಗ್ರಾಮದ ಮತಗಟ್ಟೆ ಸಂಖ್ಯೆ 87 ರಲ್ಲಿ 18 ವರ್ಷ ತುಂಬಿದ ಯುವಕ ಶರಣ್ ಇ.ಎನ್. ಮತದಾನ ಮಾಡಿ ಮಾತನಾಡಿ, ಸರ್ಕಾರವು 18 ವರ್ಷ ತುಂಬಿದ ಎಲ್ಲರಿಗೂ ಮತದಾನ ಮಾಡಲು ಅವಕಾಶ ಕೊಟ್ಟಿದೆ. ಅದು ನಮ್ಮ ಹಕ್ಕು ಪ್ರತಿಯೊಬ್ಬರೂ ಮತದಾನದಲ್ಲಿ ಪಾಲ್ಗೊಳ್ಳಬೇಕು. ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡಿ ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕು. ಮತದಾನ ಮಾಡಿರುವುದು ನನಗೂ ಖುಷಿ ತಂದಿದೆ ಎಂದರು. ಕಿತ್ತೂರು ಗ್ರಾಮದ ಜಿಪಂ ಸದಸ್ಯ ಕೆ.ಎಸ್.ಮಂಜುನಾಥ್ ಮತದಾನದ ಹಕ್ಕು ಚಲಾಯಿಸಿ ಮಾತನಾಡಿ, ಈ ಬಾರಿ ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ ಗೆಲ್ಲುವ ವಿಶ್ವಾಸವಿದೆ ಎಂದರು.

ಮಾಜಿ ಶಾಸಕ ಕೆ ವೆಂಕಟೇಶ್ ಅವರು ಬೆಟ್ಟದಪುರಕ್ಕೆ ಭೇಟಿ ನೀಡಿ ಕಾರ್ಯಕರ್ತರೊಂದಿಗೆ ಮತದಾನದ ಬಗ್ಗೆ ಚರ್ಚೆ ನಡೆಸಿ ಗೆಲುವು ನಮ್ಮದೇ ನಾವು ಸುಮಾರು 20 ಸಾವಿರ ಮತಗಳಿಂದ ಗೆಲ್ಲುವುದು ಗ್ಯಾರಂಟಿ ಎಂದು ತಿಳಿಸಿದರು.

ಮತದಾರರು ಮಾತನಾಡಿ, 1300 ಮತದಾರರು ಇರುವ ಕಡೆ ಒಂದು ಬೂತು ನೀಡಿರುವುದರಿಂದ ಮತದಾನ ನಿಧಾನಗತಿಯಲ್ಲಿ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಮತಯಂತ್ರಗಳನ್ನು ನೀಡಬೇಕೆಂದು ಆಗ್ರಹಿಸಿದರು. ಹಲವು ಯುವತಿಯರು ಇದೇ ಮೊದಲ ಬಾರಿಗೆ ಮತದಾನ ಮಾಡುತ್ತಿದ್ದರಿಂದ ನಮಗೆ ಸಂತೋಷ ಹಾಗೂ ನಮ್ಮ ಹಕ್ಕನ್ನು ಚಲಾಯಿಸಲು ಇದು ಪವಿತ್ರವಾದ ದಿನವಾಗಿದೆ ಹಾಗೂ ಉತ್ತಮವಾದ ನಾಯಕನನ್ನು ದೇಶ ಕಟ್ಟುವ ನಾಯಕನನ್ನು ಆಯ್ಕೆ ಮಾಡಲು ನಮಗೆ ಹಕ್ಕು ನೀಡಿರುವುದು ಸಂತೋಷವಾಗಿದೆ ಎಂದರು.



ಸುರಹಳ್ಳಿ ಮತಗಟ್ಟೆ 9ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಘರ್ಷಣೆ ಸಂಭವಿಸಿದ ಹಿನ್ನೆಲೆಯಲ್ಲಿ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು.



ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಗ್ರಾಮದಲ್ಲಿ ಸಖಿ ಮತಗಟ್ಟೆಯಲ್ಲಿ ಅತಿ ಹೆಚ್ಚು ಮಹಿಳೆಯರು ಮತ ಚಲಾಯಿಸಲು ಸರದಿ ಸಾಲಿನಲ್ಲಿ ನಿಂತಿರುವುದು.

ಹೆಚ್.ಡಿ.ಕೋಟೆ: ಶೇ.79.85 ರಷ್ಟು ಮತದಾನ





ಅನಿಲ್ ಚಿಕ್ಕಮಾದು ಕೆ.ಎಂ.ಕೃಷ್ಣನಾಯಕ ಜಯಪ್ರಕಾಶ್ ಚಿಕ್ಕಣ್ಣ

ಹೆಚ್.ಡಿ.ಕೋಟೆ, ಮೇ 10– ಹೆಗ್ಗಡದೇವನಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದೆ ಶಾಂತಿಯುತವಾಗಿ ಮತದಾನ ನಡೆಯಿತು.

ಕ್ಷೇತ್ರದ 282 ಮತಗಟ್ಟೆಗಳಲ್ಲಿ ಬೆಳಗ್ಗೆ 7 ರಿಂದ ಸಂಜೆ 6 ತನಕ ಮತದಾನ ಶೇ.79.85 ರಷ್ಟು ನಡೆಯಿತು.

ತಾಲ್ಲೂಕಿನಲ್ಲಿ ಕೆಲವು ಕಡೆ ವಿವಿ ಪ್ಯಾಟ್ ಸಮಸ್ಯೆಯಿಂದಾಗಿ, ಚುನಾವಣಾ ಅಧಿಕಾರಿಗಳು ಅದನ್ನ ಬದಲಾವಣೆ ಮಾಡಿಮತದಾನ ನಡೆಯಲು ಅನುವು ಮಾಡಿ ಕೊಡಲಾಯಿತು.

ಚುನಾವಣಾಧಿಕಾರಿ ಕುಮುದ ಶರತ್, ಸಹಾಯಕ ಚುನಾವಣಾಧಿಕಾರಿ ಪಿ.ಎಸ್. ಮಹೇಶ್, ಇಓಗಳಾದ ಜೆರಾಲ್ಡ್ ರಾಜೇಶ, ಸುಷ್ಮಾ ಹಾಗೂ ತಾಲೂಕು ಆಡಳಿತ ಹೆಚ್.ಡಿ. ಕೋಟೆ ಹಾಗೂ ಸರಗೂರು ಪಟ್ಟಣ ಸೇರಿದಂತೆ ಕ್ಷೇತ್ರದ 39 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮತದಾನದ ಬಗ್ಗೆ ವಿವಿಧ ಭಿತ್ತಿಪತ್ರ, ಗೋಡೆ ಬರಹ ಮೂಲಕ ಮತದಾನದ ಬಗ್ಗೆ ಜಾಗೃತಿ ಮೂಡಿಸಿದ್ದರು.

ಮತದಾರರನ್ನು ಆಕರ್ಷಿಸಲು ಬಸವನಗಿರಿ ಹಾಡಿಯಲ್ಲಿ ಬುಡಕಟ್ಟು ಸಾಂಪ್ರದಾಯಿಕ ಶೈಲಿಯಲ್ಲಿ ಮತ ಕೇಂದ್ರ ಸಿಂಗರಿಸಲಾಗಿತ್ತು, ಅಂತರಸಂತೆ ಮತ್ತು ಕೋಳಗಾಲ ಗ್ರಾಮದಲ್ಲಿ ಪಿಂಕ್ ಮತ ಕೇಂದ್ರ ತೆರೆಯಲಾಗಿತ್ತು. ಪಟ್ಟಣದ ಬಾಲಕಿಯರ ಪ್ರೌಢಶಾಲೆಯಲ್ಲಿ ಯುವ ಮತ ಕೇಂದ್ರ ಹಾಗೂ ಪದವಿ ಪೂರ್ವ ಕಾಲೇಜಿನಲ್ಲಿ ವಿಶೇಷ ಚೇತನ ಮತ ಕೇಂದ್ರ ತೆರಯಲಾಗಿತ್ತು.

ವಯೋವೃದ್ಧರು, ಅಸಹಾಯಕರು, ಮತಗಟ್ಟೆಯ ಬಳಿ ಬಂದರೆ ಅಂತಹವರಿಗೆ ಆದ್ಯತೆಯ ಮೂಲಕ ಮತ ಚಲಾಯಿಸಲು ಅವಕಾಶ ನೀಡಲಾಗಿತ್ತು, ವಿಕಲಚೇತನರು ಮತ್ತು ವಯೋವೃದ್ಧರಿಗೆ ಗಾಲಿ ಕುರ್ಚಿಯ ವ್ಯವಸ್ಥೆ ಮಾಡಲಾಗಿತ್ತು, ಪ್ರತಿ ಮತಗಟ್ಟೆ ಕೇಂದ್ರದಲ್ಲಿ ಮತದಾರರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡ ಲಾಗಿತ್ತು. ಬೆಳಿಗ್ಗೆ ಪ್ರಾರಂಭದಲ್ಲಿ ಮತದಾನ ನಿಧಾನಗತಿಯಲ್ಲಿ ಸಾಗಿತು, ಮಧ್ಯಾಹ್ನದ ನಂತರ ಬಿರುಸುಗೊಂಡಿತು.




ಎಂ.ಶಿವಣ್ಣ ಬೀಚನಹಳ್ಳಿ ಚಿಕ್ಕಣ್ಣ

ಅಭ್ಯರ್ಥಿಗಳಿಂದ ಮತ ಚಲಾವಣೆ: ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಾಸಕ ಅನಿಲ್ ಚಿಕ್ಕಮಾದು ಹುಣಸೂರು ತಾಲೂಕಿನ ರಾಮೇನಹಳ್ಳಿಯಲ್ಲಿ ಮತ ಚಲಾಯಿಸಿದರೆ, ಜೆಡಿಎಸ್ ಅಭ್ಯರ್ಥಿ ಜಯಪ್ರಕಾಶ್ ಚಿಕ್ಕಣ್ಣ ಬೀಚನಹಳ್ಳಿ ಗ್ರಾಮದಲ್ಲಿ ಮತ ಚಲಾಯಿಸಿದರು. ಬಿಜೆಪಿ ಪಕ್ಷದ ಅಭ್ಯರ್ಥಿ ಕೆ.ಎಂ.ಕೃಷ್ಣನಾಯಕ ಕುಣಿಗಲ್ ತಾಲೂಕು ಕಂಪ್ಲಾಪುರ ಗ್ರಾಮದಲ್ಲಿ ಮತ ಚಲಾಯಿಸಿದರು.

ಮಾಜಿ ಸಚಿವರು ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಪಟ್ಟಣದ ಕೃಷ್ಣಾಪುರ ಗ್ರಾಮದಲ್ಲಿ, ಕುಟುಂಬ ಸಮೇತ ಮತ ಚಲಾಯಿಸಿದರು. ಮಾಜಿ ಶಾಸಕ ಚಿಕ್ಕಣ್ಣ ಅವರ ಕುಟುಂಬದ ಜೊತೆ ಬೀಚನಹಳ್ಳಿ ಗ್ರಾಮದಲ್ಲಿ ಮತ ಚಲಾಯಿಸಿದರು.

ಕ್ಷೇತ್ರದಲ್ಲಿ ಒಟ್ಟು 2.25,787 ಮತದಾರರು ಇದ್ದು ಪುರುಷರು 1.13.263, ಮಹಿಳಾ 1.12.512 ಮತದಾರರು ಇದ್ದಾರೆ. ತಾಲೂಕಿನಲ್ಲಿ 56 ಸೂಕ್ಷ್ಮ ಮತಗಟ್ಟೆಗಳಿದ್ದು, 141 ಮತಗಟ್ಟೆಗಳಿಗೆ ವೆಬ್ ಕಾಸ್ಟಿಂಗ್ ಅಳವಡಿಸಲಾಗಿತ್ತು. ಒಟ್ಟು 1,252 ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಪೊಲೀಸರು ಮತ್ತು ಅರೆಸೇನಾ ಪಡೆ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದ್ದು, ಅತಿ ಸೂಕ್ಷ್ಮ ಮತಗಟ್ಟೆಗಳಿಗೆ ಹೆಚ್ಚಿನ ಸೇನಾ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿತ್ತು.


ಭಾರತೀಯ ಜನತಾ ಪಾರ್ಟಿ
ಕರ್ನಾಟಕ ವಿಧಾನಸಭಾ ಚುನಾವಣೆ – 2023
ಅಭಿನಂದನೆಗಳು
ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ
ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟ ಪಕ್ಷದ ಎಲ್ಲಾ
ಮುಖಂಡರು ಹಾಗೂ ಚುನಾವಣೆಯಲ್ಲಿ ನನ್ನ ಪರ ಮತಹಾಕಿದ
ಕ್ಷೇತ್ರದ ಮತದಾರ ಬಂಧುಗಳು, ಶ್ರಮಿಸಿದ ಕಾರ್ಯಕರ್ತರು,
ಅಭಿಮಾನಿಗಳು, ಹಿತೈಷಿಗಳು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ
ನನಗೆ ಸಹಕರಿಸಿದ ಎಲ್ಲರಿಗೂ ನನ್ನ ಗೌರವ ಪೂರಕ
ವಂದನೆ-ಅಭಿವಂದನೆಗಳು
ಎಲ್. ನಾಗೇಂದ್ರ
ಚಾಮರಾಜ ವಿಧಾನಸಭಾ ಕ್ಷೇತ್ರ


ವಂದನೆ–ಅಭಿವಂದನೆ
ಭಾರತೀಯ ಜನತಾ ಪಾರ್ಟಿ
ಕರ್ನಾಟಕ ವಿಧಾನಸಭಾ ಚುನಾವಣೆ – 2023
ವರುಣ ಹಾಗೂ ಚಾಮರಾಜನಗರ
ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು
ಅವಕಾಶ ಮಾಡಿಕೊಟ್ಟ ಪಕ್ಷದ ಎಲ್ಲಾ ಮುಖಂಡರು
ಹಾಗೂ ಎರಡೂ ಕ್ಷೇತ್ರಗಳ ಮತಬಾಂಧವರು,
ಕಾರ್ಯಕರ್ತರು, ಅಭಿಮಾನಿಗಳು
ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ನನ್ನ ಪರ ಶ್ರಮಿಸಿದ
ಎಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆ–ಅಭಿವಂದನೆಗಳು
ವಿ. ಸೋಮಣ್ಣ
ವರುಣ ಮತ್ತು ಚಾಮರಾಜನಗರ ವಿಧಾನಸಭಾ ಕ್ಷೇತ್ರ